ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ

Blog :janashakthi.wordpress.com e-mail : js_weekly@yahoo.com

ಸಂಪುಟ 5 ಸಂಚಿಕೆ 45

ನವೆಂಬರ್ 6, 2011


ರೂ. 5/-


ಪುಟ 16



3rd-4th June 2010 - Bangalore, India


ಕರ್ನಾಟಕ ಬಿಜೆಪಿ : ವಿನಾಶಕಾರಿ ಗುಜರಾತ್ ಮಾದರಿ!





ಅಡ್ವಾಣಿಯವರೇ ರಥಯಾತ್ರೆ ಯಾರ ವಿರುದ್ಧ ?

ಮಹಾಶಕ್ತಿಯಾಗಲು ಕಾಯುತ್ತಿರುವ ದೇಶ ?





ಹುರಿದುಂಬಿ ಉಕ್ಕುತಿವೆ ಹಗರಣಗಳು ಅಶೋಕ, ನಿರಾಣಿ...

ಸ್ವಪ್ನಲೋಕದ ವಿಹಾರಿಗಳು !

ನವೆಂಬರ್ 8 : ಕಾರ್ಮಿಕ ವರ್ಗದ ಜೈಲ್ ಭರೋ

ಜನಶಕ್ತಿ
ಕನ್ನಡ ವಾರಪತ್ರಿಕೆ

'ಭ್ರಷ್ಟಾಚಾರದ ವಿರುದ್ಧ ಅಡ್ವಾಣಿಯವರ ಯಾತ್ರೆ ಯಾರ ವಿರುದ್ಧ'? ಪತ್ರಿಕಾಗೋಷ್ಟಿಯಲ್ಲಿ ಸಿಪಿಐ(ಎಂ) ತೀಕ್ಷ್ಣಪ್ರಶ್ನೆ


ಹಗರಣಗಳ ಸರಮಾಲೆಯನ್ನೇ ಹೊತ್ತು ನಿಂತಿರುವ ಬಿಜೆಪಿ ಆಡಳಿತ ಇರುವ ಕರ್ನಾಟಕ ರಾಜ್ಯದಲ್ಲಿ ಎಲ್.ಕೆ. ಆಡ್ವಾಣಿಯವರು ನಡೆಸುತ್ತಿರುವ ಭ್ರಷ್ಟಾಚಾರ ವಿರೋಧಿ ಯಾತ್ರೆ ಯಾರ ವಿರುದ್ಧ ಎಂದು ಜನತೆ ಪ್ರಶ್ನಿಸಬೇಕಾಗಿದೆ. ಈ ಹಿನ್ನೆಲೆಯಲ್ಲಿ ಅಡ್ವಾಣಿಯವರ ಯಾತ್ರೆಗೆ ಯಾವುದೇ ಮಹತ್ವ ಇಲ್ಲ ಎಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಅಭಿಪ್ರಾಯ ಪಡುತ್ತದೆ.

ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ, ಮಾಜಿ ಸಚಿವರಾದ ಕಟ್ಟಾಸುಬ್ರಮಣ್ಯ ನಾಯ್ಡು, ಕೃಷ್ಣಯ್ಯ ಶೆಟ್ಟಿಯವರು ಜೈಲು ಸೇರಿದ ನಂತರವೂ ಅವರನ್ನು ಪಕ್ಷದಿಂದ ಉಚ್ಚಾಟಿಸುವುದಿರಲಿ, ಅಮಾನತ್ತಿನಲ್ಲಿಡುವ ಧೈರ್ಯವನ್ನು ಬಿಜೆಪಿ ರಾಜ್ಯ ಮುಖಂಡತ್ವವಾಗಲೀ, ಅಖಿಲ ಭಾರತ ಮುಂಡತ್ವವಾಗಲೀ ಮಾಡಲಿಲ್ಲ. ಲೋಕಾಯುಕ್ತ ವರದಿಯಲ್ಲಿ ಆರೋಪಿತರಾಗಿರುವ ವಿ. ಸೋಮಣ್ಣ, ಭೂ ನಿವೇಶನ ಕೊಡುವುದಾಗಿ ವಂಚಿಸಿದ ಆರೋಪ ಹೊತ್ತಿರುವ ಸಿ.ಪಿ. ಯೋಗೇಶ್ವರ, ಡಿನೋಟಿಫಿಕೇಶನ್ ಹಗರಣದಲ್ಲಿ ಲೋಕಾಯುಕ್ತ ಕೋರ್ಟನಿಂದ ತನಿಖೆಗೆ ಆದೇಶಿಸಲ್ಪಟ್ಟಿರುವ ಆರ್.ಅಶೋಕ್, ಮುರುಗೇಶ್ ನಿರಾಣಿ ಇನ್ನೂ ಸಚಿವ ಸ್ಥಾನದಲ್ಲಿ ಮುಂದುವರಿಯುತ್ತಿದ್ದಾರೆ. ಸಿಬಿಐ ನಿಂದ ಬಂಧನಕ್ಕೆ ಒಳಗಾಗಿರುವ ಜರ್ನಾರ್ಧನ ರೆಡ್ಡಿ ಇನ್ನೂ ಬಿಜೆಪಿ ಶಾಸಕರಾಗಿ ಮುಂದುವರೆಯುತ್ತಿದ್ದಾರೆ. ಇಂತಹ ಅಸಭ್ಯ ಸನ್ನಿವೇಶದಲ್ಲಿ ನಡೆಯುತ್ತಿರುವ ಅಡ್ವಾಣಿಯವರ ಯಾತ್ರೆ ಅಪಹಾಸ್ಯಕ್ಕೆ ಈಡಾಗಲಿದೆ.

ಇನ್ನು ವಿದೇಶದಲ್ಲಿರುವ ಕಪ್ಪು ಹಣವನ್ನು ಬಯಲಿಗೆಳೆಯಬೇಕು ಎನ್ನುವ ಅಡ್ವಾಣಿಯವರ ಒತ್ತಾಯ ಸರಿಯಾದುದು. ಆದರೆ, ಯಡಿಯೂರಪ್ಪನವರು ಲೋಕಾಯುಕ್ತ ವರದಿ ಬರುವ ಕೆಲವೇ ದಿನಗಳ ಮೊದಲು ತನ್ನ ಮಕ್ಕಳೊಂದಿಗೆ ಮಾರಿಷಸ್‌ಗೆ ಏಕೆ ಹೋಗಿದ್ದರು ಎಂದು ಬಿಜೆಪಿ ಪ್ರಶ್ನಿಸಿದೆಯೇ? ಚಿನ್ನ ಮತ್ತು ವಜ್ರ ಖಚಿತ ಕುರ್ಚಿಯನ್ನು ಹೊಂದಿರುವ ಗಾಲಿ ಜರ್ನಾದನ ರೆಡ್ಡಿ ಮತ್ತು ಬಳಗದವರು ವಿದೇಶಿ ಬ್ಯಾಂಕುಗಳಲ್ಲಿ ಎಷ್ಟು ಕಪ್ಪು ಹಣ ಇಟ್ಟಿದ್ದಾರೆಂಬುದನ್ನು ಅಡ್ವಾಣಿ ಪ್ರಶ್ನಿಸಿದ್ದಾರೆಯೇ?

ಬಿಜೆಪಿಯ ಅನೇಕ ಮುಖಂಡರು ಕಪ್ಪು ಹಣದ ಒಡೆಯರಾಗಿದ್ದಾರೆ. ಅದನ್ನು ತಡೆಯಲು ಅಡ್ವಾಣಿಯವರು ಮಾಡಿದ ಪ್ರಯತ್ನದ ಬಗ್ಗೆ ಸ್ಪಷ್ಟೀಕರಣ ನೀಡಬೇಕು. ಅಲ್ಲದೆ, ಅಡ್ವಾಣಿಯವರು 6 ವರ್ಷಗಳ ಕಾಲ ಗೃಹಮಂತ್ರಿಯಾಗಿದ್ದ ಅವಧಿಯಲ್ಲಿ ಕಪ್ಪು ಹಣ ತರಿಸಲು ಏಕೆ ಪ್ರಯತ್ನ ಮಾಡಿಲ್ಲ ಎಂದು ಸಿಪಿಐ(ಎಂ) ಪ್ರಶ್ನಿಸುತ್ತದೆ.

ಲೋಕಾಯುಕ್ತ ವರದಿಯ ನಂತರ ಯಡಿಯೂರಪ್ಪ ಮಂತ್ರಿಮಂಡಲ ರಾಜೀನಾಮೆ ನೀಡಿದ ನಂತರವೂ ವರಮಹಾಲಕ್ಷ್ಮೀ ಹಬ್ಬದ ಸಂದರ್ಭದಲ್ಲಿ ಬಳ್ಳಾರಿಗೆ ಬಂದ ಬಿಜೆಪಿಯ ಅಖಿಲ ಭಾರತ ಅಧ್ಯಕ್ಷ ನಿತಿನ್ ಗಡ್ಕರಿಯವರು ರೆಡ್ಡಿ ಬಳಗದಿಂದ ಚಿನ್ನದ ಖಡ್ಗವನ್ನು ಪಡೆದುದನ್ನು ಅಡ್ವಾಣಿ ಮರೆತರೂ ಕರ್ನಾಟಕದ ಜನತೆ ಮರೆತಿಲ್ಲ, ಮರೆಯುವುದೂ ಇಲ್ಲ.



ಈ ಹಿನ್ನೆಲೆಯಲ್ಲಿ ಅಡ್ವಾಣಿಯವರು ಕರ್ನಾಟಕ ರಾಜ್ಯದಲ್ಲಿ ಯಾತ್ರೆಯನ್ನು ನಡೆಸಬಾರದೆಂದು ಸಿಪಿಐ(ಎಂ) ಆಗ್ರಹಪಡಿಸುತ್ತದೆ. ಯಾತ್ರೆಗೆ ಎಲ್ಲಾ ತಯಾರಿ ನಡೆಯುತ್ತಿರುವ ಹಿನ್ನೆಲೆಯಲ್ಲಿ ಅಕ್ಟೋಬರ್ 29ರಂದು ಬೆಂಗಳೂರು ಮತ್ತು ಮಂಗಳೂರಿನಲ್ಲಿ ಪ್ರತಿಭಟನೆ ನಡೆಸಲು ಸಿಪಿಐ(ಎಂ) ನಿರ್ಧರಿಸಿದೆ.

ಜನರ ಸಮಸ್ಯೆಗಳ ಬಗ್ಗೆ ಅಲಕ್ಷ್ಯ

ಭೀಕರ ಬರ ಮತ್ತು ವಿದ್ಯುತ್ ಕ್ಷಾಮದಿಂದ ರಾಜ್ಯದ ಜನತೆ ತತ್ತರಿಸುತ್ತಿದ್ದಾರೆ. 84 ತಾಲ್ಲೂಕುಗಳಲ್ಲಿ ಬರ ಪರಿಸ್ಥಿತಿ ಇದೆ ಎಂದು ಘೋಷಿಸಿದರೂ ಗ್ರಾಮೀಣ ಉದ್ಯೋಗ, ಮೇವು, ನೀರು ಪೂರೈಕೆಗಳತ್ತ ಸರ್ಕಾರದ ಗಮನ ಇಲ್ಲವೆ ಇಲ್ಲ. ವಿದ್ಯುತ್ ಅಭಾವದಿಂದ ಕರ್ನಾಟಕದ ಜನರು ವಿಶೇಷವಾಗಿ ಗ್ರಾಮೀಣ ಜನತೆ ಸಂಕಷ್ಟಕ್ಕೆ ಒಳಗಾಗಿದ್ದಾರೆ. ಬಹುತೇಕ ಸ್ಥಳಗಳಲ್ಲಿ ದಿನಕ್ಕೆ 9 ಗಂಟೆಗೂ ಹೆಚ್ಚು ಕಾಲ ವಿದ್ಯುತ್ ಇರುವುದಿಲ್ಲ. ಇದರಿಂದ ಕೃಷಿ ಕ್ಷೇತ್ರಕ್ಕೆ ಪೆಟ್ಟಾಗಲಿದ್ದು ಬರ ಪರಿಸ್ಥಿತಿಯ ತೀವ್ರತೆಗೆ ಕಾರಣವಾಗುತ್ತದೆ. ಕುಡಿಯುವ ನೀರಿನ ಪೂರೈಕೆಗೆ ತಡೆಯಾಗುತ್ತದೆ. ರಾಜ್ಯ ಸರ್ಕಾರವು ಸಭೆ, ಸಮಾರಂಭಗಳಿಗೆ ಸೀಮಿತವಾಗುವುದರ ಬದಲು ಜನರ ಸಮಸ್ಯೆಗಳ ಪರಿಹಾರಕ್ಕೆ ಗಮನ ನೀಡಬೇಕೆಂದು ಸಿಪಿಐ(ಎಂ) ಆಗ್ರಹಿಸುತ್ತದೆ. ಲೋಕಾಯುಕ್ತ ವರದಿಯ ಜಾರಿ ಮತ್ತು ಜನರ ಸಮಸ್ಯೆಗಳ ಕುರಿತು ಚರ್ಚಿಸಲು ವಿಧಾನ ಸಭೆ ಅಧಿವೇಶನವನ್ನು ಕರೆಯಬೇಕೆಂದು ಸಿಪಿಐ(ಎಂ) ಒತ್ತಾಯಿಸುತ್ತದೆ.

ಕೃಷಿ ಕ್ಷೇತ್ರವು ಆಳವಾದ ಬಿಕ್ಕಟ್ಟಿನಲ್ಲಿ ಮುಂದುವರಿಯುತ್ತಿರುವಾಗ ಡಿಸೆಂಬರ್ ಮೊದಲ ವಾರದಲ್ಲಿ ಕೃಷಿಯಲ್ಲಿ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶವನ್ನು ಸರ್ಕಾರ ನಡೆಸುತ್ತಿದೆ. ಇದರಿಂದ ರೈತರು ಭೂಮಿ ಕಳೆದು ಕೊಳ್ಳುವುದು ಮಾತ್ರವಲ್ಲದೆ, ಈಗಾಗಲೇ ಕೆಲಸದಿಂದ ವಂಚಿತರಾಗಿರುವ ಕೂಲಿಕಾರರು ನಿರ್ಗತಿಕರಾಗುತ್ತಾರೆ. ಈ ಸಮಾವೇಶದಿಂದ ಲಾಭಕೋರ ಬಹುರಾಷ್ಟ್ರೀಯ ಕಂಪನಿಗಳಿಗೆ ಮತ್ತು ದೊಡ್ಡ ದೊಡ್ಡ ಕಂಪನಿಗಳಿಗೆ ತಮ್ಮ ಲಾಭ ಹೆಚ್ಚಿಸಿಕೊಳ್ಳಲು ಅನುಕೂಲವಾಗುತ್ತದೆ ಎಂದು ಸಿಪಿಐ(ಎಂ) ಅಭಿಪ್ರಾಯ ಪಟ್ಟಿದೆ. ಕೃಷಿಯ ಕಂಪನೀಕರಣದ ವಿರುದ್ಧ ರೈತರು ನಡೆಸುವ ಹೋರಾಟಗಳಿಗೆ ಸಿಪಿಐ(ಎಂ) ಸಂಪೂರ್ಣ ಬೆಂಬಲ ವ್ಯಕ್ತಪಡಿಸುತ್ತದೆ.

ಬಿಜೆಪಿ ಸರ್ಕಾರ ರಾಜೀನಾಮೆ ನೀಡಬೇಕು

ಹಗರಣಗಳ ಸರಮಾಲೆಯನ್ನೇ ಹೊತ್ತಿರುವ, ಲೋಕಾಯುಕ್ತ ವರದಿಯನ್ನು ಅನುಷ್ಠಾನ ಗೊಳಿಸದಿರುವ, ಕಳಂಕಿತರನ್ನು ರಕ್ಷಿಸಲು ಹೆಣಗಾಡುತ್ತಿರುವ ಜನರ ಸಮಸ್ಯೆಗಳ ಬಗ್ಗೆ ನಿರ್ಲಕ್ಷ್ಯ ತೋರುತ್ತಿರುವ ಬಿಜೆಪಿ ಸರ್ಕಾರ ರಾಜೀನಾಮೆ ನೀಡಬೇಕು ಎಂದು ಸಿಪಿಐ(ಎಂ) ಒತ್ತಾಯಿಸುತ್ತದೆ.

ಲೋಕಾಯುಕ್ತ ವರದಿ ಅಂಗೀಕಾರ ಆಗಲೇಬೇಕು

ಅಕ್ರಮ ಗಣಿಗಾರಿಕೆ ಕುರಿತು ಲೋಕಾಯುಕ್ತ ವರದಿ ನೀಡಿ 3 ತಿಂಗಳು ಕಳೆದಿದ್ದು ಅದನ್ನು ಅಂಗೀಕಾರ ಮಾಡಲು ಮೀನಾಮೇಷ ಎಣಿಸುತ್ತಿರುವುದು, ವರದಿಯನ್ನು ಕಸದ ಬುಟ್ಟಿಗೆ ಎಸೆಯುವ ಕುತಂತ್ರ ಎಂದು ಸಿಪಿಐ(ಎಂ) ಅಭಿಪ್ರಾಯ ಪಡುತ್ತದೆ. ಲೋಕಾಯುಕ್ತರ ವರದಿಯಲ್ಲಿ ಗುರುತಿಸಲಾದ ಆರೋಪಿಗಳ ವಿರುದ್ಧ ಕ್ರಮ ಜರಗಿಸುವ ಬದಲಾಗಿ ವರದಿಯ ಕುರಿತು ಸರಕಾರ ಸ್ಪಷ್ಟನೆ ಕೇಳಿರುವುದು ಅದರ ವಿಳಂಬ ಧೋರಣೆಗೆ ಸಾಕ್ಷಿಯಾಗಿದೆ.

ಲೋಕಾಯುಕ್ತ ವರದಿ ಅಂಗೀಕಾರ ಆಗಬೇಕು ಎಂದು ಒತ್ತಾಯಿಸುವ ಸಿಪಿಐ(ಎಂ) ಇದಕ್ಕಾಗಿ ನವೆಂಬರ್ 11ರಂದು ಬೆಂಗಳೂರಿನಲ್ಲಿ ಮತ್ತು ರಾಜ್ಯದ ಇತರ ಕಡೆಗಳಲ್ಲಿ 'ಭ್ರಷ್ಟಾಚಾರ ವಿರೋಧಿ ಪ್ರಗತಿಪರ ವೇದಿಕೆ ಹಮ್ಮಿಕೊಂಡಿರುವ ಹೋರಾಟಕ್ಕೆ ಸಂಪೂರ್ಣ ಬೆಂಬಲ ನೀಡುತ್ತದೆ.

ಶಿಸ್ತು ಕ್ರಮ

ಸಿಪಿಐ(ಎಂ) ಪಕ್ಷದ ರಾಜ್ಯ ಸಮಿತಿ ಸದಸ್ಯರೂ, ಚಿಕ್ಕಬಳ್ಳಾಪುರ ಜಿಲ್ಲಾ ಸಮಿತಿಯ ಕಾರ್ಯದರ್ಶಿ ಮಂಡಳಿ ಸದಸ್ಯರೂ, ಬಾಗೇಪಲ್ಲಿ ತಾಲ್ಲೂಕು ಸಮಿತಿಯ ಕಾರ್ಯದರ್ಶಿಯಾಗಿದ್ದ ವೆಂಕಟಸ್ವಾಮಿ ರೆಡ್ಡಿಯವರನ್ನು ಅಶಿಸ್ತು ಮತ್ತು ಪಕ್ಷ ವಿರೋಧಿ ಚಟುವಟಿಕೆಗಳನ್ನು ನಡೆಸಿದ್ದರಿಂದ ಅವರನ್ನು ನಮ್ಮ ಪಕ್ಷದ ಸಂವಿಧಾನದ ಆಧಾರದಲ್ಲಿ ತುರ್ತು ವಿಧಾನ ಅನುಸರಿಸಿ ಪಕ್ಷದಿಂದ ವಜಾ ಮಾಡಲು ರಾಜ್ಯ ಕಾರ್ಯದರ್ಶಿ ಮಂಡಳಿಯು ಕ್ರಮ ಕೈಗೊಂಡಿದೆ.

ಇತ್ತೀಚಿನ ಅವಧಿಯಲ್ಲಿ ಕೆಲವರು ಪಕ್ಷದ ಶಿಸ್ತನ್ನು ಉಲ್ಲಂಘನೆ ಮಾಡುವ ಹಲವಾರು ವಿಷಯಗಳು ಗಮನಕ್ಕೆ ಬಂದು ಆ ಬಗ್ಗೆ ಶಿಸ್ತಿನ ಕ್ರಮದ ಯೋಚನೆ ಮಾಡುತ್ತಿರುವಾಗಲೇ ಶಿಸ್ತಿನ ಕ್ರಮಕ್ಕೆ ಒಳಪಟ್ಟವರ ಜೊತೆ ವೆಂಕಟಸ್ವಾಮಿ ರೆಡ್ಡಿಯವರು ಸೇರಿ ಪತ್ರಿಕಾಗೋಷ್ಠಿಯನ್ನು ನಡೆಸಿ ಪಕ್ಷ ವಿರೋಧಿ ಹೇಳಿಕೆ ನೀಡಿದ್ದಾರಲ್ಲದೆ ರಾಜಕೀಯ ತಪ್ಪುಗಳನ್ನು ಎಸಗಿರುವುದು ಗಮನಕ್ಕೆ ಬಂದಿದೆ. ಇದು ಪಕ್ಷ ವಿರೋಧಿಯಾದ ಚಟುವಟಿಕೆಯಾಗಿದೆ.

ಆದ್ದರಿಂದ ಪಕ್ಷದ ಸಂವಿಧಾನ ಅನುಸರಿಸಿ ಅವರನ್ನು ತುರ್ತಾಗಿ ವಜಾ ಮಾಡಲಾಗಿದೆ ಎಂದು ಸಿಪಿಎಂ ರಾಜ್ಯ ಕಾರ್ಯದರ್ಶಿ ವಿ.ಜೆ.ಕೆ.ನಾಯರ್ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

*

ಸಂಪಾದಕೀಯ

ಭಾಷೆ, ಬದುಕಿನ ರಕ್ಷಣೆಗಾಗಿ

ನವೆಂಬರ್ 1.

ನಾಡಿನ ಎಲ್ಲಾ ಜನತೆಗೆ 56ನೆಯ ಕರ್ನಾಟಕ ರಾಜ್ಯೋತ್ಸವದ ಹಾರ್ದಿಕ ಶುಭಾಶಯಗಳು.

ರಾಜ್ಯೋತ್ಸವದೊಂದಿಗೆ ಜನಶಕ್ತಿಗೆ ವಿಶಿಷ್ಟ ನಂಟು,ಸಂಭ್ರಮ. ಹರಿದು ಹಂಚಿ ಹೋಗಿದ್ದ ಒಂದೇ ಭಾಷಿಕ ಜನತೆ ಒಂದುಗೂಡಬೇಕು. ಭಾಷಾವಾರು ಪ್ರಾಂತ್ಯಗಳು ರಚನೆಯಾಗಬೇಕೆಂಬ ಪ್ರಜಾಸತ್ತಾತ್ಮಕ ಸಂಗ್ರಾಮದಲ್ಲಿ ಜನಶಕ್ತಿ ನೀಡಿದ್ದು ಸ್ಪೂರ್ತಿ,ಪಸರಿಸಿದ್ದು ಸೈದ್ಧಾಂತಿಕ ,ರಾಜಕೀಯ ದೃಷ್ಟಿಕೋನ. ಆಳುವ ವರ್ಗಗಳು ಭಾಷಾವಾರು ಪ್ರಾಂತ್ಯಗಳ ರಚನೆಯನ್ನು ಘೋಷಿಸಲೇಬೇಕಾಗಿ ಬಂದಾಗ ನಾಡಿನ ನಾಳಿನ ಅಭ್ಯುದಯ,ಗೊತ್ತು ಗುರಿ ಬೆಳವಣಿಗೆಯ ಹಾದಿ,ಎದುರಾದ ಸವಾಲುಗಳನ್ನು ಕೈಗೆತ್ತಿಕೊಳ್ಳುವ ಛಲ-ಬಲ ತೋರಿದ್ದು . ಸಾಕಾರಗೊಂಡಾಗ ಸಂಭ್ರಮಿಸಿದ್ದು, ಆಗದಿರುವಾಗ ಸಂಘರ್ಷದ ಕಹಳೆ ಮೊಳಗಿಸಿದ್ದು ಇದೇ ನಾಡಿನ ಜನಶಕ್ತಿಯೇ.

ಭಾರತ ಸ್ವಾತಂತ್ರ್ಯ ಪಡೆದ ನಂತರ ನೂತನವಾಗಿ ಪ್ರಜಾಸತ್ತಾತ್ಮಕ ಗಣತಂತ್ರದ ಆಧಾರದಲ್ಲಿ ಆಡಳಿತವನ್ನು ರಾಜಕೀಯವಾಗಿ ಸಂಘಟಿಸುವಲ್ಲಿ ಭಾಷಾವಾರು ಪ್ರಾಂತ್ಯಗಳ ರಚನೆ ಅತೀ ಮಹತ್ವದ್ದಾಗಿತ್ತು. ಹಲವು ರಾಷ್ಟ್ರೀಯತೆಗಳು, ಸಾಂಸ್ಕೃತಿಕ ಭಿನ್ನತೆ, ಐಕ್ಯತೆ ವೈಶಿಷ್ಟತೆಯಿರುವ ದೇಶದ ಜನತೆಯ ಆಶೋತ್ತರಗಳು "ತಮ್ಮತನ"ದೊಂದಿಗೆ ಬೆಳೆದು ನಿಲ್ಲುವುದಾಗಿತ್ತು. ಜನಭಾಷೆಯಲ್ಲಿ ಆಡಳಿತ,ಅದಕ್ಕನುಗುಣವಾಗಿ ರಾಜ್ಯಗಳ ರಚನೆಗಾಗಿ ರಾಜಿಯಿಲ್ಲದ ,ತ್ಯಾಗ ಬಲಿದಾನಗಳ ಹೋರಾಟ ಐತಿಹಾಸಿಕ. ಅದು ಎಲ್ಲರೆದೆಯಲ್ಲೂ ಪ್ರಜ್ವಲಿಸುವ ಜ್ವಾಲೆ.ಕೊನೆಗೂ ಯಶಸ್ವಿಯಾಯಿತು.


ಚೆಲುವ ಕನ್ನಡ ನಾಡು ಉದಯವಾಗಲಿ ಎಂಬ ಆಶಯವಿನ್ನೂ ಪೂರ್ಣ ನನಸಾಗಬೇಕಿದೆ, ದೇಶದೊಟ್ಟಿಗೆ ಒಂದು ಹಂತದ ಬೆಳವಣಿಗೆ ಕಂಡಿದ್ದರೂ ಅದರ ಎಲ್ಲಾ ಫಲಗಳು ನಾಡಿನ ಜನತೆಗೆ ಸಿಕ್ಕಿಲ್ಲ.ಈಗಲೂ ಅನ್ನ,ವಸತಿ,ವಸ್ತ್ರ,ಶಿಕ್ಷಣದಂತಹ ಮೂಲಭೂತ ಹಕ್ಕಿನಿಂದ ವಂಚಿತರಾದವರು ಕೋಟಿ,ಕೋಟಿ ಜನ.ಆಳುವವರು ಜಾರಿಗೆ ತಂದ ನೀತಿಗಳು ಉಳ್ಳವರು-ನಿರ್ಗತಿಕರು ಎಂಬ ಭಾರೀ ಕಂದರ ನಿರ್ಮಿಸಿದೆ. ಉದಾರೀಕರಣದ ಆರ್ಥಿಕ ನೀತಿಗಳು ಕೃಷಿ-ಕೈಗಾರಿಕಾ ಕ್ಷೇತ್ರಗಳನ್ನುನಾಶಗೊಳಿಸುತ್ತದೆ. ಸಾಮಾಜಿಕ ಅಸಮಾನತೆ ಹೆಚ್ಚಿದೆ. ಜನಭಾಷೆ,ಸಂಸ್ಕೃತಿ ಬೆದರಿಕೆಗೆ ಈಡಾಗಿದೆ.ಕೋಮುವಾದ.ಮೂಲಭೂತವಾದ. ಪ್ರತ್ಯೇಕತಾವಾದ,ಛಿದ್ರಕಾರೀ,ಭಾಷಾಂಧತೆಗಳು ಒಂದುಗೂಡಿದ ಜನತೆಯನ್ನು ವಿಭಜಿಸಲು ಹವಣಿಸುತ್ತಿವೆ.

ಇಂದು ಜನತೆಯ ಬದುಕಿಗೆ ಬೆದರಿಕೆ ಒಡ್ಡುವಲ್ಲಿ ಕೇಂದ್ರದ ಕಾಂಗ್ರೆಸ್ ನ ಪಾಲಿರುವಂತೆ ಕೋಮುವಾದಿ ಬಿಜೆಪಿ ಅಧಿಕಾರದಲ್ಲಿರುವುದು ಕೂಡ ಕಾರಣವಾಗಿದೆ, ಅದು ಜಾರಿಗೊಳಿಸುತ್ತಿರುವ ಉ,ಜಾ,ಖಾ.ನೀತಿಗಳು ಭಾಷೆ-ಬದುಕಿಗೆ ಅಪಾಯಕಾರಿಯಾಗಿದೆ. ರಾಜ್ಯದಲ್ಲಿನ ಅಮೂಲ್ಯ ಪ್ರಾಕೃತಿಕ ಸಂಪತ್ತು ,ನೆಲ.ಜಲವನ್ನು ಬಂಡವಾಳಗಾರರ ಲೂಟಿಗೆ ಮುಕ್ತ ಅವಕಾಶ ಕಲ್ಪಿಸಿದೆ. ಕೇಂದ್ರ-ರಾಜ್ಯ ಸರ್ಕಾರಗಳ ಇಂತಹ ನೀತಿಗಳಿಂದಾಗಿ ಕೃಷಿ ದಿವಾಳಿಗೊಂಡು ರೈತ-ಕೂಲಿಕಾರರು ಕಂಗೆಟ್ಟಿದ್ದಾರೆ. ಇಂತಹ ಸನ್ನಿವೇಶದಲ್ಲಿ ಕೃಷಿ-ಕೃಷಿಕರನ್ನು ಉಳಿಸದೆ ,ಭೂ ಹೀನರಿಗೆ ಭೂಮಿ ಹಂಚದೇ,ಭೂ ಹಾಗೂ ಗಣಿ ಮಾಫಿಯಾಗಳಿಗೆ ,ಕಾರ್ಪೊರೇಟ್ ಕಂಪನಿಗಳಿಗೆ ಬಂಡವಾಳಗಾರರಿಗೆ ಲಕ್ಷಾಂತರ ಎಕರೆ ಜಮೀನು ನೀಡಲಾಗುತ್ತಿದೆ. ಸುಮಾರು ಶೇ.40ರಷ್ಟಿರುವ ಮುಚ್ಚಿದ ರೋಗಗ್ರಸ್ತ ಕೈಗಾರಿಕೆಗಳ ಪುನಃಶ್ಚೇತನವಿಲ್ಲ. ಹೀಗಾಗಿ ನಿರುದ್ಯೋಗ ತಾಂಡವವಾಡುತ್ತಿದ್ದು ಯುವಜನರ ಭವಿಷ್ಯ ಮಸುಕಾಗಿದೆ.ಇರುವ ಕೆಲವು ಅವಕಾಶಗಳು ಐ.ಟಿ,ಬಿ.ಟಿ ಯಂತಹ ಖಾಸಗಿ ರಂಗದಲ್ಲಿರುವುದು,ಉದ್ಯೋಗ ಹುಡುಕಿ ಅಲೆಯಬೇಕಾಗಿರುವುದು ಕನ್ನಡದ ಬಳಕೆ,ಕಲಿಕೆಯನ್ನು ಇಲ್ಲವಾಗಿಸಿದೆ. ಹೀಗಾಗಿ ಇಂಗ್ಲೀಷ್ ಅವಲಂಬನೆ,ವ್ಯಾಮೋಹ ವಿಪರೀತ ಹೆಚ್ಚಿ ಶಾಲಾ ಕಲಿಯಲ್ಲೂ ಇದು ಪ್ರತಿಫಲನಗೊಳ್ಳುತ್ತಿದೆ. ಹೀಗೆ ಭಾಷೆ,ಸಂಸ್ಕೃತಿಗೆ ಇದು ಬೆದರಿಕೆ ಹುಟ್ಟಿಸಿದೆ.ಇದಕ್ಕೆ ಪೂರಕವಾಗಿಯೇ ಸರಕಾರ ಅಂಗ್ಲ ಭಾಷಾ ಶಾಲೆಗಳಿಗೆ ಪ್ರೋತ್ಸಾಹ,ಕನ್ನಡ ಶಾಲೆಗಳನ್ನು ಮುಚ್ಚಿಸುತ್ತಿದೆ. ಇನ್ನೂ ಎಲ್ಲಾ ಹಂತಗಳಲ್ಲಿ ಕನ್ನಡ ಆಡಳಿತ ಭಾಷೆಯಾಗದಿರುವುದು ಆಳುವವರ ವಂಚಕತನಕ್ಕೆ ಸಾಕ್ಷಿ.ಮೇಲಾಗಿ ಸಂಘಪರಿವಾರ-ಬಿಜೆಪಿಗಳು ತಾತ್ವಿಕವಾಗಿ ಕನ್ನಡದಂತಹ ಜನ ಭಾಷೆಗಳ ಕಡು ವಿರೋಧಿಯಾಗಿದ್ದು ಸಂಸ್ಕೃತ +ಹಿಂದು,ಹಿಂದಿ,ಹಿಂದುಸ್ತಾನ್ ಎಂಬ ಫ್ಯಾಶಿಸ್ಟ್ ನೀತಿ ಅನುಸರಿಸುತ್ತಿವೆ. ಈ ಹುನ್ನಾರಗಳನ್ನು ಸೋಲಿಸಿ ಭಾಷಾ ರಾಷ್ಟ್ರೀಯತೆಯನ್ನು ರಕ್ಷಿಸಬೇಕಿದೆ.

ಪುಟ 12 ಕ್ಕೆ

ಅಡ್ವಾಣಿಯವರೇ, ಇನ್ನು ಸಾಕು !

ಅದ್ವಾನಿಯವರನ್ನು ಸ್ವಾಗತಿಸಲು ಸರ್ವಸಿದ್ಧತೆಗಳು ಸಾಗಿವೆ, ಸಂಘಟನಾ ಸಭೆಗಳು ನಡೆದಿವೆ. ಅಕ್ಟೋಬರ್ 30ರಂದು ಬೆಂಗಳೂರು ನ್ಯಾಷನಲ್ ಸ್ಕೂಲ್ ಮೈದಾನ, 31 ಮಂಗಳೂರು ಮೈದಾನಗಳಲ್ಲಿ ನಂತರ ಉತ್ತರ ಕನ್ನಡದಲ್ಲಿ ರಥಯಾತ್ರೆಯ ಬಹಿರಂಗ ಸಭೆಗಳು ನಡೆಯಲಿವೆ. ಕಾರ್ಯಕ್ರಮಕ್ಕೆ ಇನ್ನೂ ವಾರ ಇದೆಯೆನ್ನುವಾಗ ಸಂಘಪರಿವಾರ ಮಾಧ್ಯಮಗಳಿಗೆ ಸುದ್ದಿಗಳ ರಸಗವಳ ಉಣ್ಣಿಸುತ್ತಿದೆ.ಆದ್ವಾನಿ ಬೆಂಗಳೂರಿಗೆ ಬರುವುದಿಲ್ಲವೆಂದು ಹೇಳಿದವರ್‍ಯಾರು? ಎಂದು ಮರು ಪ್ರಶ್ನೆ ಹಾಕುತ್ತಿದೆ. ,ಈ ಸುದ್ದಿ ಹಬ್ಬಿದ್ದಾದರೂ ಹೇಗೆ ತನಗೇನೂ ತಿಳಿಯದು ಎನ್ನುತ್ತಾರೆ ಅದ್ವಾನಿಯವರು ಎರಡು ದಿನಗಳು ತಡವಾಗಿ!. ರಥದ ಗಾಲಿಗಳು ಕರ್ನಾಟಕದತ್ತ ಹೊರಳುವುದಿಲ್ಲ ಎಂದು ಉಸಿರಿದವರ್‍ಯಾರು?





ಇಂತಹ ಸುದ್ದಿಯೊಂದನ್ನು ತೇಲಿ ಬಿಟ್ಟಿದ್ದೇ ಅವರು, ಸ್ಪಷ್ಟನೆ ಕೊಡುತ್ತಿರುವವರೂ ಅವರೇ. ಆಡಳಿತ ಹಾಗೂ ವಿರೋಧ ಪಕ್ಷದ ಆಟವನ್ನು ಆಡುವಲ್ಲಿ ಅವರು ನಿಸ್ಸೀಮರಲ್ಲವೇ!. ರೋಚಕ ಸುದ್ದಿಗಳನ್ನು ಹುಟ್ಟು ಹಾಕುವಲ್ಲಿಯೂ ಕೂಡ.

ಭೂಮಿಕೆ

ಎಂತಹುದೋ ಒಂದು ವಿವಾದವನ್ನು ಸೃಷ್ಟಿಸಿ ಮಾಧ್ಯಮಗಳನ್ನು ತಮ್ಮ ಸುತ್ತ ಅಣಿ ನೆರೆಸಿಕೊಳ್ಳುವ ಚಾತುರ್ಯ ಸಂಘಪರಿವಾರಕ್ಕೆ ಇದ್ದದ್ದೆ. ಖ್ಯಾತಿಯೋ, ಅಪಖ್ಯಾತಿಯೋ!, ಕಾಸಿಗಾಗಿ ಸುದ್ದಿಯ ಅವಕಾಶವೂ ವರವೇ. ಭ್ರಷ್ಟಾಚಾರದ ವಿರುದ್ಧ, ಸ್ವಚ್ಛ ಸಮಾಜಕ್ಕಾಗಿ 'ಓರಾಟ' ಆರಂಭಿಸಿರುವ ಅದ್ವಾನಿ ಮಧ್ಯಪ್ರದೇಶದಲ್ಲಿ ಪತ್ರಕರ್ತರಿಗೆ ಸಾವಿರ ರೂ. ಕೊಟ್ಟಿದ್ದು (ಲಂಚ) ಕೆಟ್ಟ ಸುದ್ದಿಯೆಂದಾಗಲಿಲ್ಲ. ಅವರ ನೈತಿಕತೆ ನಾಚಲಿಲ್ಲ. ಹಾಗೆಯೇ ಅವರು ಅನುಸರಿಸುತ್ತಿರುವ ಗುಜರಾತ್ ಮಾದರಿಯಿಂದಾಗಿ ಕುಖ್ಯಾತಿಯಲ್ಲಿ ನಂ.1 ಆಗಿರುವ ಕರ್ನಾಟಕಕ್ಕೆ ಕಾಲಿಡುವಾಗಲೂ.

ಕರ್ನಾಟಕದ ಬಿಜೆಪಿ ಒಡೆದ ಮನೆ. ರಾಷ್ಟ್ರೀಯ ನಾಯಕರ ಕೃಪಾ ಪೋಷಣೆಯಿಂದ ಒಳ ಜಗಳ ಹುಲುಸಾಗಿ ಬೆಳೆಯುತ್ತಿದೆ. ಸ್ವತಃ ಮುಷ್ಟಿ ಯುದ್ಧದಲ್ಲಿ ತೊಡಗಿರುವ ಈ ನಾಯಕರು ರಾಜ್ಯಗಳಲ್ಲಿಯೂ ತಮ್ಮ ನಿಷ್ಠ ಜಗಜಟ್ಟಿಗಳನ್ನು ಬೆಳೆಸುತ್ತಿದ್ದಾರೆ. ಇಲ್ಲಿ ಬಿರಿಯುತ್ತಿರುವ ಭಿನ್ನಮತವು ಯಾವುದೇ ತಾತ್ವಿಕತೆಯ ಕಾರಣದಿಂದಲ್ಲ. ಅಧಿಕಾರ ದಾಹ,ಸಿಕ್ಕಷ್ಟನ್ನು ಮುಕ್ಕುವ ದುರಾಶೆ ಮತ್ತು ಭ್ರಷ್ಟಾತುರದಿಂದ. ಇದಕ್ಕೆ ಆರ್.ಎಸ್.ಎಸ್ ಮಾತೃದೇವರ ಮಾರ್ಗದರ್ಶನದ ಬಲವಿದ್ದಾಗ ಅಳುಕುವ ಮಾತೆಲ್ಲಿ?. ಹೀಗಾಗಿಯೇ ಒಂದು ಅವಕಾಶ ಕೊಡಿರೆಂದು ಅಂಗಲಾಚಿದ ಇವರು ಕರ್ನಾಟಕದ ಜನತೆಗೆ ಕೊಟ್ಟಿದ್ದು ಅಘಾತಕಾರಿ ಏಟುಗಳನ್ನೆ ಎಸಗಿದ್ದು ಮಹಾದ್ರೋಹ, ವಂಚನೆಗಳನ್ನೇ. ಪರಿಣಾಮವಾಗಿ ರಾಷ್ಟ್ರೀಯ ಸಂಪತ್ತಿನ ಅವ್ಯಾಹತ ಲೂಟಿ. ಭ್ರಷ್ಟಾಚಾರ-ದುರಾಡಳಿತದಿಂದಾಗಿ (ಮಾಜಿ) ಮುಖ್ಯಮಂತ್ರಿ, ಮಂತ್ರಿಗಳ ದಂಡೇ ಕಾರಾಗೃಹ ವಾಸಿಯಾಗುತ್ತಿದೆ. ಸಾಲಿನಲ್ಲಿರುವ ಹಲವರು ರೋಗ ಸನ್ನದ್ಧರಾಗುತ್ತಿದ್ದಾರೆ. ಅದ್ವಾನಿಯವರ ಯಾತ್ರೆಗೆ ಇದಕ್ಕಿಂತ ಇನ್ನೆಂತಹ ಭೂಮಿಕೆ ಬೇಕು?.

ಯಾರ ವಿರುದ್ಧ?

ಇಂತಹ ಸನ್ನಿವೇಶದಲ್ಲಿ ಈ ಯಾತ್ರೆ ಹಲವಾರು ಪ್ರಶ್ನೆಗಳನ್ನೆಬ್ಬಿಸಿದೆ . ಆರಂಭದಿಂದಲೂ ಅದ್ವಾನಿಗೂ ,ಬಿಜೆಪಿಗೂ ತೀವ್ರ ಮುಜುಗರ ತರುತ್ತಲೇ ಇದೆ. ಇಲ್ಲಿಯೂ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಯಡಿಯೂರಪ್ಪನ ಬಂಧನವಾದ ನಂತರವಂತೂ ಬಿಜೆಪಿಯ ಮಾನ ಇನ್ನಷ್ಟು ನೆಲ ಕಚ್ಚಿದೆ. ಆದ್ದರಿಂದ ರಾಜ್ಯದ ರಾಜಧಾನಿಗೆ ರಥ ಬರದಂತೆ ಹೊರ

ಪುಟ 4ಕ್ಕೆ

ಕಾರ್ಟೂನ್ ಕಾರ್ನರ್



ತುಮಕೂರು

ಕೆ.ಜಿ.ಎಫ್ ಪೌರಕಾರ್ಮಿಕರ ಸಾವು ಸಿಐಟಿಯು ಪ್ರತಿಭಟನೆ

ಇತ್ತೀಚೆಗೆ ಕೆ.ಜಿ.ಎಫ್.ನಲ್ಲಿ ಮರಣ ಹೊಂದಿದ 3 ಜನ ದಲಿತ ಪೌರಕಾರ್ಮಿರಕ ಸಾವು ಸರ್ಕಾರಿ ಪ್ರಾಯೋಜಿತ ಕೊಲೆ. ಈ ಕೊಲೆಯ ಹೊಣೆಗಾರಿಕೆಯನ್ನು ಕೋಲಾರ ಜಿಲ್ಲಾಧಿಕಾರಿ ಹಾಗೂ ಕೆ.ಜಿ.ಎಫ್ ನಗರಸಭಾ ಆಯುಕ್ತರ ಮೇಲೆ ಹೊಣೆ ಹೊರಿಸಿ ಕ್ರಿಮಿನಲ್ ಮೊಕದ್ದಮೆಯನ್ನು ದಾಖಲಿಸಬೇಕೆಂದು ಒತ್ತಾಯಿಸಿ ತುಮಕೂರು ಪೌರ ಕಾರ್ಮಿಕರ ಸಂಘ ಸಿಐಟಿಯು ಹಾಗೂ ಕೊಳಗೇರಿ ನಿವಾಸಿಗಳ ಹಿತರಕ್ಷಣಾ ಸಮಿತಿ ಜಂಟಿಯಾಗಿ 26-10-2011 ರಂದು ತುಮಕೂರು ನಗರದ ಟೌನ್‌ಹಾಲ್ ಸರ್ಕಲ್‌ನಲ್ಲಿ ಮಾನವಸರಪಳಿ ನಿರ್ಮಿಸಿ ಪ್ರತಿಭಟನೆಯನ್ನು ನಡೆಸಲಾಯಿತು. ಮೃತ ಕುಟುಂಬಕ್ಕೆ ತಲಾ 10 ಲಕ್ಷ ರೂಪಾಯಿ ಕೊಡಬೇಕೆಂದು ಹಾಗೂ ಸರ್ಕಾರಿ ಉದ್ಯೋಗ ಮೃತ ಕುಟುಂಬಕ್ಕೆ ಕೊಡಬೇಕು ಹಾಗೂ ರಾಜ್ಯಾದ್ಯಂತ ಸ್ಥಳೀಯ ಸಂಸ್ಥೆಯಲ್ಲಿ ಗುತ್ತಿಗೆ ಅಡಿಯಲ್ಲಿ ದುಡಿಯುತ್ತಿರುವ ಪೌರ ಕಾರ್ಮಿಕರನ್ನು ಖಾಯಂ ಮಾಡಬೇಕೆಂದು ಒತ್ತಾಯಿಸಿದರು.

ಪ್ರತಿಭಟನೆಯನ್ನು ಉದ್ದೇಶಿಸಿ ಪ್ರಗತಿಪರ ಚಿಂತಕರಾದ ಕೆ.ದೊರೈರಾಜ್‌ರವರು ಮಾತನಾಡುತ್ತಾ ಕರ್ನಾಟಕದಲ್ಲಿ ಪದೆ ಪದೇ ಪಿಟ್‌ಗುಂಡಿ ಸ್ವಚ್ಚತೆ ಮಾಡಲು ಹೋಗಿ ಸಾವನ್ನಪ್ಪುವುದನ್ನು ತಪ್ಪಿಸಲು ಸರ್ಕಾರ



ವಿಫಲವಾಗಿದೆ ಎಂದರು. 3 ಜನ ಮರಣ ಹೊಂದಿದ ಪೌರಕಾರ್ಮಿಕರುಗಳಾದ ಪ್ರಸಾದ್, ನಾಗೇಂದ್ರಬಾಬು, ರವಿ ಇವರ ಸಾವಿಗೆ ಕೆ.ಜಿ.ಎಫ್.ನ ನಗರಸಭೆ ಆಯುಕ್ತರನ್ನು ಕೊಲೆಯ ಮೊಕದ್ದಮ್ಮೆಯನ್ನು ಹೂಡಬೇಕು ಹಾಗೂ ಕೋಲಾರ ಜಿಲ್ಲಾಧಿಕಾರಿ ದಲಿತರ ಕುಟುಂಬಕ್ಕೆ ಸಾಂತ್ವಾನ ಹೇಳುವ ಬದಲು ಲಾಠಿ ಚಾರ್ಜ್ ಮಾಡಿಸಿರುವ ಕ್ರಮವನ್ನು ಉಗ್ರವಾಗಿ ಖಂಡಿಸಿದರು. ಪ್ರಾಂತ ರೈತ ಸಂಘದ ಮುಖಂಡರಾದ ಬಿ.ಉಮೇಶ್ .ರವರು ಮಾತನಾಡಿ ನಗರಗಳು ಅಭಿವೃದ್ಧಿ ಆಗುತ್ತಿದ್ದರೆ ನಗರ ಸ್ವಚ್ಚತೆ ಮಾಡುತ್ತಿರುವ ಕಾರ್ಮಿಕರ ಸಮಸ್ಯೆಗಳನ್ನು ಆಲಿಸದೆ ಅಭಿವೃದ್ಧಿಯ ಹೆಸರಲ್ಲಿ ಲೂಟಿ ಮಾಡುತ್ತಾ ಸರ್ಕಾರ ಕಾಲಹರಣ ಮಾಡುತ್ತಿದೆ ಎಂದರು. ಆಧುನಿಕ ತಂತ್ರಜ್ಞಾನ ಬಂದರೂ ಪೌರಕಾರ್ಮಿಕರನ್ನು ಇಳಿಸಿ ಸ್ವಚ್ಚತೆ ನೆಪದಲ್ಲಿ ಕೊಲೆ ಮಾಡುತ್ತಿದ್ದಾರೆ ಎಂದು ಟೀಕಿಸಿದರು.

ಪ್ರತಿಭಟನೆ ಉದ್ದೇಶಿಸಿ ಮಾತನಾಡಿದ ಸಿಐಟಿಯುನ ಜಿಲ್ಲಾಧ್ಯಕ್ಷ ಸೈಯದ್ ಮುಜೀಬ್ ಕೆ.ಜಿ.ಎಫ್. ನಗರಸಭೆ ಆಯುಕ್ತರನ್ನು ಎ1 ಮಾಡಿ ಮೊಕದ್ದಮ್ಮೆ ಹೂಡಬೇಕು. ಮಲಹೊರುವ ಪದ್ದತಿ ನಿಷೇಧದಲ್ಲಿದ್ದರೂ ಅನಾಗರಿಕ ಪದ್ಧತಿಗೆ ಅವಕಾಶ ಮಾಡಿಕೊಟ್ಟ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು. ಕೊಳಗೇರಿ ನಿವಾಸಿಗಳ ಹಿತರಕ್ಷಣಾ ಸಮಿತಿ ರಾಜ್ಯ ಮುಖಂಡರಾದ ಎ.ನರಸಿಂಹಮೂರ್ತಿ ಯವರು ಮಾತನಾಡುತ್ತಾ ಕರ್ನಾಟಕದಲ್ಲಿ ಸು.17,000 ಜನ ಮಲಹೊರುವ ಪದ್ದತಿಯ ಕೆಲಸದಲಿದ್ದಾರೆ. ನಗರಸಭೆ ಮಹಾನಗರ ಪಾಲಿಕೆಗಳ ಕರ್ನಾಟಕ ಸರ್ಕಾರ ಸುಪ್ರೀಂ ಕೋರ್ಟ್‌ಗೆ ಯಾರು ಇಲ್ಲವೆಂದು ಸುಳ್ಳು ಅಫಿಡವಿಟ್ ಸಲ್ಲಿಸಿರುವುದನ್ನು ಖಂಡಿಸಿದರು.

ಪ್ರತಿಭಟನೆಯನ್ನು ಉದ್ದೇಶಿಸಿ ಸೈಯದ್ ಅಲ್ತಾಪ್ ಪೌರಕಾರ್ಮಿರಕ ಸಂಘದ ಕಾರ್ಯದರ್ಶಿ ಎನ್.ಕೆ. ಸುಬ್ರಹ್ಮಣ್ಯ ವೆಂಕಟೇಶ್ ಚಂದ್ರಪ್ಪ, ಮುಂತಾದವರು ಮಾತನಾಡಿದರು. ಪ್ರತಿಭಟನೆ ನೇತೃತ್ವನ್ನು ಕೆ.ನರಸಿಂಹರಾಜು (ಸ್ವಾಮಿ) ನರಸಿಂಹಮೂರ್ತಿ (ಜೂನಿ) ರವಿ ಕದರಪ್ಪ, ಕೆಂಪಣ್ಣ, ಶೆಟ್ಟಳಯ್ಯ, ದರ್ಶನ್ ಸರ್ದಾರ್ ಮುಂತಾದವರು ವಹಿಸಿದ್ದರು.

...ಅಡ್ವಾಣಿ ಇನ್ನು ಸಾಕು !

ಪುಟ 3 ರಿಂದ

ಸಾಗಿಸುವ ಪ್ರಯತ್ನ ನಡೆಯದೇ ಇಲ್ಲ. ಅದೇ ಹೊತ್ತಿನಲ್ಲಿ ಬಾರದೇ ಹೋದರೂ ಮುಖಭಂಗ ತಪ್ಪಿದ್ದಲ್ಲ. ಭ್ರಷ್ಟಾಚಾರ ವಿರೋಧಿ, ಉತ್ತಮ ಆಡಳಿತಕ್ಕಾಗಿಯೆಂದು ಜನಚೇತನ ಯಾತ್ರೆ ಆರಂಭಗೊಂಡಂದಿಂನಿಂದಲೂ ಕೇವಲ ಕೇಂದ್ರದ ಬಗ್ಗೆ ಮಾತ್ರ ಮಾತನಾಡುವ ಅದ್ವಾನಿ ತಮ್ಮ ಪಕ್ಷದ ಆಡಳಿತವಿರುವ ರಾಜ್ಯಗಳಲ್ಲಿನ ಭ್ರಷ್ಟ ವಿದ್ಯಾಮಾನಗಳ ಬಗ್ಗೆ ಚ ಕಾರ ಎತ್ತದಿರುವುದು ಅಧಃಪತನವಲ್ಲವೇ?. ಅದ್ವಾನಿ ಯಾತ್ರೆಯುದ್ದಕ್ಕೂ ಕಂಪನಿ ಕೊಡುತ್ತಿರುವ ಅನಂತಕುಮಾರ್ ಹುಡ್ಕೋ ಹಗರಣದ ಅಪರಾಧಿ. ರಾಷ್ಟ್ರೀಯ ಅದ್ಯಕ್ಷ ಗಡ್ಕರಿ ಗಣಿಗಳ್ಳ ರೆಡ್ಡಿಗಳಿಂದ ಕಾರು, ಬಂಗಾರದ ಖಡ್ಗ, ಕಾಸು ಪಡೆದು ಕೃತಾರ್ಥರಾಗಿದ್ದರೆ, ವಿರೋಧ ಪಕ್ಷದ ನಾಯಕಿ ಸುಷ್ಮಾ ಅವರ ತಾಯಿ. ಅಂದರೆ ಲಾಲ್ ಕೃಷ್ಣ ಯಾವ ಮುಖವಾಡ ಹಾಕಿ ಇಲ್ಲಿಗೆ ಬರುತ್ತಾರೆ? ಯಾರ ಭ್ರಷ್ಟಾಚಾರದ ವಿರುದ್ಧ ಮಾತನಾಡುತ್ತಾರೆ? ಹವಾಲ ಕೇಸ್ ಬಗ್ಗೆಯೇ ಅಥವಾ ಮುತ್ಸದ್ದಿ ವಾಜಪೇಯಿ ಆಡಳಿತದಲ್ಲಿನ ಕಾರ್ಗಿಲ್ ಯೋಧರ ಶವ ಪೆಟ್ಟಿಗೆ ಹಗರಣದ ಕುರಿತೋ, ಇಲ್ಲವೇ ರಕ್ಷಣಾ ಹಗರಣವೋ,ಪ್ರಿಯ ಬಾಲಂಗೋಚಿ ಅನಂತ ಲೀಲೆಗಳ ಬಗೆಗೋ, ಇಲ್ಲ ಯಡ್ಡಿ, ರೆಡ್ಡಿ, ಚೆಡ್ಡಿಗಳ ಮಹಾ ಮಹಿಮೆಂಗಳು, ಬೆಂಬಲಕ್ಕೆ ನಿಂತ ಫಲಾನುಭವಿಗಳಾದ ಸಂವಿಧಾನೇತರ ಶಕ್ತಿಗಳಾದ ಕೇಶವ ಶಿಲ್ಪ, ನಾಗಪುರದ ನೀತಿವಂತಿಕೆಯೋ, ಸ್ವತಃ ಸದಾನಂದಗೌಡರು, ಪಕ್ಷಾಧ್ಯಕ್ಷ ಈಶ್ವರಪ್ಪನವರುಗಳ, ವಂಚನೆಗಳ ಗೊಂಚಲು ಸಚಿವ ಸಂಪುಟದ ಕುರಿತೋ, ಹಾಗಾದರೆ ಯಾರ ವಿರುದ್ಧ ಈ ಯಾತ್ರೆ? ಹೋಗಲಿ, ಇಂದಿನ ಭ್ರಷ್ಟಾಚಾರ, ಹಗರಣಗಳು ಇಷ್ಟು, ಇನ್ನಷ್ಟು ಬೆಳೆದು ಸ್ಫೋಟಗೊಳ್ಳಲು ಕಾರಣವಾಗಿರುವ ಉದಾರೀಕರಣ, ಜಾಗತೀಕರಣ ನೀತಿಗಳ ಪರಿಣಾಮಗಳ ಕುರಿತು ಮಾತನಾಡುತ್ತಾರೆಂಯೇ? ನುಂಗಿ ನೊಣೆಯುತ್ತಿರುವ ಕಾರ್ಪೋರೇಟ್ ಕಂಪನಿಗಳ ಕರಾಳ ಕೃತ್ಯಗಳ ಬಗ್ಗೆ ಇವರ ನಾಲಿಗೆ ಹೊರಳುವುದಿಲ್ಲ!. ಇಂತಹ ಸ್ಥಿತಿಯಿಂದಾಗಿಯೇ ಭ್ರಷ್ಟಾಚಾರದ ಬಗ್ಗೆ ಸಮಗ್ರವಾಗಿ ಮಾತನಾಡದೇ ಹರಿಕಥೆ ಹೇಳುತ್ತಿರುವುದು. ಹೇಳುವ ಮಾತಿಗೆ ಅವರೇ ಬದ್ಧವಾಗದಿರುವುದು ಆತ್ಮ ವಂಚನೆಯಲ್ಲವೇ. ಅಂದರೆ ನಿಜ ಉದ್ದೇಶವಾದರೂ ಏನು?. ಬೇರೆಯದ್ದೇ ಅಂತಾ ಸ್ಪಷ್ಟ ಅಲ್ಲವೇ?

ಭ್ರಷ್ಟಾಚಾರದ ಡೀ ನೋಟಿಫಿಕೇಷನ್!

ಆದ್ವಾನಿ ಯಾತ್ರೆ ಆರಂಭವಾದದ್ದೇ ಪ್ರಧಾನಿ ಪಟ್ಟದ ಮೇಲೆ ಆಶೆಯಿರಿಸಿಕೊಂಡಿರುವ ಸುಶ್ಮಾ-ಜೇಟ್ಲಿಗಳ ಆಕ್ಷೇಪಗಳಿಂದ, ನಾಗಪುರದ ಸರಸಂಚಾಲಕರ ಆಜ್ಞೆಯಿಂದಾಗಿ ಪ್ರಧಾನಿ ಆಶೆ ಕೈಬಿಟ್ಟ ಮೇಲೆ ಉಳಿದಿರುವದು ಕನವರಿಕೆ ಮಾತ್ರ. ಈಗಲೂ ಇಂತಹ ಕನವರಿಕೆ ಯಾತ್ರೆಯನ್ನು ಕರ್ನಾಟಕಕ್ಕೆ ಸ್ವಾಗತಿಸಲು ನಾಯಕ ಗಣ ಸಜ್ಜಾಗಿದೆ. ವ್ಯಕ್ತಿ ಮುಖ್ಯವಲ್ಲ ಉತ್ತಮ ಆಡಳಿತ; ಸ್ವಚ್ಛ ರಾಜಕಾರಣದ ಆಚರಣೆ ತರುವುದಾಗಿದೆ ಎಂಬ ಮು.ಮಂ. ಸದಾನಂದಗೌಡರವಿರೋಧಾಭಾಸದ ಹೇಳಿಕೆ ಭ್ರಷ್ಟಾಚಾರದ ಅಜೆಂಡವನ್ನೇ ಡಿ ನೋಟಿಫೈ ಮಾಡಿದಂತಾಗಿದೆ. ಬೆಂಗಳೂರಿನ ಸಿದ್ದತಾ ಸಭೆಗಳಿಂದ ಅಶೋಕ ದೂರ ಉಳಿದಿದ್ದಾರೆ. ಇಲ್ಲಿನ ವ್ಯವಸ್ಥೆಗಳ ಉಸ್ತುವಾರಿ ಧಾರವಾಡದ ಸಂಸದ ಜೋಷಿಗೆ ವಹಿಸಿರುವುದು ಪಕ್ಷದೊಳಗಿನ ಹಳಸಿದ ಸಂಬಂಧಗಳ ದುರ್ವಾಸನೆಯನ್ನು ಹೊರಹಾಕಿದೆ. ಗುಂಪುಗಾರಿಕೆ, ಒಳ ಜಗಳ ಝರ್ಜರಿತ ಬಿಜೆಪಿ ಗುಂಪುಗಳು 30ರ ಸಭೆಯನ್ನು ಹೇಗೆಲ್ಲಾ ಆಚರಿಸಲಿವೆಯೆಂದು ನೋಡಬೇಕಿದೆ.

ಸ್ವಾಗತ ಹೇಗಿರಬೇಕು?

ಹೀಗಿರುವಾಗಲೂ ರಥಯಾತ್ರೆಯನ್ನು ಸಂಘಪರಿವಾರ ತನ್ನ ರಾಜಕಾರಣಕ್ಕೆ ಅನುಗುಣವಾಗಿ ಬಳಸದೇ ಬಿಡುವುದಿಲ್ಲ.ಒಂದೆಡೆ ಭ್ರಷ್ಟಾಚಾರದ ವಿರುದ್ಧದ ಪ್ರತಿಕ್ರಿಯೆ, ಚಳುವಳಿಗಳನ್ನು, ಜನತೆಯ ಅತೃಪ್ತಿಯನ್ನು ಕೇಂದ್ರದ ವಿರುದ್ಧ ಬಳಸುತ್ತಿದೆ. ಅದರದೇನಿದ್ದರೂ ಈಗ ಮುಂದಿನ ಚುನಾವಣೆಯಲ್ಲಿ ದೆಹಲಿ ಗದ್ದುಗೆ ಹಿಡಿಯುವ ಉದ್ದೇಶಕ್ಕೆ ಪೂರ್ಣವಾಗಿ ಇಳಿದಿದೆ. ಕರ್ನಾಟಕದಲ್ಲಿ ವಿರೋಧ ಪಕ್ಷಗಳ ದೌರ್ಬಲ್ಯಗಳನ್ನೇ ಬಿಜೆಪಿ ಬಲವಾಗಿ ಬಳಸುತ್ತಿದೆ. ಇಂತಹ ಗೊಂದಲಗಳ ಸ್ಥಿತಿಯಲ್ಲೂ ಜಾತಿ ಧರ್ಮ, ಹಣವನ್ನು ಬಳಸಿ ಬದುಕುಳಿಯಲು ಯತ್ನಿಸುತ್ತಿದೆ. ಈ ವಾರ ಮಂಗಳೂರಿನ ಸೇಂಟ್ ತೆರೆಸಾ ಶಾಲೆ ಮೇಲೆ ಕಿಡಿಗೇಡಿಗಳೆಂಬ ಚೆ... ಪಡೆ ಧಾಳಿ ನಡೆಸಿ ಮೂರ್ತಿಯನ್ನು ಭಗ್ನಗೊಳಿಸಿದೆ. ಇದು ಆದ್ವಾನಿ ಆಗಮನದ ಪೂರ್ವ ಸಿದ್ಧತೆ ಎಂಬುದರಲ್ಲಿ ಅನುಮಾನವಿಲ್ಲ.

ಭ್ರಷ್ಟಾಚಾರದ ಮುಸುಕಿನಲ್ಲಿ ಕೋಮುವಾದದ ಕತ್ತಿ ಝಳಪಿಸುವ ಯತ್ನಿಸುವ ತಂತ್ರ ತಿಳಿಯದ್ದೇನಲ್ಲ.

ಆದ್ದರಿಂದ ಇಂತಹ ಆದ್ವಾನಿಯನ್ನು ಹೇಗೆ ಸ್ವಾಗತಿಸಬೇಕು?

ಜನಶಕ್ತಿ
ಕನ್ನಡ ವಾರಪತ್ರಿಕೆ

ಬಳ್ಳಾರಿಯಲ್ಲಿ ಭ್ರಷ್ಟಾಚಾರದ ಕುರಿತು ದುಂಡು ಮೇಜಿನ ಸಭೆ

'ಕಾರ್ಪೋರೇಟ್ ವಲಯದ ಹಸ್ತಕ್ಷೇಪದಿಂದ ಭ್ರಷ್ಟಾಚಾರ ಬ್ರಹ್ಮಾಂಡವಾಗಿದೆ'

- ಚಂದ್ರ ಪೂಜಾರಿ

ಅಕ್ಟೋಬರ್ 2 ಮಹಾತ್ಮ ಗಾಂಧೀಜಿಯವರ ಜನ್ಮದಿನ. ಬಳ್ಳಾರಿಯ ಗಾಂಧಿಭವನದಲ್ಲಿ ಸಾಹಿತಿಗಳು, ಬುದ್ಧಿಜೀವಿಗಳು ಹಾಗೂ ಪ್ರಗತಿಪರ ಸಂಘಟನೆಗಳ ಮುಖಂಡರ ನೇತೃತ್ವದಲ್ಲಿ ದುಂಡು ಮೇಜಿನ ಸಭೆ ನಡೆದಿದೆ. ಭ್ರಷ್ಟಾಚಾರ ಮುಕ್ತ ಸಮಾಜಕ್ಕಾಗಿ ಲೋಕಾಯುಕ್ತರ ವರದಿ ಜಾರಿಗೊಳಿಸಬೇಕು ಎಂಬ ಘೋಷಣೆಯಡಿಯಲ್ಲಿ ನಡೆದ ಗುಂಡು ಮೇಜಿನ ಸಭೆಯಲ್ಲಿ ಭ್ರಷ್ಟಾಚರದ ವಿರುದ್ಧ ಬಿಸಿಬಿಸಿ ಚರ್ಚೆಗಳಾದವು. ಜಾಗತೀಕರಣ, ಖಾಸಗೀಕರಣ ಪ್ರಕ್ರೀಯೆಗಳು ಪ್ರಾರಂಭವಾದ ನಂತರದಲ್ಲಿ ದೇಶದಲ್ಲಿ ಭ್ರಷ್ಟಾಚಾರ ತಾಂಡವಾಡುತ್ತಿದೆ. 2ಜಿ ಸ್ಪೆಕ್ಟ್ರ ಹಗರಣ ಆದರ್ಶ ಹೌಸಿಂಗ್ ಸೊಸೈಟಿಹಗರಣ, ಕಾಮನ್‌ವೆಲ್ತ್ ಕ್ರೀಡಾಕೂಟದ ಹಗರಣ ಮುಂತಾದ ಹಗರಣಗಳ ಮೂಲಕ ಲಕ್ಷಾಂತರ ಕೋಟಿ ಹಣವನ್ನು ಕೊಳ್ಳೆ ಹೊಡೆಯಲಾಗಿದೆ ಎಂದು ಕರ್ನಾಟಕ ಪ್ರಾಂತ ರೈತ ಸಂಘದ ಮುಖಂಡರಾದ ಯು.ಬಸವರಾಜ್ ರವರು ತಮ್ಮ ಪ್ರಾಸ್ತವಿಕ ನುಡಿಗಳಲ್ಲಿ ಹೇಳಿದರು. ರಾಜ್ಯದಲ್ಲಿ ಅಧಿಕಾರದಲ್ಲಿರುವ ಬಿ.ಜೆ.ಪಿ. ಸರ್ಕಾರ ಭ್ರಷ್ಟಾಚಾರದಲ್ಲಿ ನಂಬರ್ ಒನ್ ಸ್ಥಾನದಲ್ಲಿದೆ ಎಂದು ಭೂಹಗರಣಗಳು, ಬಳ್ಳಾರಿಯಲ್ಲಿ ನಡೆಯುತ್ತಿರುವ ಗಣಿಲೂಟಿಗಳ ಬಗ್ಗೆ ಪ್ರಸ್ತಾಪಿಸಿದ ಬಸವರಾಜ್‌ರವರು ಕಾಂಗ್ರೆಸ್ , ಜೆಡಿಎಸ್ ಪಕ್ಷಗಳು ಸಹ ಹಗರಣಗಳಲ್ಲಿ ಭಾಗಿಯಾಗಿವೆ ಎಂದು ತಿಳಿಸಿದರು. ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಹಂಪಿ, ವಿಶ್ವವಿದ್ಯಾಲಯದ ಡಾ॥ಚಂದ್ರಪೂಜಾರಿಯವರು ಕಾರ್ಪೋರೇಟ್ ವಲಯಗಳ ಹಸ್ತಕ್ಷೇಪದಿಂದ ಭ್ರಷ್ಟಾಚಾರ.ಬ್ರಹ್ಮಾಂಡ ರೂಪ ಪಡೆದಿದೆ. ಜನಪ್ರತಿನಿಧಿಗಳು ಮತ್ತು ಆಡಳಿತ ಯಂತ್ರಗಳು ಸಂಪೂರ್ಣವಾಗಿ ಭ್ರಷ್ಟಾಗೊಂಡಿವೆ. ಕಾರ್ಪೋರೇಟ್ ವಲಯದ ಸುಲಿಗೆಗೆ ಅನುಕೂಲವಾಗುವಂತೆ ದೇಶದ ಕಾನೂನುಗಳನ್ನು ಬದಲಾಯಿಸಲಾಗುತ್ತಿದೆ ಎಂದು ನೋವಿನಿಂದ ನುಡಿದರು. ಭ್ರಷ್ಟಾಚಾರದಿಂದ ಗಳಿಸಿದ ಹಣದಿಂದ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಗಾಳಿಗೆ ತೂರಲಾಗುತ್ತಿದೆ.ಪಾಳೆಯಗಾರಿ ಮೌಲ್ಯಗಳು ಪ್ರಭಾವಯುತವಾಗಿವೆ. ಸಮಾನತೆಯಿಲ್ಲದ ಸ್ವಾತಂತ್ರ್ಯಕ್ಕೆ ಬೆಲೆಯಿಲ್ಲ ಎಂದರು.

ಬಳ್ಳಾರಿಯ ಗಣಿಲೂಟಿ ದಂಧೆಯಲ್ಲಿ ತೊಡಗಿದ್ದು, ಜೈಲು ಸೇರಿರುವ ಜಿ. ಜನಾರ್ಧನರೆಡ್ಡಿ ಗ್ಯಾಂಗಿನ ದೌರ್ಜನ್ಯಗಳ ವಿರುದ್ಧ ಹೋರಾಟ ನಡೆಸುತ್ತಿರುವ ಗಣಿ ಉದ್ಯಮಿ ಟಪಾಲ್ ಸಣೇಶ್ ಮಾತನಾಡಿ ಗಣಿ ಲೂಟಿಯಲ್ಲಿ ಜನಾರ್ಧನರೆಡ್ಡಿ ಜೊತೆಯಲ್ಲಿ ಅರಣ್ಯ ಇಲಾಖೆ ಸಂಪೂರ್ಣವಾಗಿ ಭಾಗಿಯಾಗಿದೆ. ಅರಣ್ಯ ಇಲಾಖೆಯ ಹಿರಿಯ ಅಧಿಕಾರಿ ಮುತ್ತಯ್ಯ ಭ್ರಷ್ಟಾಚಾರದ ಹಣದಲ್ಲಿ ಅಮೇರಿಕಾದ ಪ್ರವಾಸ ಕೈಗೊಂಡಿದ್ದರು ಎಂದು ತಿಳಿಸಿದರು. ಇಂತಹ ಅಧಿಕಾರಿಗಳ ಮೇಲೆ ರಾಜ್ಯ ಸರ್ಕಾರ ಕ್ರಮ ತೆಗೆದುಕೊಳ್ಳುವುದನ್ನು ಬಿಟ್ಟು, ಕೇವಲ ಸಣ್ಣಪುಟ್ಟ ನೌಕರರ ವಿರುದ್ಧ ಕ್ರಮ ತೆಗೆದು ಕೊಂಡಿರುವುದು ನಾಚಿಕೆಗೇಡಿನ ಸಂಗತಿ ಎಂದರು. ಸಿರಿಗೇರಿ ಪನ್ನರಾಜ್ ಮಾತನಾಡಿ ಗಣಿಚೋರರ ಕೌರ್ಯದ ಬಗ್ಗೆ ಎಳೆ ಎಳೆಯಾಗಿ ಬಿಡಿಸಿಟ್ಟರು. ಕೆ. ನಾಗಭೂಷಣರಾವ್ ಮಾತನಾಡಿ ಅಕ್ರಮ ಗಣಿಗಾರಿಕೆಯನ್ನು ಸಕ್ರಮಗೊಳಿಸುವ ಹುನ್ನಾರ ನಡೆದಿದೆ. ಗಣಿಲೂಟಿ ತಡೆಯುವಲ್ಲಿ ಜಿಲ್ಲೆಯ ಜನತೆಯ ಮೇಲೆ ದೊಡ್ಡ ಹೊಣೆಗಾರಿಕೆ ಇದೆ. ಇದರ ವಿರುದ್ಧ



ಹೋರಾಟಗಳನ್ನು ಹಮ್ಮಿಕೊಳ್ಳಬೇಕೆಂದರು. ಲೋಹಿಯಾ ಪ್ರಕಾಶನದ ಸಿ.ಚನ್ನಬಸವಣ್ಣ ಮಾತನಾಡಿ ಗಣಿಕಳ್ಳರನ್ನು ಮಾಧ್ಯಮಗಳು ಗಣಿಧಣಿಗಳು ಎಂದು ವೈಭವೀಕರಿಸುತ್ತಿರುವುದನ್ನು ತರಾಟೆಗೆ ತೆಗೆದುಕೊಂಡರು. ಹೋರಾಟಗಾರರ ಮೇಲೆ ನಡೆದ ದೈಹಿಕ ಹಲ್ಲೆಗಳನ್ನು ಖಂಡಿಸಿದ ಚನ್ನಬಸವಣ್ಣನವರು ಹೇಡಿತನವೇ ಕ್ರೌರ್ಯ ಬೆಳೆಯಲು ಕಾರಣ. ನಾವು ಹೇಡಿಗಳಲ್ಲ ಎಂಬುದನ್ನು ತೋರಿಸಬೇಕಿದೆ ಎಂದರು. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ನಿಷ್ಠ ರುದ್ರಪ್ಪ, ನ್ಯಾಯವಾದಿ ಕೋಟೇಶ್ವರರಾವ್, ಗಿರಿ ಹನುಮಂತಪ್ಪ ಎರ್ರೆಪ್ಪಗೌಡ, ಮಲ್ಲಿಕಾರ್ಜುನರೆಡ್ಡಿ, ಡಾ॥ ಸತ್ಯನಾರಾಯಣರಾವ್ ಮತ್ತು ಜೆ.ಎಂ.ಎಸ್. ರಾಜಾಧ್ಯಕ್ಷರಾದ ಮಾಳಮ್ಮ ಮಾತನಾಡಿ ಭ್ರಷ್ಟಾಚಾರದ ವಿವಿಧ ಮಜಲುಗಳ ಬಗ್ಗೆ ಚರ್ಚಿಸಿದರು.


ನಿರ್ಣಯಗಳು

* ಲೋಕಾಯುಕ್ತ ವರದಿಯನ್ನು ಜಾರಿಗೊಳಿಸಬೇಕು.
* ಕರ್ನಾಟಕ ಸರ್ಕಾರ ಕಾರ್ಪೋರೇಟ್ ಸಂಸ್ಥೆಗಳಿಗೆ ಸಾವಿರಾರು ಎಕರೆ ಭೂಮಿಯನ್ನು ಕೊಡಲು ತೆಗೆದು ಕೊಂಡಿರುವ ನಿರ್ಣಯವನ್ನು ಸಭೆ ಖಂಡಿಸಿತು. ಈ ಆದೇಶವನ್ನು ಹಿಂಪಡೆಯ ಬೇಕೆಂದು ಒತ್ತಾಯಿಸಲಾಯಿತು ಗಣಿ ರಾಷ್ಟ್ರೀಕರಣಗೊಳಿಸಬೇಕು ಹೋರಾಟಗಾರರ ಮೇಲೆ ಹಾಕಿರುವ ಮೊಕದ್ದಮೆಗಳನ್ನು ಹಿಂಪಡೆಯಬೇಕು ಎಂಬ ನಿರ್ಣಯಗಳನ್ನು ತೆಗೆದು ಕೊಳ್ಳಲಾಯಿತು. ಜಿಲ್ಲೆಯಾದ್ಯಂತ ಜಾಥಾ ಹಮ್ಮಿಕೊಳ್ಳಲು ಸರ್ವಾನು ಮತದ ನಿರ್ಣಯ ಅಂಗೀಕರಿಸಲಾಯಿತು. ಡಿ.ಜಿ. ವಿಟ್ಠಲ್‌ರವರನ್ನು ಸಂಚಾಲಕರನ್ನಾಗಿ ಆಯ್ಕೆ ಮಾಡಲಾಯಿತು.

ನಾಗರಾಜ್ ಪತ್ತಾರ ರವರ ಕ್ರಾಂತಿಗೀತೆಯೊಂದಿಗೆ ಪ್ರಾರಂಭವಾದ ಸಭೆಯ ಅಧ್ಯಕ್ಷತೆಯನ್ನು ಹಿರಿಯರಾದ ಟಿ.ಜಿ. ವಿಟ್ಠಲ್ ವಹಿಸಿದ್ದರು. ಸಭೆಯಲ್ಲಿ ಆರ್.ಎಸ್. ಬಸವರಾಜ್, ಪೀರ್‌ಮಹ್ಮದ್, ಹುಲಿಕಟ್ಟಿ ಚನ್ನಬಸಪ್ಪ, ಚಂದ್ರಕುಮಾರಿ, ಮುಂತಾದವರು ಭಾಗವಹಿಸಿದ್ದರು. ಜೆ. ಸತ್ಯಬಾಬು ಸ್ವಾಗತಿಸಿದರು, ಎಂ. ಜಂಬಯ್ಯನಾಯಕ ವಂದಿಸಿದರು.

ವರದಿ:-ಹುಲಿಕಟ್ಟಿ ಚನ್ನಬಸಪ್ಪ

ಲಿಂಗಸೂರು: ಅಸಭ್ಯ ನಡವಳಿಕೆ ಅಧಿಕಾರಿಗೆ ಛೀಮಾರಿ ಅಂಗನವಾಡಿ ನೌಕರರಿಂದ CDPO ಕಛೇರಿಗೆ ಮುತ್ತಿಗೆ



ಲಿಂಗಸೂಗೂರು ತಾಲ್ಲೂಕಿನ CDPO ಅಂಗನವಾಡಿ ಶಿಕ್ಷಕಿಯ ಜೊತೆ ಅಸಭ್ಯವಾಗಿ ಅಗೌರವದಿಂದ ಮಾತನಾಡುವುದನ್ನು ವಿರೋಧಿಸಿ CDPO ಕಾರ್ಯಾಲಯವನ್ನು ಮುತ್ತಿಗೆ ಹಾಕಿ ಪ್ರತಿಭಟಿಸಲಾಯಿತು. ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕಾಂ॥ ಶೇಕ್ಷಾಖಾದ್ರಿಯವರು CDPO ಇದೇ ವರ್ತನೆ ಮುಂದುವರೆಸಿದರೆ ಪರಿಣಾಮ ಬೇರೆಯಾಗುತ್ತೆ ಎಂದು ಎಚ್ಚರಿಸಿದರು. ಸ್ಥಳದಲ್ಲಿದ CDPO "ನನಗೆ ಮನವಿ ಪತ್ರ ನೀಡಿ. ನಾನು ಮಾತನಾಡುತ್ತೇನೆ" ಎಂದು ವಾದಕ್ಕೆ ಇಳಿದಾಗ "ತಪ್ಪು ಮಾಡಿದವರಿಗೆ ಮನವಿ ನೀಡುವುದಿಲ್ಲ ಹಾಗೂ ಮಾತನಾಡಲು ಅವಕಾಶ ನೀಡುವುದಿಲ್ಲ" ಎಂದಾಗ ವಾಗ್ವಾದ ಪ್ರಾರಂಭವಾಯಿತು. ಸ್ಥಳದಲ್ಲಿದ ಪೋಲಿಸರು CDPO ಅವರನ್ನು ಒಳಗೆ ಕಳುಹಿಸಿದರು. ಸಂಘದ ಅಧ್ಯಕ್ಷೆ ಕಾಂ॥ ಸುಜಾತಾ, ಕಾಂ॥ ಸೋಮಮ್ಮ, ಕಾಂ॥ ಶಿವಗಂಗಮ್ಮ, ಕಾಂ॥ ಯಂಕೋಬ ಭಾಗವಹಿಸಿದರು.

ಅಂತರ್‌ರಾಜ್ಯ ಮೀನು ಸಾಗಣೆ ವಿವಾದ ಬಗೆಹರಿಸಿದ ಸಿಐಟಿಯು, ಡಿವೈಎಫ್‌ಐ

ಕರ್ನಾಟಕ ಮತ್ತು ಇತರ ರಾಜ್ಯಗಳಿಂದ ಮೀನುಸಾಗಣೆ ಮಾಡುತ್ತಿದ್ದ ಲಾರಿಗಳು ದುರ್ನಾತ ಬೀರುವ ನೀರನ್ನು ರಸ್ತೆಯ ಮೇಲೆ ಚೆಲ್ಲುತ್ತಾ ಸಾಗುತ್ತಿರುವುದು ಕೇರಳದ ನಾಗರಿಕರ ಆಕ್ರೋಶಕ್ಕೆ ಕಾರಣವಾಗಿತ್ತು. ಈ ದುರ್ವಾಸನೆ ಚೆಲ್ಲುವ ವಾಹನಗಳನ್ನು ಮಾತ್ರ ತಡೆದು ನಿಲ್ಲಿಸುವ ಪ್ರತಿಭಟನಾ



ಕಾರ್ಯಕ್ರಮವನ್ನು ಕೇರಳ ಕಣ್ಣೂರಿನ ಡಿವೈಎಫ್‌ಐ ಘಟಕ ಹಮ್ಮಿಕೊಂಡಿತ್ತು. ಆದರೆ ಇದನ್ನು ದುರುಪಯೋಗಪಡಿಸಲು ಡಿವೈಎಫ್‌ಐ ವಿರೋಧಿ ದುಷ್ಟ ಶಕ್ತಿಗಳು ಕರ್ನಾಟಕದ ವಾಹನಗಳನ್ನು ತಡೆಗಟ್ಟಿ ಲೈಸೆನ್ಸ್ ಕಸಿಯುವುದು, ಮೊಬೈಲ್ ಕದಿಯುವುದು, ಚಾಲಕರ ಮೇಲೆ ಹಲ್ಲೆ ಮಾಡುವುದು ಇತ್ಯಾದಿ ನಡೆಯುತ್ತಿತ್ತು.

ಕರ್ನಾಟಕದ ವಾಹನ ಚಾಲಕರು ಮೋಟಾರ್ ಟ್ರಾನ್ಸ್‌ಪೋರ್ಟ್ ಎಂಡ್ ಎಂಜಿನಿಯರಿಂಗ್ ವರ್ಕರ್ಸ್ ಯೂನಿಯನ್ (ಸಿಐಟಿಯು) ಸದಸ್ಯರಾಗಿದ್ದು ಅವರ ವಿನಂತಿ ಮೇರೆಗೆ ಈ ಸಮಸ್ಯೆಯನ್ನು ಪರಿಹರಿಸಲು ಸಿಐಟಿಯು ಸಂಘಟನೆಯ ನಾಯಕರು ಅಕ್ಟೋಬರ್ 21 ರಂದು ಕಣ್ಣೂರಿಗೆ ಭೇಟಿಯಿತ್ತು, ಡಿವೈಎಫ್‌ಐ ಮುಖಂಡರು ಹಾಗೂ ಸೀಫುಡ್ ಬಯರ್ಸ್ ಅಸೋಸಿಯೇಶನ್ ಹಾಗೂ ವಾಹನ ಚಾಲಕರು ಅಲ್ಲಿನ ಪ್ರಭಾವಿ ನಾಯಕರೊಡನೆ ಮಾತುಕತೆ ನಡೆಸಿದರು.

ಸುಮಾರು 12 ದಿನಗಳ ಕಾಲ ವಿವಿಧೆಡೆ ಹಲ್ಲೆಗೊಳಗಾಗುತ್ತಿದ್ದ ಚಾಲಕರು ಕೊನೆಗೆ 3 ದಿನಗಳ ಕಾಲ ಆ ಮಾರ್ಗದಲ್ಲಿ ಮೀನು ಸಾಗಣೆಯನ್ನೇ ನಿಲ್ಲಿಸಿದ್ದರು. ಮಾತುಕತೆಯ ಸಂದರ್ಭದಲ್ಲಿ ಕೆಲವು ಸಮಯಸಾಧಕ ದುಷ್ಟ ಶಕ್ತಿಗಳು ವಾಹನ ಚಾಲಕರಿಗೆ ಹಲ್ಲೆ ನಡೆಸಿದ್ದು ತಿಳಿದುಬಂತು. ದುರ್ನಾತ ಚೆಲ್ಲುವ ವಾಹನಗಳನ್ನು ಮಾತ್ರ ಡಿವೈಎಫ್‌ಐ ನವರು ತಡೆದಿರುವುದನ್ನು ವಾಹನ ಚಾಲಕರು ಅರಿತುಕೊಂಡರು. ಮೀನು ಸಾಗಾಟ ವಾಹನದಿಂದ ಸೋರುವ ದುರ್ನಾತದ ನೀರು ರಸ್ತೆಯುದ್ದಕ್ಕೂ ಚೆಲ್ಲುತ್ತಾ ಹೋಗದಂತೆ ಕ್ರಮ ಕೈಗೊಳ್ಳುವ ಬಗ್ಗೆ ಚರ್ಚೆ ನಡೆಸಲಾಯಿತು. ಈ ಬಗ್ಗೆ ವಾಹನ ಚಾಲಕರು ಸೂಕ್ತ ಕ್ರಮ ಕೈಗೊಳ್ಳುವ ಬಗ್ಗೆ ಭರವಸೆ ನೀಡಿದ ಹಿನ್ನೆಲೆಯಲ್ಲಿ ಮೀನು ಸಾಗಾಟ ವಾಹನಗಳಿಗೆ ತಡೆಯೊಡ್ಡದಿರಲು ಡಿವೈಎಫ್‌ಐ ಹೋರಾಟ ಸಮಿತಿಯು ಒಪ್ಪಿಗೆ ನೀಡಿತು.


ಕಣ್ಣೂರಿಗೆ ಹೋಗಿ ಮಾತುಕತೆ ನಡೆಸಿದ 15 ಮಂದಿಯ ತಂಡದಲ್ಲಿ ಸಿಐಟಿಯು ದ.ಕ.ಜಿಲ್ಲಾ ಸಮಿತಿ ಪ್ರಧಾನ ಕಾರ್ಯದರ್ಶಿ ವಸಂತ ಆಚಾರಿ, ಮಂಗಳೂರು ನಗರ ಸಮಿತಿ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್; ಡಿವೈಎಫ್‌ಐ ದ.ಕ.ಜಿಲ್ಲಾಧ್ಯಕ್ಷ ಮುನೀರ್ ಕಾಟಿಪಳ್ಳ, ಚಾಲಕರ ಸಂಘದ ಅಧ್ಯಕ್ಷ ಇಸ್ಮಾಯಿಲ್, ಕಾರ್ಯದರ್ಶಿ ಅಬ್ದುಲ್ಲತೀಫ್ ಮೊದಲಾದವರು ಭಾಗವಹಿಸಿದ್ದರು. ಸಿಐಟಿಯು ಹಾಗೂ ಕೇರಳ ಡಿವೈಎಫ್‌ಐ ನಡೆಸಿಕೊಟ್ಟ ಸಂಧಾನಕ್ಕೆ ವಾಹನ ಚಾಲಕರು ತೃಪ್ತಿ ಹಾಗೂ ಸಂತೋಷ ವ್ಯಕ್ತಪಡಿಸಿದ್ದಾರೆ.

★

ಡಿವೈಎಫ್‌ಐ ನೇತೃತ್ವದಲ್ಲಿ ನಿವೇಶನರಹಿತರಿಂದ ಪಾಲಿಕೆ ಎದುರು ಪ್ರತಿಭಟನೆ:

ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ 2003 ರಲ್ಲಿ 1980 ಮಂದಿ ನಿವೇಶನ ರಹಿತರನ್ನು ಗುರುತಿಸಲಾಗಿತ್ತು. ಆ ಬಳಿಕ ಇಲ್ಲಿನವರೆಗೂ ನಿವೇಶನ ರಹಿತರು ನಿವೇಶನ ಒದಗಿಸಬೇಕೆಂದು ಕೋರಿ ಪಾಲಿಕೆಗೆ ಆಗಿಂದಾಗ್ಗೆ ಮನವಿ ಸಲ್ಲಿಸುತ್ತಿದ್ದರೂ ಪಾಲಿಕೆ ಏನೊಂದೂ ಕ್ರಮ ಕೈಗೊಳ್ಳುತ್ತಿಲ್ಲ. ಡಿವೈಎಫ್‌ಐ ಮಂಗಳೂರು ನಗರ ಸಮಿತಿಯ ವತಿಯಿಂದಲೂ ಕೆಲವು ತಿಂಗಳ ಹಿಂದೆ ಪಾಲಿಕೆಗೆ ನಿವೇಶನ ರಹಿತರಿಂದ ಅರ್ಜಿ ಕೊಡಿಸಲಾಗಿತ್ತು; ಈಗಲೂ ಪಾಲಿಕೆ ಮೂಕವಾಗಿದೆ. ಇದನ್ನು ಪ್ರತಿಭಟಿಸಿ ಡಿವೈಎಫ್‌ಐ ನೇತೃತ್ವದಲ್ಲಿ ನಿವೇಶನ ರಹಿತರು ಅಕ್ಟೋಬರ್ 24 ರಂದು ಪಾಲಿಕೆ ಕಚೇರಿ ಮುಂದೆ ಬೃಹತ್ ಪ್ರತಿಭಟನಾ ಪ್ರದರ್ಶನ ನಡೆಸಿದರು.

ಜಾಗತೀಕರಣ, ಉದಾರೀಕರಣ ನೀತಿಯಿಂದ ಭೂಮಿಯ ಬೆಲೆ ಗಗನಕ್ಕೇರುತ್ತಿದ್ದು, ತಲೆಯ ಮೇಲೊಂದು ಸೂರು ಹೊಂದಲು ಮನೆ ನಿವೇಶನ ಪಡೆಯುವ ಹಕ್ಕಿನಿಂದ ಮಂಗಳೂರಿನ ಬಡವರು ವಂಚಿತರಾಗಿದ್ದಾರೆ. ಬಂಡವಾಳಶಾಹಿಗಳು, ಕೈಗಾರಿಕೋದ್ಯಮಿ ಗಳಿಗೆ ನಿವೇಶನ ಒದಗಿಸಿಕೊಡುವ ಸರಕಾರ ಹಾಗೂ ಜನಪ್ರತಿನಿಧಿಗಳು ರಿಯಲ್ ಎಸ್ಟೇಟ್ ಲಾಬಿಗೆ ಮಣಿಯುತ್ತಿವೆ.



ಯೋಜನೆಗಳಿಗಾಗಿ ವಶಪಡಿಸಿಕೊಂಡ ಭೂಮಿಯನ್ನು ಸರಕಾರೀ ಆದೇಶದ ಮೂಲಕ ಡಿನೋಟಿಫೈ ಮಾಡಿ ಬಿಜೆಪಿ ಸರಕಾರದಿಂದ ಮಂತ್ರಿಗಳು ಪ್ರಭಾವಿಗಳು ತಮ್ಮ ಬಂಧುಗಳಿಗೆ ಅಗ್ಗದ ದರಕ್ಕೆ ಕೊಡಲು ಬೇಕಾದಷ್ಟು ಜಮೀನುಗಳಿವೆ. ನಿವೇಶನಗಳು ಲಭ್ಯವಿಲ್ಲದ್ದರಿಂದ ಮನೆ ಮಕ್ಕಳ ಕುಟುಂಬ ವಿಸ್ತರಿಸುತ್ತಿದ್ದರೂ, ಒಂದೇ ಮಾಡಿನ ಕೆಳಗೆ ಮೂರ್‍ನಾಲ್ಕು ಕುಟುಂಬಗಳು ವಾಸ ಮಾಡುವ ಪರಿಸ್ಥಿತಿಯಿದೆ. ಮಂಗಳೂರಲ್ಲಂತೂ ಹೊಸ ಹೊಸ ಕೈಗಾರಿಕೆಗಳು ಆಗಮಿಸುತ್ತಿರುವುದರಿಂದ, ಅಲ್ಲಿ ದುಡಿಯಲಿಕ್ಕೆಂದು ಆಗಮಿಸುವ ಹೊರ ಊರುಗಳ ಕೆಲಸಗಾರರು ಸ್ಪರ್ಧೆಯಲ್ಲಿ ಬಾಡಿಗೆ ಮನೆ ಪಡೆಯುತ್ತಿರುವುದರಿಂದ, ವಿಸ್ತರಣೆಗೊಂಡ ಸ್ಥಳೀಯ ಕುಟುಂಬಗಳು ಹೆಚ್ಚಾಗಿರುವ ಬಾಡಿಗೆಯ ಮನೆಗಳಿಗೂ ಹೋಗಲಾರದೆ ಅವಿಭಕ್ತ ಕುಟುಂಬವಾಗಿಯೇ ಕಷ್ಟಪಡುತ್ತಿದ್ದಾರೆ. ಮಂಗಳೂರು ನಗರ ಪಾಲಿಕೆ ವ್ಯಾಪ್ತಿಯಲ್ಲಿ ಎಲ್ಲವೂ ಖಾಸಗೀಕರಣಗೊಳಿಸಲಾಗುತ್ತಿದೆ. ಶಿಕ್ಷಣವಂತೂ ಖಾಸಗಿಯವರ ಕೈಯಲ್ಲೇ ಇದೆ. ಬಡವರಾದರೂ ಉಚಿತ ನಿವೇಶನವನ್ನು ಪಡೆಯುವುದೂ ಕನಸೇ ಆಗಿದೆ. ಪಾಲಿಕೆ ಹಾಗೂ ಸರಕಾರಗಳು ನಿವೇಶನವನ್ನು ನೀಡದೇ ಹೋದಲ್ಲಿ ಸರ್ಕಾರೀ ಭೂಮಿಯನ್ನು ನಿವೇಶನ ರಹಿತರು ಆಕ್ರಮಿಸಬೇಕಾದ ಪರಿಸ್ಥಿತಿ ಉದ್ಭವಿಸಬಹುದು – ಎಂಬುದಾಗಿ ಪ್ರಕರಣವನ್ನುದ್ದೇಶಿಸಿ ಮಾತನಾಡಿದ ನಾಯಕರು ಎಚ್ಚರಿಕೆ ನೀಡಿದರು.

ಡಿವೈಎಫ್‌ಐ ದ.ಕ.ಜಿಲ್ಲಾಧ್ಯಕ್ಷ ಮುನೀರ್ ಕಾಟಿಪಳ್ಳ, ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ಕೆ.ಯಾದವ ಶೆಟ್ಟಿ, ಸಿಐಟಿಯು ದ.ಕ.ಜಿಲ್ಲಾ ಸಮಿತಿ ಪ್ರಧಾನ ಕಾರ್ಯದರ್ಶಿ ವಸಂತ ಆಚಾರಿ, ಮಂಗಳೂರು ನಗರ ಸಮಿತಿ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್, ಡಿವೈಎಫ್‌ಐ ಜಿಲ್ಲಾ ಕಾರ್ಯದರ್ಶಿ ಪಿ.ದಯಾನಂದ ಶೆಟ್ಟಿ ಮಾತನಾಡಿದರು. ಡಿವೈಎಫ್‌ಐ ನಗರ ಸಮಿತಿ ಅಧ್ಯಕ್ಷ ಬಿ.ಕೆ.ಇಮ್ತಿಯಾಜ್, ಕಾರ್ಯದರ್ಶಿ ಸಂತೋಷ್ ಕುಮಾರ್ ಬಜಾಲ್ ಹಾಗೂ ನಗರ ಸಮಿತಿ ಸದಸ್ಯರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

ಈ ಪ್ರತಿಭಟನೆಯ ವೇಳೆ ಸಂಗ್ರಹಿಸಿ ಪಾಲಿಕೆಗೆ ಸಲ್ಲಿಸಿದ್ದ ಅರ್ಜಿಗಳೂ, ಫೆಬ್ರವರಿ 21 ರಂದು ಸಲ್ಲಿಸಿದ ಅರ್ಜಿಗಳೂ ಸೇರಿ ಈ ವರೆಗೆ ಒಟ್ಟು 2250 ಅರ್ಜಿಗಳನ್ನು ಸಲ್ಲಿಸಲಾಗಿದೆ. ಪ್ರದರ್ಶನಕ್ಕೂ ಮೊದಲು ನಗರದ ಬೆಸೆಂಟ್ ಕಾಲೇಜು ವೃತ್ತದಿಂದ ಪಾಲಿಕೆ ಕಚೇರಿವರೆಗೆ ಮೆರವಣಿಗೆಯನ್ನು ನಡೆಸಲಾಗಿತ್ತು. 2000ಕ್ಕೂ ಮೀರಿ ನಿವೇಶನ ರಹಿತರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

*

ದುಡಿಯುವ ಮಹಿಳೆಯರ ರಾಜ್ಯ ಸಮಾವೇಶ

ಕಾರ್ಮಿಕ ಸಂಘಟನೆಗಳ ಚಳುವಳಿ ಕಾರ್ಮಿಕರ ಇತರ ಹಕ್ಕುಗಳ ಜೊತೆಗೆ ದುಡಿಯುವ ಮಹಿಳೆಯರ ಸಮಸ್ಯೆಗಳಿಗೂ ಸ್ಪಂದಿಸಬೇಕು ಎಂಬುದಾಗಿ ಸಿಐಟಿಯು ಅಖಿಲ ಭಾರತ ಕಾರ್ಯದರ್ಶಿ ಕಾ.ಕೆ.ಹೇಮಲತಾ ಅಭಿಪ್ರಾಯಪಟ್ಟರು. ಅವರು ಮಂಗಳೂರಿನಲ್ಲಿ ಅಕ್ಟೋಬರ್ 15 ರಂದು ನಡೆದ ಸಿಐಟಿಯು

ಕಾರ್ಮಿಕ ಸಂಘಟನೆಗಳಲ್ಲಿನ ದುಡಿಯುವ ಮಹಿಳೆಯರ ರಾಜ್ಯ ಸಮಾವೇಶವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು. ಕಾರ್ಮಿಕರ ಹಕ್ಕುಗಳ ಹೋರಾಟದೊಂದಿಗೆನೇ ಮಹಿಳಾ ವಿಶಿಷ್ಟ ಸಮಸ್ಯೆಗಳನ್ನು ಎತ್ತಿಕೊಳ್ಳಬೇಕೆಂದು ಅವರು ಕರೆ ನೀಡಿದರು.

ದುಡಿಯುವ ಪುರುಷರಂತಲ್ಲದೆ ದುಡಿಯುವ ಮಹಿಳೆಯರು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಉದಾಹರಣೆ – ಸಮಾನ ಕೆಲಸಕ್ಕೆ ಅಸಮಾನ ವೇತನ, ಪ್ರತ್ಯೇಕ ಶೌಚಾಲಯಗಳ ಕೊರತೆ, ಶಿಶು ವಿಹಾರಗಳ ಅಭಾವ, ಅಸಂಘಟಿತ ವಲಯದಲ್ಲಿ ಹೆರಿಗೆ ಸೌಲಭ್ಯಗಳಿಲ್ಲದಿರುವುದು ಮತ್ತು ಸಂಘಟಿತ ವಲಯದಲ್ಲೂ ನೇಮಕಾತಿ ಮತ್ತು ಬಡ್ತಿಯಲ್ಲಿ ಪೂರ್ವಗ್ರಹ ಜ್ಯಾರಿ.

ಇವಲ್ಲದೆ, ಲೈಂಗಿಕ ಕಿರುಕುಳಗಳು ಮತ್ತು ಅಪರಾಧಗಳು ಹೇರಳವಾಗಿವೆ ಎಂದು ಅವರು ಹೇಳಿದರು. ಲೈಂಗಿಕ ಕಿರುಕುಳ ಸಂಬಂಧವಾಗಿ ಕೇಂದ್ರ ಸರಕಾರವು ಕರಡು ಮಸೂದೆಯೊಂದನ್ನು ಸಿದ್ಧಪಡಿಸಿದ್ದರೂ ಅದರಲ್ಲಿ ಪ್ರಮುಖ ಎರಡು ಕೊರತೆಗಳಿವೆ ಎಂದು ಅವರು ಹೇಳಿದರು. ಮನೆಗೆಲಸದ ಮಹಿಳೆಯರನ್ನು ಕಾರ್ಮಿಕರಾಗಿ ಈ ಮಸೂದೆ ಪರಿಗಣಿಸುವುದಿಲ್ಲ; ಅದರ ತರ್ಕದಂತೆ ಮನೆಗೆಲಸವು ಸಾರ್ವಜನಿಕ ಸ್ಥಳದಲ್ಲಿ ನಡೆಯುವುದಿಲ್ಲವಾದುದರಿಂದ ಅದು ಮಸೂದೆ ವ್ಯಾಪ್ತಿಗೆ ಬರುವುದಿಲ್ಲ. ನಗರ ಪ್ರದೇಶದಲ್ಲಿ ಇವತ್ತು ಅತ್ಯಂತ ವ್ಯಾಪಕವಾಗಿ ಹಬ್ಬುತ್ತಿರುವ ಮಹಿಳೆಯರ ದುಡಿಮೆ ಇದಾಗಿದ್ದು, ಹೆಚ್ಚು ಮಂದಿಗೆ ಉದ್ಯೋಗ ಒದಗಿಸುತ್ತದೆ ಎಂಬುದನ್ನು ಇದು ಪರಿಗಣಿಸುವುದಿಲ್ಲ. ಈ ಮಸೂದೆಯ ಇನ್ನೊಂದು ಕೊರತೆ ಏನೆಂದರೆ ಇದು

ಪುಟ 12 ಕ್ಕೆ

ಬಂಡವಾಳಶಾಹಿ ಜಗತ್ತಿನ ಪ್ರಮುಖ ಆರ್ಥಿಕ ಪತ್ರಿಕೆಯೊಂದು ಭಾರತ ಒಂದು ಮಹಾಶಕ್ತಿಯಾಗಲು ಕಾಯುತ್ತಿರುವ ದೇಶ ಎಂದಿದೆ. ನಮ್ಮ ಆಳುವ ವರ್ಗಗಳ ಮಂದಿಯೂ ಇಂತಹುದೇ ಭ್ರಮಾಲೋಕದಲ್ಲಿ ವಿಹರಿಸುತ್ತಿದ್ದಾರೆ. ಭಾರತ ನಿಜವಾಗಿಯೂ ಒಂದು ಮಹಾಶಕ್ತಿಯಾಗದಂತೆ ತಮ್ಮ ನವ-ಉದಾರವಾದಿ ಧೋರಣೆಗಳೇ ಬಿಡುತ್ತಿಲ್ಲೆಂಬ ವಾಸ್ತವತೆಯ ಪರಿವೆಯೇ ಅವರಿಗಿದ್ದಂತಿಲ್ಲ. ಅವರು ಮತ್ತು ಅವರ ಸರಕಾರ ಈ ಧೋರಣೆಗಳನ್ನು ಬದಲಿಸಿ ಭಾರತದ ನಿಜವಾದ ಸಾಮರ್ಥ್ಯವನ್ನು ಸಾಕಾರಗೊಳಿಸಬಲ್ಲ ಧೋರಣೆಗಳನ್ನು ಅನುಸರಿಸುವಂತೆ ಒತ್ತಡ ತರುವ ಹೋರಾಟದಲ್ಲಿ ಎದ್ದು ನಿಲ್ಲಬೇಕು ಎಂಬ ಒಂದು ಕರೆಯೇ ಈ ಹಬ್ಬಗಳ ಸಂದರ್ಭದಲ್ಲಿ ನಮ್ಮ ಶುಭಾಶಯ

ಭಾರತ ಒಂದು ಮಹಾಶಕ್ತಿಯಾಗಲು ಕಾಯುತ್ತಿರುವ ದೇಶ?!

ಕ್ರೂರ ವಾಸ್ತವದಿಂದ ದೂರ ಸರಿದಿರುವ ಸ್ವಪ್ನಲೋಕದ ವಿಹಾರಿಗಳು !

'ಪೀಪಲ್ಸ್ ಡೆಮಾಕ್ರಸಿ' ವಾರಪತ್ರಿಕೆಯ ಅಕ್ಟೋಬರ್ 27, 2011 ರ ಸಂಚಿಕೆಯ ಸಂಪಾದಕೀಯಆಧರಿಸಿ

ಇದೀಗ ದೀಪಾವಳಿ, ಈದ್ ಮತ್ತು ಇತರ ಹಬ್ಬಗಳ ಸಮಯ. ಆದರೆ ಈ ಬಾರಿ ಹಬ್ಬಗಳ ಶುಭ ಹಾರೈಕೆಗಳೊಂದಿಗೆ ಎಲ್ಲ ಜೀವನಾವಶ್ಯಕ ವಸ್ತುಗಳ ಬೆಲೆಗಳ ಸತತ ಏರಿಕೆಗಳ ಹೊರೆಗಳ ಅಡಿಯಲ್ಲಿ ನಲುಗುತ್ತಿರುವ ನಮ್ಮ ಬಹುಪಾಲು ಜನಸಮೂಹಗಳ ಸಂಕಟಗಳೊಂದಿಗೆ ಸೌಹಾರ್ದವನ್ನು ಕೂಡ ವ್ಯಕ್ತಪಡಿಸಬೇಕಾಗಿ ಬಂದಿದೆ.

ಈ ಬೆಲೆಯೇರಿಕೆಗಳು ಹಬ್ಬದ ಸಂಭ್ರಮಕ್ಕೆ ತಣ್ಣೀರೆರಚುತ್ತವಷ್ಟೇ ಅಲ್ಲ, ನಮ್ಮ ಜನಗಳ ಜೀವನಮಟ್ಟಗಳನ್ನು ಕೂಡ ಗಮನಾರ್ಹವಾಗಿ ಇಳಿಸುತ್ತಿವೆ. ದಿಲ್ಲಿ ಸರಕಾರದ ಹಬ್ಬದ 'ಉಡುಗೊರೆ'ಯಾಗಿ ವಿದ್ಯುತ್ ದರಗಳ ಏರಿಕೆ ಮಾಡುವುದಾಗಿ ಪ್ರಕಟಿಸಿದೆ. ಇನ್ನೊಂದೆಡೆ ಭಾರತದ ರಿಝರ್ವ್ ಬ್ಯಾಂಕ್ ಮಧ್ಯಮ ವರ್ಗಗಳಿಗೆ ಒಂದು ಭ್ರಾಮಕ ಆಮಿಷವನ್ನು ಪ್ರಕಟಿಸಿದೆ- ವೈಯಕ್ತಿಕ ಉಳಿತಾಯಗಳಿಗೆ ಬ್ಯಾಂಕುಗಳು ಹೆಚ್ಚಿನ ಬಡ್ಡಿದರ ಕೊಡಲು ಅನುಮತಿ ಕೊಡುತ್ತಿರುವುದಾಗಿ ಪ್ರಕಟಿಸಿದೆ. ಆದರೆ ಬಹುಪಾಲು ಜನಗಳಿಗೆ ವೈಯಕ್ತಿಕ ಉಳಿತಾಯವೆಂಬುದೇನೂ ಇಲ್ಲವಲ್ಲ!


ಹುಸಿ ಸಂಭ್ರಮ

ಭಾರತೀಯ ಆಳುವ ವರ್ಗಗಳು ಮತ್ತು ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳದ ಅವರ ನವ-ಉದಾರವಾದಿ ಪೋಷಕರು ಈ ಯಥಾರ್ಥದಿಂದ ದೂರ ತಮ್ಮದೇ ಸ್ವಪ್ನಲೋಕದಲ್ಲಿ ವಿಹರಿಸುತ್ತಿರುವಂತೆ ಕಾಣುತ್ತಿದೆ. ಪಾಶ್ಚಿಮಾತ್ಯ ಪತ್ರಿಕೆ 'ದಿ ಇಕನಾಮಿಸ್ಟ್'ನ ಈ ವಾರದ ಮುಖಪುಟದ 'ಕಥೆ' ಭಾರತ ಕುರಿತಾದದ್ದು. ಅದು 'ಭಾರತದಲ್ಲಿ ವಹಿವಾಟು' ಎಂಬ 34 ಪುಟಗಳ ವಿಶೇಷ ವರದಿಯೊಂದಿಗೆ ಪ್ರಕಟವಾಗಿದೆ. ಭಾರತ "ಒಂದು ಮಹಾಶಕ್ತಿಯಾಗಲು ಕಾಯುತ್ತಿರುವ ದೇಶ, ಅಲ್ಲಿಯ ಸಮಾಜ ಬಹಳ ಸದ್ದು ಮಾಡುತ್ತಿದೆ, ಮತ್ತು ಅಲ್ಲಿಯ ಉದ್ದಿಮೆಗಳು ಓಜಸ್ಸಿನಿಂದ ಓತಪ್ರೋತವಾಗಿವೆ, . ವಿಶ್ವರಂಗಕ್ಕೆ ದಾಪುಗಾಲಿಡುತ್ತಿವೆ" ಎಂದು ಅದು ಹೇಳಿದೆ. ಈ ಮೂಲಕ ಜಾಗತಿಕ ಬಂಡವಾಳಶಾಹಿ ತನ್ನನ್ನು ಹೆಚ್ಚೆಚ್ಚಾಗಿ ಬಿಗಿಯುತ್ತಿರುವ ಸದ್ಯದ ದುಪ್ಪಟ್ಟು ಇಳಿಕೆಯ ಹಿಂಜರಿತದಿಂದ ಪಾರಾಗಲು ಭಾರತವನ್ನು ಒಂದು ನಳಿಕೆಯಾಗಿ ಬಳಸುವ ಆಶಯವನ್ನು ಬಿಂಬಿಸಿದೆ. ನಿಜ, ಈ ವಿಷಯದಲ್ಲಿ ಬಹಳ "ಭ್ರಾಂತಿ" ಇಟ್ಟುಕೊಳ್ಳಬೇಡಿ ಎಂದೂ ಆ ಪತ್ರಿಕೆ ಎಚ್ಚರಿಸಿದೆ. ಅದರ ಮಟ್ಟಿಗೆ ಈ ಎಚ್ಚರಿಕೆಗೆ ಕಾರಣ- ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳ ಮತ್ತು ದೇಶೀ ಕಾರ್ಪೊರೇಟ್‌ಗಳಿಗೆ ತಮ್ಮ ಲಾಭಗಳನ್ನು ಗರಿಷ್ಠಗೊಳಿಸಿಕೊಳ್ಳಲು ಬೇಕಾಗುವಷ್ಟು ಸುಧಾರಣೆಗಳನ್ನು ಭಾರತ ಕೈಗೊಳ್ಳುತ್ತಿಲ್ಲ ಎಂಬುದು. ಆದರೆ ಭಾರತದ ಕಾರ್ಪೊರೇಟ್ ವಲಯದ ಈ ಸಂಭ್ರಮೀಕರಣದಲ್ಲಿರುವ ನಿಜವಾದ 'ಭ್ರಾಂತಿ" ಇದಲ್ಲ. ಭಾರತೀಯ ವಾಸ್ತವತೆಯನ್ನು, ಅಂದರೆ ಎರಡು ಭಾರತಗಳ ಸೃಷ್ಟಿಯನ್ನು ಗುರುತಿಸದಿರುವ ಭ್ರಾಂತಿಯಿದು. ಇದು "ಹೊಳೆಯುತ್ತಿರುವ" ಮತ್ತು "ನರಳುತ್ತಿರುವ" ಭಾರತಗಳ ನಡುವಿನ ಕಂದರ ಅಗಲಗೊಳ್ಳುತ್ತಿರುವ ಪ್ರಕ್ರಿಯೆ ಎಂದು ಮತ್ತೆ-ಮತ್ತೆ ನಾವು ವರ್ಣಿಸಿದ್ದೇವೆ- ಈ ಅಂಕಣಗಳಲ್ಲಿ, ಜನಗಳ ನಡುವೆ ಮತ್ತು ಸಂಸತ್ತಿನಲ್ಲಿಯೂ. ಈ



ಸತ್ಯವನ್ನು ಉಪೇಕ್ಷಿಸಲಾರದ ಭಾರತೀಯ ಆಳುವ ವರ್ಗಗಳು ಈಗ "ಇಂಡಿಯಾ ಮತ್ತು ಭಾರತ" ಎಂಬ ಪದಗಳನ್ನು ಬಳಸಿ ಮಾತನಾಡಲಾರಂಭಿಸಿವೆ.

'ದಿ ಇಕನಾಮಿಸ್ಟ್' ಹರಡಿರುವ ಈ ಹುಸಿ ಸಂಭ್ರಮ ದೇಶದೊಳಗೂ ಪ್ರತಿಫಲನಗೊಳ್ಳುತ್ತಿದೆ. ಜತೆಗೆ ಅದೇ ಭ್ರಾಂತಿ ಕೂಡ. ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯ ಸಭೆಯ ಹಿಂದಿನ ದಿನ ಯೋಜನಾ ಆಯೋಗ ತನ್ನ ಮಾನವ ಅಭಿವೃದ್ಧಿ ವರದಿಯನ್ನು ಬಿಡುಗಡೆ ಮಾಡಿತು. ಭಾರತದ ಕಾರ್ಪೊರೇಟ್ ವಲಯ ಆ ವರದಿ ಹೇಳಿರುವ ಸಂಗತಿಗಳು ಈ ಸಂಭ್ರಮವನ್ನು ದೃಢಪಡಿಸಿದೆ ಎಂಬ ತನ್ನ ವ್ಯಾಖ್ಯೆಯ ಡಂಗುರ ಸಾರುತ್ತಿದೆ. ಒಂದು ರಾಷ್ಟ್ರೀಯ ದೈನಿಕ 'ಭಾರತವು ಇಂಡಿಯಾದ ಸಮಮಟ್ಟಕ್ಕೆ ಬರುತ್ತಿದೆ' ಎಂದು ದೊಡ್ಡಕ್ಷರಗಳ ತಲೆ ಬರಹದಡಿ ಪ್ರಕಟಿಸಿದೆ. "ಸಕಲ ರಾಜಕೀಯ ವ್ಯವಸ್ಥೆಯ 'ಎಲ್ಲರನ್ನು ಒಳಗೊಳ್ಳುವ' ಮಂತ್ರ ಕೇವಲ ಪೊಳ್ಳು ಘೋಷಣೆಯಾಗಿರಲಿಕ್ಕಿಲ್ಲ" ಎಂದು ಅದು ಹೇಳಿದೆ(ಇಂಡಿಯನ್ ಎಕ್ಸ್‌ಪ್ರೆಸ್, ಅಕ್ಟೋಬರ್ 22, 2011). ಇಂತಹ ಅಬ್ಬರದ ತೀರ್ಮಾನಕ್ಕೆ ಕಾರಣ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಮತ್ತು ಮುಸ್ಲಿಮರ ಸೂಚ್ಯಂಕಗಳು ತುಸು ಉತ್ತಮಗೊಂಡಿವೆ ಎಂಬುದು. ಇಷ್ಟಕ್ಕೇ ಈ ವಿಭಾಗಗಳು ಕೊನೆಗೂ ಭಾರತದ ಉಳಿದ



ವಿಭಾಗಗಳ ಮಟ್ಟಕ್ಕೆ ಬರುತ್ತಿವೆ ಎಂದು ಸಾರಲಾಗುತ್ತಿದೆ. ತಮಾಷೆಯೆಂದರೆ, ಇತರ ಹಿಂದುಳಿದ ವಿಭಾಗಗಳೊಂದಿಗೆ ಈ ವಿಭಾಗಗಳೇ ಭಾರತದ ಬಹುಪಾಲು ಜನತೆ. ರಾಷ್ಟ್ರೀಯ ಸರಾಸರಿ ಅಂಕಿ-ಅಂಶಗಳು ಏನೇ ಹೇಳಿದರೂ, ಈ ವಿಭಾಗಗಳ ಪರಿಸ್ಥಿತಿ ಯಾವುದೇ ಗಮನಾರ್ಹ ರೀತಿಯಲ್ಲಿ ಉತ್ತಮಗೊಂಡಿಲ್ಲ ಎಂಬುದು ನಮ್ಮ ಕಣ್ಣೆದುರು ಇರುವ ವಾಸ್ತವತೆ.

ಯಶೋಗಾಥೆ ಮತ್ತು ವಾಸ್ತವತೆ

ಭಾರತದ 'ಯಶೋಗಾಥೆ' ಕುರಿತ ಈ ಸಂಭ್ರಮ ಯೋಜನಾ ಆಯೋಗದ ವರದಿ ಮುಂದಿಟ್ಟಿರುವ ವಾಸ್ತವತೆಯನ್ನು ಮರೆ ಮಾಚುತ್ತದೆ. ನಿಜವಾದ 'ಭ್ರಾಂತಿ' ಇದೇ.

ಇಂದು (2004-2005ರಲ್ಲಿ, ಅಂಕಿ-ಅಂಶಗಳು ಇಲ್ಲಿಯ ವರೆಗಷ್ಟೇ ದೊರೆತಿವೆ) ಸುಮಾರು 31 ಕೋಟಿ ಜನತೆ ಅಧಿಕೃತವಾಗಿ ನಿರೂಪಿಸಿರುವ ಬಡತನದ ರೇಖೆಯ ಕೆಳಗೆ ಬದುಕುತ್ತಿದ್ದಾರೆ ಎಂದು ಈ ವರದಿ ಹೇಳುತ್ತದೆ. ಸ್ವಾತಂತ್ರ್ಯದ ವೇಳೆಗೆ ನಮ್ಮ ಜನಸಂಖ್ಯೆ ಸುಮಾರು 35 ಕೋಟಿ. 1973-74ರಲ್ಲಿ ಭಾರತದಲ್ಲಿ ಮೊದಲ ಬಾರಿಗೆ ಬಡತನವನ್ನು ಅಳೆಯುವ ಕೆಲಸ ಆರಂಭವಾಯಿತು. ಅಂದಿನಿಂದ 2004-05ರ ನಡುವೆ ಅಧಿಕೃತವಾಗಿ ನಿರೂಪಿಸುವ 'ಬಡವರ' ಸಂಖ್ಯೆ ಕೇವಲ 1.9 ಕೋಟಿಯಷ್ಟು ಇಳಿದಿದೆ. ಈ ಬಡತನದ ರೇಖೆ ಭಾರತದಲ್ಲಿ ಹೇಗೋ ಬದುಕುಳಿದಿರುವವರ ಜೀವನ ಮಟ್ಟವನ್ನು ಬಿಂಬಿಸುವಲ್ಲಂತೂ ಅತ್ಯಂತ ಅಸಮರ್ಪಕವಾಗಿದೆ. ಅದು ಬಿಂಬಿಸುವ 'ಬಡವರ' ಸಂಖ್ಯೆಯೂ ಅಷ್ಟೇ ಅಸಮರ್ಪಕವಾಗಿದೆ ಎಂಬುದನ್ನು ಎಲ್ಲರೂ ಒಪ್ಪುತ್ತಾರೆ.

ಒಂದರ್ಥದಲ್ಲಿ, ಈ ವರದಿ ರಾಷ್ಟ್ರೀಯ ಮಾದರಿ ಸರ್ವೆ, ರಾಷ್ಟ್ರೀಯ ಕುಟುಂಬ ಆರೋಗ್ಯ ಸರ್ವೆ ಮತ್ತಿತರ ಸರ್ವೆಗಳ ಆಧಾರದಲ್ಲಿ ನಮ್ಮನ್ನು ದಿಟ್ಟಿಸುತ್ತಿರುವ ಕಟು ವಾಸ್ತವತೆಯನ್ನು ದೃಢಪಡಿಸುತ್ತದೆ. ಇವನ್ನೆಲ್ಲ ಈ ಹಿಂದೆ ನಾವು ಹಲವು ಬಾರಿ ಈ ಪತ್ರಿಕೆಯ ಅಂಕಣಗಳಲ್ಲಿ ವರದಿ ಮಾಡಿದ್ದೇವೆ.

ನಮ್ಮ ದೇಶದ ಗ್ರಾಮೀಣ ಬಡವರಿಗೆ ತಿನ್ನಲು-ಉಣ್ಣಲು ಇಂದಿಗಿಂತ ಎರಡು ದಶಕಗಳ ಹಿಂದೆಯೇ ಚೆನ್ನಾಗಿ ಸಿಗುತ್ತಿತ್ತು ಎಂಬುದನ್ನು ಯೋಜನಾ ಆಯೋಗದ ಈ ವರದಿ ತೋರಿಸುತ್ತದೆ. ಕ್ಯಾಲರಿಗಳ ಮತ್ತು ಬೇಳೆಕಾಳುಗಳ ತಲಾ ಬಳಕೆ 1983ರಿಂದ 2004-05ರ ನಡುವೆ ಗ್ರಾಮೀಣ ಪ್ರದೇಶಗಳಲ್ಲಿ 8% ದಷ್ಟು ಮತ್ತು ನಗರ ಪ್ರದೇಶಗಳಲ್ಲಿ 3.3% ದಷ್ಟು ಇಳಿದಿದೆ. ನಮ್ಮ ದೇಶದ ಯಾವ ರಾಜ್ಯದಲ್ಲೂ ಹಸಿವಿನ ಸೂಚ್ಯಂಕ 10ಕ್ಕಿಂತ ಕಡಿಮೆಯಿಲ್ಲ ಎಂಬುದು ದೇಶದಲ್ಲಿ ಹಸಿವು ಕುರಿತಂತೆ ಆತಂಕಕಾರಿ ಎಂತಹ ಸನ್ನಿವೇಶ ಇದೆ ಎಂಬುದರ ಸಂಕೇತ ನೀಡುತ್ತದೆ.

ಭಾರತದ ಮೂರು ವರ್ಷದ ಕೆಳಗಿನ ಮಕ್ಕಳಲ್ಲಿ ಅರ್ಧದಷ್ಟು ಮಕ್ಕಳು ಅಪೌಷ್ಟಿಕತೆಯಿಂದ ನರಳುತ್ತಿದ್ದಾರೆ. ಇದು ಆಫ್ರಿಕಾದ ಸಹಾರಾ ಮರುಭೂಮಿಯ ಕೆಳಗಿನ ಅತ್ಯಂತ ಬಡ ಪ್ರದೇಶಗಳಿಗಿಂತಲೂ ಕೆಟ್ಟದಾದ ಪರಿಸ್ಥಿತಿ. ಅರ್ಧದಷ್ಟು ಮಕ್ಕಳು ಪೂರ್ಣವಾದ ಸೋಂಕು ನಿವಾರಣೆಗೆ ಒಳಗಾಗಿರುವುದಿಲ್ಲ. ಇದರಿಂದಾಗಿ ಪೂರ್ಣವಾಗಿ ತಡೆಯಬಹುದಾದ ಕಾಯಿಲೆಗಳಿಗೆ ತುತ್ತಾಗುತ್ತಿದ್ದಾರೆ. ನಮ್ಮ ಜನಗಳ ಆರೋಗ್ಯಕ್ಕೆ ಸಂಬಂಧಪಟ್ಟಂತೆ, ಸಾರ್ವಜನಿಕ ಮತ್ತು ಖಾಸಗೀ ವಲಯಗಳನ್ನು ಒಟ್ಟು ಸೇರಿಸಿ ಮಾಡುವ ಖರ್ಚಿನ ಪ್ರಮಾಣ (ಜಿಡಿಪಿಯ ಅನುಪಾತವಾಗಿ) ಇಡೀ ಆಫ್ರಿಕಾದಲ್ಲಿ ಮಾಡುವ ಖರ್ಚಿಗಿಂತಲೂ ಕಡಿಮೆ. ಅರವತ್ತು ವರ್ಷಗಳ ಸ್ವಾತಂತ್ರ್ಯದ ನಂತರವೂ ನಮ್ಮ ನೈರ್ಮಲ್ಯದ ಸ್ಥಿತಿಗತಿ ಯಾವ ಮಟ್ಟದಲ್ಲಿದೆಯೆಂದರೆ

ಪುಟ 14ಕ್ಕೆ

ಭೂಮಿಯಿಂದ ಕೃಷಿಕರನ್ನು ಹೊರದೂಡುವ
ಭೂ ಸುಧಾರಣೆಯ ಮೂಲ ಸತ್ವವನ್ನು ನಾಶಪಡಿಸುವ
ಕೃಷಿಯನ್ನು ಕಂಪನೀಕರಣಗೊಳಿಸುವ
ಗುಜರಾತ್ ಮಾದರಿ ಅಭಿವೃದ್ಧಿಯ
ಕರ್ನಾಟಕ ಅವತರಣಿಕೆಯ ವಿರುದ್ಧ
ಕರ್ನಾಟಕ ರೈತರ, ಕೂಲಿಕಾರರ, ಗ್ರಾಮೀಣ ಕುಶಲ ಕರ್ಮಿಗಳ
ಸಾಮಾಜಿಕ ವಿಜ್ಞಾನಿಗಳ, ಸಾಹಿತಿ, ಕಲಾವಿದರ ಘೋಷಣೆ

ಕರ್ನಾಟಕ ಬಿಜೆಪಿ ವಿನಾಶಕಾರಿ ಗುಜರಾತ್ ಮಾದರಿ!

ಜಿ.ಎನ್. ನಾಗರಾಜ್

90ರ ದಶಕದಲ್ಲಿ ಆರಂಭವಾದ ರೈತಾಪಿ ಜನರ ಬದುಕಿನ ತಲ್ಲಣಗಳು ಇಂದು ತಾರಕಕ್ಕೇರುತ್ತಾ ನಡೆದಿದೆ. ಕರ್ನಾಟಕದಲ್ಲಿ 2008ರಲ್ಲಿ ಅಧಿಕಾರಕ್ಕೆ ಬಂದ ಬಿಜೆಪಿ ಸರ್ಕಾರ ಇಂದು ನಾಲ್ಕು ದಶಕಗಳ ರಾಜ್ಯದಲ್ಲಿ ನಡೆದ ರೈತಾಪಿ ಜನರ ಹೋರಾಟದಿಂದಾಗಿ ಅನುಷ್ಠಾನವಾದ ಭೂ ಸುಧಾರಣೆಯನ್ನು ಸಂಪೂರ್ಣ ಕಿತ್ತು ಹಾಕಲು ಬಯಸಿದೆ. ಸ್ವಾತಂತ್ರ್ಯ ಚಳುವಳಿಯ ಕಾಲದಲ್ಲಿಯೇ ಆರಂಭವಾದ 'ಉಳುವವನೇ ಹೊಲದೊಡೆಯ' ಎಂಬ ಘೋಷಣೆಯ ಭಾಗವಾಗಿ 50 ರ ದಶಕದಿಂದಲೂ ರೈತನಿಗೆ ಭೂಮಿಯನ್ನು ನೀಡುವುದೇ ಸರ್ಕಾರಗಳ ಗುರಿಯಾಗಿತ್ತು. 1970 ರ ದಶಕದಲ್ಲಿ ಗೇಣಿ ರೈತರಿಗೆ ಹಕ್ಕು ನೀಡುವ ಕೆಲಸ ಕರ್ನಾಟಕದ ಕೆಲ ಭಾಗಗಳಲ್ಲಿ ರಭಸವಾಗಿ ನಡೆಯಿತ್ತು. 1980ರ ದಶಕದಲ್ಲಿ ಬಗರ ಹುಕಂ ಸಾಗುವಳಿದಾರರಿಗೆ ಸರ್ಕಾರಿ ಭೂಮಿಯನ್ನು ನೀಡುವ ಕೆಲಸ ಆರಂಭವಾಯಿತು. ಹೀಗೆ ರೈತರಿಗೆ ಭೂಮಿಯನ್ನು ನೀಡುವುದೇ ಮುಖ್ಯ ಘೋಷಿತ ಗುರಿಯಾಗಿತ್ತು. ಆದರೆ ಈಗ ಬಿಜೆಪಿ ಸರ್ಕಾರ ಭೂ ಸುಧಾರಣೆಯ ಫಲವನ್ನು ತಿರುವು ಮುರುವು ಮಾಡಿ ಅದರ ಎಲ್ಲ ಫಲಗಳನ್ನು ಪಲ್ಲಟಗೊಳಿಸಿ ಕೃಷಿ ಭೂಮಿಯನ್ನು ಒಂದು ಕಡೆ ಬೃಹತ್ ಖಾಸಗಿ ಉದ್ಯಮಿಗಳಿಗೆ ರಿಯಲ್ ಎಸ್ಟೇಟ್ ಎಂಬ ಭೂ ಮಾಫಿಯಾಕ್ಕೆ ಕಾನೂನು ಬದ್ಧವಾಗಿ, ಕಾನೂನು ಬಾಹಿರವಾಗಿ ವಶಪಡಿಸಿಕೊಳ್ಳಲು ಅವಕಾಶ ಮಾತ್ರವಲ್ಲ ಆಹ್ವಾನ ನಿಡುತ್ತಿದೆ. ಕೆ.ಐ.ಎ.ಡಿ.ಬಿ., ಭೂ ಬ್ಯಾಂಕ್ ಹೆಸರಿನಲ್ಲಿ ಸರ್ಕಾರಕ್ಕೆ ಖುದ್ದಾಗಿ ರೈತರನ್ನು ಭೂಮಿಯಿಂದ ಹೊರಹಾಕುತ್ತಿದೆ. ಕೃಷಿ ಕೂಲಿಕಾರರನ್ನು ನಿರ್ಗತಿಕರನ್ನಾಗಿ ಮಾಡಿ ಪಟ್ಟಣಗಳಿಗೆ ದೂಡುತ್ತಿದೆ. ಕೃಷಿ ಬಂಡವಾಳಗಾರರಿಗೆ ತೆರೆದ ಆಹ್ವಾನ ನೀಡಿ ಕಂಟ್ರಾಕ್ಟ್ ಕೃಷಿ ಎಂಬ ಹೊಸ ಗೇಣಿದಾರ ರೈತರನ್ನೂ ಸೃಷ್ಟಿಸಲು ಪ್ರಯತ್ನಿಸುತ್ತಿದೆ. ಕೃಷಿ ಭೂಮಿಯನ್ನು ಒಂದು ಕಡೆ ಬೃಹತ್ ಖಾಸಗಿ ಉದ್ಯಮಿಗಳಿಗೆ ಹಾಗೂ ರಿಯಲ್ ಎಸ್ಟೇಟ್ ಎಂಬ ಭೂಮಾಫಿಯಕ್ಕೆ ವಶಮಾಡುತ್ತಲೆ ಮತ್ತೊಂದು ಕಡೆ ಕೃಷಿಯ ಬೀಜ ಮೊದಲಾದ ಪರಿಕರಣ ಹಾಗೂ ಉತ್ಪನ್ನವನ್ನು ಬೃಹತ್ ಕೃಷಿ ಉದ್ಯಮ ಕಂಪನಿಗಳ ಕೈಗೆ ಕೊಡಬಯಸಿದೆ. 1980ರ ಸರ್ಕಾರಿ ಭೂಮಿಯನ್ನು ಬಗರಹುಕುಂ ಸಾಗುವಳಿ ಮಾಡಿದವರಿಗೆ ಹಕ್ಕು ನೀಡುವ ಘೋಷಣೆ ಮತ್ತು ಕ್ರಮ 1990ರ ವರೆಗೂ ಈ ಭೂ ನೀತಿಯೇ ಮುಖ್ಯ ಕಾಳಜಿಯಾಗಿತ್ತು. ಆದರೆ ಬಿಜೆಪಿ ಸರ್ಕಾರ ರೈತರ, ಕೃಷಿ ಕೂಲಿಕಾರರ ಬದುಕನ್ನು ಮಾತ್ರವಲ್ಲದೇ ಗ್ರಾಮೀಣ ಪರಿಸರವನ್ನು ಆಶ್ರಯಿಸಿದ ಕುಶಲ ಕರ್ಮಿಗಳು, ಸಣ್ಣ ಪುಟ್ಟ ವ್ಯಾಪಾರಿಗಳು, ಗ್ರಾಮೀಣ ಸಂಸ್ಕೃತಿಯನ್ನೇ ಪಲ್ಲಟಗೊಳಿಸುವ ಪ್ರಯತ್ನ ಮಾಡಬಯಸಿದೆ. ತಮ್ಮ ಚುನಾವಣಾ ಪ್ರಣಾಳಿಕೆ ಮತ್ತು ಚುನಾವಣಾ ಭಾಷಣಗಳಿಂದ ಆರಂಭಿಸಿ ನಿರಂತರವಾಗಿ ಗುಜರಾತ್ ಮಾದರಿ ಅಭಿವೃದ್ಧಿಯ ಮಂತ್ರ ಪಠಣ ಮಾಡುತ್ತಿದೆ. ಅದೇ ಮಾದರಿಯಲ್ಲಿ ಜಾಗತಿಕ ಹೂಡಿಕೆದಾರರ ಸಮಾವೇಶವನ್ನು ನಡೆಸಿರುವ ರಾಜ್ಯ ಸರ್ಕಾರ 2012 ಜಾಗತಿಕ ಹೂಡಿಕೆದಾರರ ಸಮಾವೇಶಕ್ಕೆ ಈಗಿನಿಂದಲೇ ಸಿದ್ಧತೆ ಆರಂಭಿಸಿದೆ. ಇದೀಗ ಮೊದಲ ಬಾರಿಗೆ ಜಾಗತಿಕ ಕೃಷಿ ಬಂಡವಾಳ ಹೂಡಿಕೆದಾರರ ಸಮಾವೇಶವನ್ನು ನಡೆಸಲು ಯೋಜಿಸಿದೆ.

2010ರಲ್ಲಿ ನಡೆದ ಜಾಗತಿಕ ಹೂಡಿಕೆದಾರರ ಸಮಾವೇಶದ ಬಗ್ಗೆ ಕೊಂಬು ಕಹಳೆಗಳ ಜಾಗಟೆಗಳ ಅದ್ದೂರಿ ಪ್ರಚಾರ ನೀಡಲಾಯಿತು. ಅದು ಒಂದು ಮಹತ್ ಸಾಧನೆಯೆಂಬಂತೆ ಬಿಂಬಿಸಲಾಯಿತು. 389ಲಕ್ಷಕೋಟಿ ಬಂಡವಾಳದ ಹರಿವಿನ ಬಗ್ಗೆ ತುತ್ತೂರಿ ಊದಿ ಅಬ್ಬರ ಮಾಡಲಾಯಿತು. ಅವುಗಳ ಮರೆಯಲ್ಲಿ 67,839 ಎಕರೆ ಭೂಮಿ ಸ್ವಾಧೀನದ ಒಂದು ತಿಂಗಳಿಗೆ 3.5 ಟಿ.ಎಂ.ಸಿ, ವರ್ಷಕ್ಕೆ 42 ಟಿ.ಎಂ.ಸಿ ನೀರು ನೀಡಿಕೆಯ 3541ಲಕ್ಷ ಕೆ.ವಿ(4500 ಮೆ.ವ್ಯಾಟ್) ವಿದ್ಯುತ್ ಅಗತ್ಯ ಮತ್ತು ಅದಕ್ಕಾಗಿ ಮತ್ತೆ ಭೂಮಿ ಸ್ವಾಧಿನದ ಅಗತ್ಯವನ್ನು ಮಾಡಲು ಪ್ರಯತ್ನಿಸಿದರು. ಗಣಿ ಹಾಗೂ ಉಕ್ಕು ತಯಾರಿಕೆಯೇ ಪ್ರಧಾನ ಬಂಡವಾಳ ಆಕರ್ಷಣೆಯೆಂದು ಘೋಷಿಸಿದರು. ಭೂಸ್ವಾಧಿನದ ಹಿಂದಿನ ರೈತರ ಗೋಳನ್ನು ಮರೆಮಾಚಲು ಪ್ರಯತ್ನಿಸಲಾಯಿತು.

ಆದರೆ ಬಳ್ಳಾರಿ ವಿಮಾನ ನಿಲ್ದಾಣದ ಚಾಗನೂರು-ಸಿರಿವಾರ ಗ್ರಾಮಗಳ ರೈತರು, ಬೆಂಗಳೂರು-ಮೈಸೂರು ನೈಸ್ ರಸ್ತೆಯ ಆಕ್ರಮದಿಂದ ನೊಂದ ರೈತರು, ದೇವನಹಳ್ಳಿ ವಿಮಾನ ನಿಲ್ದಾಣ, ಸುತ್ತ ಮುತ್ತ ವಿವಿಧ ತಂತ್ರಜ್ಞಾನಗಳ ಪಾರ್ಕ್‌ಗಳ ಭೂಮಿತೆತ್ತ ರೈತರು, ಬಳ್ಳಾರಿಯಲ್ಲಿ ಮಿಟ್ಟಲ್, ಬ್ರಹ್ಮಣಿ ಉಕ್ಕು ಕಂಪನಿಗಳಿಗಾಗಿ ಭೂಮಿ ತೆರಬೇಕಾಗಿರುವ, ಕುಡತಿನಿ ಮತ್ತು ಸುತ್ತ ಮುತ್ತಲ ಗ್ರಾಮಗಳ ರೈತರು ಉಕ್ಕು ಕಾರ್ಖಾನೆಗಾಗಿ ಭೂಮಿ ಬೇಕಾಗಿರುವ ಗದಗ ಜಿಲ್ಲೆಯ ರೈತರು ಭೂಮಿ ಸ್ವಾಧೀನದ ವಿಷಯವನ್ನು ಮರೆಮಾಚಲು ಬಿಡಲಿಲ್ಲ, ಮಾತ್ರವಲ್ಲ ಕರ್ನಾಟಕದ ಪ್ರಧಾನ ಚರ್ಚೆ ವಿಷಯಗಳಲ್ಲಿ ಒಂದಾಗಿಸಿದ್ದಾರೆ.

ಈ ಭೂಸ್ವಾಧೀನ ಕೈಗಾರಿಕಾ ಬೆಳವಣಿಗೆಯ, ಉದ್ಯೋಗ ನಿರ್ಮಾಣವಾಗದೆ ರಿಯಲ್ ಎಸ್ಟೇಟ್-ಭೂ ಆಕ್ರಮದ ಸ್ವರೂಪವನ್ನು ಪಡೆದುಕೊಂಡಿದೆ. ತಮ್ಮ ಕೈಗಾರಿಕೆಗಳ ಕನಿಷ್ಟ ಅಗತ್ಯವಾದ ಭೂಮಿ ಪಡೆದುಕೊಳ್ಳುವುದಕ್ಕೆ ಸೀಮಿತವಾಗದೆ ಹಲವು ಪಟ್ಟು ಹೆಚ್ಚು ಭೂಮಿ ಪಡೆದುಕೊಳ್ಳುವ ಪ್ರಯತ್ನಗಳು ನಡೆದಿವೆ. ಕೈಗಾರಿಕೆಗಳು ಅಭಿವೃದ್ಧಿಯಾದ ಮೇಲೆ ಹಲವು ಪಟ್ಟು ಹೆಚ್ಚಲಿರುವ ಭೂಮಿಯ ಬೆಲೆಯ ಲಾಭ ಪಡೆಯಲು ರೆಸಾರ್ಟ್, ಹೋಟೇಲ್, ಮನೆ ನಿವೇಶನಗಳ ನಿರ್ಮಾಣಗಳಿಗೆ ಭೂಮಿ ಬಳಸಿಕೊಳ್ಳಲು ಪ್ರಯತ್ನಿಸಲಾಗುತ್ತಿದೆ..



ಫಲವತ್ತಾಗಿಲ್ಲದ, ಒಣ ಭೂಮಿಯನ್ನು ಮಾತ್ರ ಕೈಗಾರಿಕೆಗಳಿಗೆ ಬಳಸಿಕೊಳ್ಳುತ್ತೇವೆ ಎಂದು ಹೇಳುತ್ತಲೇ ಫಲವತ್ತಾದ, ಎರಡು ಬೆಳೆ ಬೆಳೆಯುವ ಭೂಮಿಯನ್ನು, ನೀರಾವರಿ ಭೂಮಿಯನ್ನು ಒಣ ಭೂಮಿಯೆಂದು ನೋಟಿಫಿಕೇಷನ್ ಮಾಡಿ ವಶಪಡಿಸಿಕೊಳ್ಳಲಾಗುತ್ತಿದೆ. ಅದಕ್ಕೆ ಸುತ್ತಮುತ್ತಲ ಭೂಮಿಯ ಮಾರುಕಟ್ಟೆಯ ಬೆಲೆಯ ಅಲ್ಪಾಂಶವನ್ನೆ ನೀಡಲಾಗುತ್ತಿದೆ. ಈ ಅಂಶವೂ ರೈತರ ಕೋಪಕ್ಕೆ ಕಾರಣವಾಗಿದೆ. ಇಂದು ಕೃಷಿಯ ಪರಿಕರಗಳಾದ ಬೀಜ, ಗೊಬ್ಬರ, ಔಷಧಿಗಳ ಬೆಲೆ ಏರಿಕೆ, ಸಹಾಯಧನ ಹಿಂತೆಗೆತ, ಸರ್ಕಾರಿ ಕಂಪನಿಗಳ ಮುಚ್ಚುವಿಕೆ, ರೈತನನ್ನು ಹೆಚ್ಚು ವೆಚ್ಚದ ಕೃಷಿ ಹಾಗೂ ಸಾಲದ ಹೊರೆಗೆ ದೂಡಿದ್ದರೆ, ಬೆಳೆಗಳ ಬೆಲೆಗಳ ಏರಿಳಿತ, ಕುಸಿತ ಇವೆಲ್ಲವೂ ರೈತರನ್ನೂ ಆತ್ಮಹತ್ಯೆಗೆ ದೂಡುತ್ತಿವೆ. ಕೃಷಿಯನ್ನೇ ಕೈ ಬಿಡುವಂತೆ ಮಾಡುತ್ತಿವೆ. ಈ ಪರಿಸ್ಥಿತಿ ಒಳ್ಳೆಯ ಬೆಲೆ ಸಿಕ್ಕರೆ ಭೂಮಿಯನ್ನು ಮಾರೋಣವೆನ್ನುವ ರೈತರ ಸಂಖ್ಯೆ ಹೆಚ್ಚುವಂತೆ ಮಾಡಿದೆ.

ಭೂಮಿಯನ್ನು ವಶಪಡಿಸಿಕೊಳ್ಳುವಾಗ ರೈತರು ಮಾತ್ರವೇ ಅಲ್ಲದೆ ಕೃಷಿಯನ್ನು ಗ್ರಾಮಗಳನ್ನು ಅವಲಂಬಿಸಿದ ವಿವಿಧ ವೃತ್ತಿಗಳ ಜನರ, ವ್ಯಾಪಾರಿಗಳ, ಅನೇಕ ಕಡೆ ಇಡೀ ಗ್ರಾಮವೇ ಎತ್ತಂಗಡಿಯಾಗುತ್ತದೆ ಅಥವಾ ಅವರನ್ನು ನಿರುದ್ಯೋಗಿಗಳನ್ನಾಗಿಸಲಾಗುತ್ತದೆ. ರೈತರಿಗೆ ಸ್ವಲ್ಪ ಪರಿಹಾರವಾದರೂ ಸಿಗುತ್ತದೆ. ಕೃಷಿ ಕೂಲಿಕಾರರೂ ಸೇರಿದಂತೆ ಉಳಿದವರ ಗೋಳನ್ನು ಕೇಳುವವರೆ ಇಲ್ಲ. ರೈತರಿಗೂ ಕೂಡ ಒಮ್ಮೆಗೆ ಸಿಗುವ ಹಣವನ್ನು ಹೇಗೆ ವಿನಿಯೋಗಿಸಬೇಕು ಹಾಗೂ ಜೀವನವನ್ನು ಉತ್ತಮ ಪಡಿಸಿಕೊಳ್ಳಬೇಕು ಎಂಬ ಮಾರ್ಗಗಳೇ ಇಲ್ಲ. ಬೇರೆ ಕಡೆಗಳಲ್ಲಿ ಭೂಮಿಯನ್ನು ಕೊಳ್ಳಲು ಭೂಮಿ ಲಭ್ಯವಿರುವುದಿಲ್ಲ. ಹೀಗಾಗಿ ಹಣ ದುರ್ವ್ಯಯವಾಗುವ ಸಂಭವಗಳೇ ಹೆಚ್ಚು. ಕೆಲವೇ ದಿನಗಳಲ್ಲಿ ಹಣ ಬರಿದು ಮಾಡಿಕೊಂಡು ಜೀವನಕ್ಕಾಗಿ ಪರದಾಡುವ ಪರಿಸ್ಥಿತಿಯೇ ಹೆಚ್ಚು.

ಈ ರೀತಿ ಬಂಡವಾಳವನ್ನು ಆಹ್ವಾನಮಾಡುವುದಕ್ಕಾಗಿ ಬಂಡವಾಳಿಗರ ಮುಂದೆ ಮಂಡಿಯೂರಿ ಅವರು ಹಾಕಿದ ಶರತ್ತುಗಳಿಗೆಲ್ಲಾ ರಾಜ್ಯ ಸರ್ಕಾರ ಒಪ್ಪಿಗೆ ಸೂಚಿಸುವ ಅನಿವಾರ್ಯತೆ ಎದುರಾಗುತ್ತಿದೆ. 2011ರ ಹೂಡಿಕೆ ಸಮಾವೇಶದಲ್ಲಿ ಭಾಗವಹಿಸಲು ಪೋಸ್ಕೋ ಕಂಪನಿಯವರನ್ನೂ ಒಪ್ಪುವಂತೆ ಮಾಡಲು ರಾಜ್ಯ ಸರ್ಕಾರ ಹರಸಾಹಸ ಮಾಡಬೇಕಾಯಿತು. ಭೂಮಿ, ನೀರು, ವಿದ್ಯುತ್‌ಗಳನ್ನು ಅಗ್ಗದ ಬೆಲೆಗೆ ಕೊಡುವುದಲ್ಲದೆ, ಸ್ಟಾಂಪ್ ತೆರಿಗೆ, ಮಾರಾಟ ತೆರಿಗೆ ವಿನಾಯ್ತಿಗಳ ಜೊತೆಗೆ ರಾಜ್ಯದ ಖನಿಜ ನೀತಿಯನ್ನು ಉಲ್ಲಂಘಿಸಿ ಕಬ್ಬಿಣದ ಅದಿರಿನ ರಫ್ತು ಮಾಡುವ ಅವಕಾಶಕೊಡಲು ಒಪ್ಪಿಕೊಳ್ಳಬೇಕಾಯಿತು. ಹೀಗೆ ನೂರಾರು ಕೋಟಿಗಳ ಆದಾಯ ನಷ್ಟದ ಜೊತೆಗೆ ನೈಸರ್ಗಿಕ ಸಂಪತ್ತಿನ ಲೂಟಿಗೆ ಕಾರಣವಾಗುತ್ತಿದೆ. ಇನ್ನೂ ಈ ಎಲ್ಲ ಕೈಗಾರಿಕೆಗಳ ಬೆಳವಣಿಗೆಯನ್ನು ಉದ್ಯೋಗ ನಿರ್ಮಾಣದ ಹೆಸರಿನಲ್ಲಿ ಸಮರ್ಥಿಸಿಕೊಳ್ಳಲಾಗುತ್ತದೆ. ಆದರೆ ಈ ಆಹ್ವಾನಗಳ ಮೇಲೆ ಬರುವ ಕೈಗಾರಿಕೆಗಳು ಯಾಂತ್ರಿಕೃತ ಉತ್ಪಾದನೆಯ ತಂತ್ರಜ್ಞಾನದ ಮೂಲಕ ಅತಿ ಕಡಿಮೆ ಕೆಲಸಗಳನ್ನು ಸೃಷ್ಟಿಸುತ್ತವೆ. ಅಂದಾಜಿನಂತೆ-ಬೃಹತ್ ಕೈಗಾರಿಕೆಗಳಲ್ಲಿ 1999-2000ರ ಬೆಲೆಗಳಲ್ಲಿ ಒಂದು ಕೋಟಿ ಬಂಡವಾಳ ಹೂಡಿಕೆ ಕೇವಲ 6 ಉದ್ಯೋಗಗಳನ್ನು, ಮಧ್ಯಮ ಕೈಗಾರಿಕೆಗಳಲ್ಲಿ

35 ಉದ್ಯೋಗಗಳನ್ನು, ಸಂಘಟಿತ ಸಣ್ಣ ಕೈಗಾರಿಕೆಗಳಲ್ಲಿ 140 ಉದ್ಯೋಗಗಳನ್ನು, ಅಸಂಘಟಿತ ಸಣ್ಣ ಕೈಗಾರಿಕೆಗಳಲ್ಲಿ 311 ಉದ್ಯೋಗಗಳನ್ನು ಸೃಷ್ಠಿಸಬಹುದು. ಇಂದಿನ ಬೆಲೆಗಳಲ್ಲಿ ಈ ಪ್ರಮಾಣ ಇನ್ನಷ್ಟು ಕಡಿಮೆಯಾಗಿದೆ. ಈ ಉದ್ಯೋಗಗಳನ್ನೂ ನಿರ್ವಹಿಸುವ ತರಬೇತಿ ಇಲ್ಲದ ರೈತರು, ಅವರ ಮಕ್ಕಳು ನಿರುದ್ಯೋಗಿಗಳಾಗುತ್ತಾರೆ.

ಗುಜರಾತ್ ಅಭಿವೃದ್ಧಿಯ ಮಾದರಿ– ಬಂಡವಾಳ ಹೂಡಿಕೆದಾರರ ಸಮಾವೇಶ ಗಳು

ಬಂಡವಾಳ ಹೂಡಿಕೆದಾರರ ಸಮಾವೇಶಗಳ ವಿಧಾನ, ಅಬ್ಬರದ ಪ್ರಚಾರ ಸಾಧನೆಯ ಬೊಬ್ಬೆ ಇವೆಲ್ಲವೂ 'ಗುಜರಾತ ಮಾದರಿ'ಯ ಅನುಕರಣೆಯೇ. 2011 ರಲ್ಲಿ ಗುಜರಾತ್‌ನಲ್ಲಿ ನಡೆದ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶದ ನಾಲ್ಕನೆಯ ಶೃಂಗ ಸಭೆಯಲ್ಲಿ 12 ಲಕ್ಷ ಕೋಟಿರೂಗಳ ಬಂಡವಾಳ ಹೂಡಿಕೆ ಬಗ್ಗೆ ಎಂ.ಓ.ಯೂ.ಗಳನ್ನು ಸಹಿ ಮಾಡಲಾಗಿದೆಯೆಂದು ಅಬ್ಬರದ ಪ್ರಚಾರ ನಡೆಸಲಾಯಿತು. ಆದರೆ ಅದೇ ಸಮಯದಲ್ಲಿ ಆ ಸರ್ಕಾರ ಗುಜರಾತ್‌ನಲ್ಲಿ ಭೂ ಲಭ್ಯತೆ, ನೀರಿನ ಲಭ್ಯತೆ, ವಿದ್ಯುತ್ ಲಭ್ಯತೆ ಬಹಳ ಸಮಸ್ಯೆಯಾದ್ದಾಗಿದೆಯೆಂದು ವಿವಿಧ ಸಂದರ್ಭಗಳಲ್ಲಿ ಹೇಳಿಕೆ ನೀಡುತ್ತಿದೆ. ವಿದ್ಯುತ್ ಕಡಿತದ ಸಮಸ್ಯೆ ಬಹಳ ತೀವ್ರವಾಗಿದೆ. ಹಳ್ಳಿಗಳಿಗೆ ಮಧ್ಯರಾತ್ರಿಯ ನಂತರ ಮಾತ್ರ ವಿದ್ಯುತ್ ಮೂರು ಫೇಸ್ ವಿದ್ಯುತ್ ನೀಡಲಾಗುತ್ತಿದೆ. ಕೆಲವು ಪ್ರದೇಶಗಳನ್ನು ಕತ್ತಲ ವಲಯ (Dark Zones) ಎಂದು ಘೋಷಿಸಿ ಇಡೀ ಪ್ರದೇಶಗಳಿಗೆ ವಿದ್ಯುತ್ ನೀಡಲಾಗುತ್ತಿಲ್ಲ. ಇಡೀ ದೇಶದಲ್ಲಿಯೇ ಎಲ್ಲಿಯೂ ಇಲ್ಲದ ಈ ನೀತಿ ಗುಜರಾತ್ ಮಾದರಿಯ ಅಪೂರ್ವ ಉದಾಹರಣೆ.

ಮೋದಿಯಿಂದ ಭೂಮಿ ಕಿತ್ತುಕೊಳ್ಳುವ ಘೋಷಣೆ :

ಹೀಗೆ ಕೈಗಾರಿಕೆ ಹಾಗೂ ಕೃಷಿ ಕೈಗಾರಿಕಾ ಹೂಡಿಕೆಗಳಿಗೆ ಭೂ ಲಭ್ಯತೆ ಕಡಿಮೆಯಾಗಿದೆಯೆಂದು ಘೋಷಿಸಿದ ಸರ್ಕಾರ ಅದಕ್ಕಾಗಿ " ಅಭಿವೃದ್ಧಿ"ಗಾಗಿ ಭೂಮಿಯನ್ನು ಸರ್ಕಾರ ವಶಪಡಿಸಿ (Confisicate) ಕೊಳ್ಳುವುದೆಂದು ಘೋಷಿಸಿದರು. ಆದರೆ ಭೂಮಿ ಕೊಳ್ಳುವುದಾಗಲಿ ಭೂಮಿಯನ್ನು ಕಾನೂನಿನ ಪ್ರಕಾರ ಸ್ವಾಧೀನ ಪಡಿಸಿಕೊಳ್ಳುವುದಾಗಲಿ ಅಲ್ಲ. ಪೋಲಿಸರು ಅಪರಾಧಿಗಳ ಸ್ವತ್ತನ್ನು, ದಾಖಲೆಗಳನ್ನು ವಶಕ್ಕೆ ತೆಗೆದು ಕೊಳ್ಳುವಂತೆ ವಶಪಡಿಸಿಕೊಳ್ಳುವುದು. ಇದೇ " **ಅಪೂರ್ವ ಗುಜರಾತ್ ಮಾದರಿ**". ಗುಜರಾತ್ ಮಾದರಿಯ ಇನ್ನೊಂದು ಅಂಶ ವೆಂದರೆ ಕೃಷಿಕರಲ್ಲದವರು ಎಲ್ಲ ಮಿತಿಗಳನ್ನೂ ಮೀರಿ ಕೃಷಿ ಭೂಮಿಯನ್ನು ಕೊಳ್ಳುವಂತೆ ಅವಕಾಶ ನೀಡಲು ಈಗ ಇರುವ ಎಲ್ಲಾ ಕಾನೂನಿನ ಅಡ್ಡಿಗಳನ್ನು ಕಿತ್ತು ಹಾಕುವುದು.

(ಕರ್ನಾಟಕ ಕೃಷಿ ಬಜೆಟ್ ರೂಪುಗೊಂಡದ್ದು ಗುಜರಾತ್ ಮಾದರಿಯ ಮೇಲೆ. ವಿವರಗಳನ್ನು ಕೆಳಗೆ ನೋಡಬಹುದು. " ಗುಜರಾತ್ ಮಾದರಿ"ಯ ಇನ್ನೊಂದು ಪ್ರಮುಖ ಅಂಶವನ್ನು ಗಮನಿಸಬೇಕು. ಅಕ್ಟೋಬರ್ 28ರ ಅಂದರೆ ನಿನ್ನೆಯ ಪತ್ರಿಕೆಗಳಲ್ಲಿ ಒಂದು ಸುದ್ಧಿಯಿದೆ. ಗೌತಮ್ ಅದಾನಿ ಎಂಬುವರು ಕುಮಾರ ಮಂಗಲಮ್ ಬಿರ್ಲಾ, ಅನಿಲ್ ಅಂಬಾನಿ, ರಾಹುಲ್ ಬಜಾಜ್ ಮೊದಲಾದವರನ್ನು ಮೀರಿ ಭಾರತದ 7ನೇ ಅತಿ ಶ್ರೀಮಂತರಾಗಿದ್ದಾರೆ. ಅವರ ಸಂಪತ್ತು 8.2 ಬಿಲಿಯನ್ ಡಾಲರ್ (ಇಂದಿನ ಬೆಲೆಗಳಲ್ಲಿ 41,000 ಕೋಟಿ ರೂ) ಇವರ ಬಗ್ಗೆ ಗುಜರಾತಿನ ಪತ್ರಿಕೆಗಳು ಅನೇಕ ಮುಖ ಪುಟದ ಸುದ್ಧಿಗಳನ್ನು ಪ್ರಕಟಿಸುತ್ತಾ ಬಂದಿವೆ. ಅವುಗಳಲ್ಲೊಂದು. ಗುಜರಾತ್ ಹೈಕೋರ್ಟ್‌ನ



ಮುಖ್ಯ ನ್ಯಾಯಧೀಶರು ಮೋದಿ ಸರ್ಕಾರ ಅದಾನಿ ಗುಂಪಿಗೆ ನೀಡಿದ್ದ ಅನೇಕ ಭೂ ನೀಡಿಕೆ ಆಜ್ಞೆಗಳ ಬಗ್ಗೆ ಟೀಕೆ ಮಾಡುತ್ತಾ, " ಮೋದಿ ಸರ್ಕಾರಕ್ಕೆ ಯಾರೂ ಕಾಣುವುದಿಲ್ಲ" ಎಂದಿದ್ದಾರೆ. ಜೊತೆಗೆ ಗುಜರಾತಿನ ಮುಖ ಪುಟಗಳಲ್ಲಿ ಮಿಂಚುತ್ತಿರುವ ಸುದ್ಧಿ ಎಂದರೆ ಇದೇ ಅದಾನಿ ಗುಂಪಿಗೆ ಕರ್ನಾಟಕ ಬಿಜೆಪಿ ಮೋದಿಯ ಶಿಫಾರಸಿನ ಮೇರೆಗೆ ಅನೇಕ ಕೊಡುಗೆಗಳನ್ನು ನೀಡಿದೆ. ಗಣಿ ಹಗರಣಕ್ಕೆ ಸಂಬಂಧಿಸಿದ ಇತ್ತಿಚಿನ ಲೋಕಾಯುಕ್ತ ವರದಿಯಲ್ಲಿ ಅದಾನಿ ಗುಂಪು ಹಲವೆಡೆ ಕಾಣಿಸಿಕೊಂಡಿದೆ. ಅದರಲ್ಲಿಯೂ ಬೇಲಿಕೇರಿ ಬಂದರಿನ ಕಬ್ಬಿಣದ ಅದಿರಿನ ಅಪಹರಣ ಪ್ರಕರಣದಲ್ಲಿ. ರೈತರಿಂದ ಭೂಮಿಯನ್ನು ಕಿತ್ತು ಕೊಳ್ಳುವುದು ಅದಾನಿಯಂತಹ ಬಂಡವಾಳ ಶಾಹಿಗಳು ಜಗತ್ತಿನ ಶ್ರೀಮಂತರ ಗುಂಪಿಗೆ ಸೇರುವಂತೆ ಮಾಡುವುದು, ಇದು ಗುಜರಾತ್ ಮಾದರಿಯ ವಿಶೇಷ ಪಾಠ. ಇದನ್ನೂ ಯಡ್ಡಿಯೂರಪ್ಪ/ಸದಾನಂದಗೌಡ ಸರ್ಕಾರ ಚಾಚೂತಪ್ಪದೆ ಅನುಸರಿಸಲು ಹೊರಟಿದೆ.

ಇನ್ನು ಗುಜರಾತ್ ಅಭಿವೃದ್ಧಿಯ ಮಾದರಿಯನ್ನೂ ನೋಡೋಣ. ಅದು ರಫ್ತು ಆಧಾರಿತ ಮತ್ತು ಶ್ರೀಮಂತರ ಬಳಕೆ ಆಧಾರಿತ ಉತ್ಪಾದನೆಯ ಮಾದರಿ.

ಫ್ರೆಶ್ ಹಣ್ಣು, ತರಕಾರಿಗಳ ಬಳಕೆ ಬದಲು ಜಾಮ್, ಜೆಲ್ಲಿ ಪಿಕಲ್ ಸಂಸ್ಕರಣೆಗೊಂಡ ಆಹಾರದ ಶೀಥಲಿಕರಣದ ಸರಪಳಿಗಳ ಮಾದರಿ. ಈ ಸಂಸ್ಕರಣಗಳನ್ನೂ, ಶೀಥಲೀಕರಣಗಳನ್ನು ಮಾಡಲು ಹಾಗೂ ನಗರಗಳಲ್ಲಿ ಮಾರಾಟಮಾಡಲು, ರಫ್ತುಮಾಡಲು ದೊಡ್ಡ ಕೃಷಿ ವಹಿವಾಟಿನ ಕಂಪನಿಗಳೇ ಬೇಕು.

ರೈತರು ತಮ್ಮ ತಾಲ್ಲೂಕಿನ ಕೃಷಿ ಮಾರುಕಟ್ಟೆಗಳ ಬದಲಾಗಿ ರಫ್ತುದಾರರ, ದೊಡ್ಡ ವ್ಯಾಪಾರಿ ಕಂಪನಿಗಳು, ಕೈಗಾರಿಕೆಗಳು ನೇರವಾಗಿ ಹಳ್ಳಿಗಳಲ್ಲಿಯೇ ಕೊಳ್ಳುವ ಮಳಿಗೆಗಳನ್ನು ಸ್ಥಾಪಿಸಿಕೊಳ್ಳುವುದು, ತಮ್ಮದೇ ಸಂಸ್ಕರಣ ಕೇಂದ್ರಗಳಲ್ಲಿ ಸಂಸ್ಕರಿಸುವುದು ಅಥವಾ ಶೀಥಲೀಕರಿಸುವುದು, ಸಾಗಣಿಕೆಯ ಜಾಲಗಳ ಮೂಲಕ ಸಾಗಿಸುವುದು ಈಗ ರಾಜ್ಯದಲ್ಲಿರುವ ಚಿಲ್ಲರೆ ವ್ಯಾಪಾರ/ಕಿರಾಣಿ ವ್ಯಾಪಾರವನ್ನು ತೊಲಗಿಸಿ ಚಿಲ್ಲರೆ ವ್ಯಾಪಾರದ ಬೃಹತ್ ಜಾಲಗಳ ಕಂಪನಿಗಳನ್ನು ಬೆಳೆಸುವುದು. ಈ ಎಲ್ಲಾ ಕಂಪನಿಗಳಿಗೆ ವಿದೇಶದ ವಿವಿಧ ಬಳಕೆದಾರರ ಅಗತ್ಯಗಳಿಗೆ ತಕ್ಕಂತಹ ಬೆಳೆಯಲು ಕಂಟ್ರಾಕ್ಟ್ ಬೆಳೆಗಾರಿಕೆ (ಗುತ್ತಿಗೆ ಬೆಳೆಗಾರಿಕೆ) ಈ ಬೆಳೆಗಾರಿಕೆಗೆ ಅಗತ್ಯವಾದ ತಳಿಗಳನ್ನು ಇತರ ಪರಿಕರಗಳನ್ನು ಒದಗಿಸುವುದೂ ಕೂಡ ವಿದೇಶಿ ಕಂಪನಿಗಳೇ.

ಆ ಮೂಲಕ ಒಂದು ಕಡೆ ರೈತರನ್ನು ಮತ್ತೊಂದು ಕಡೆ ಬಳಕೆದಾರರನ್ನೂ ಬೃಹತ್ ಕಂಪನಿಗಳ ಲಾಭಕೋರತನಕ್ಕೆ ತುತ್ತಾಗಿಸುವುದು.

ಹೀಗೇ ಕೃಷಿ ಸಂಶೋಧನಾ ಸಂಶ್ಥೆಗಳು ಸರ್ಕಾರಿ ಸ್ವಾಮ್ಯದ ಕೃಷಿ ಬೀಜ ಹಾಗೂ ಇತರ ಪರಿಕರ ನಿಗಮಗಳನ್ನು, ಎಪಿಎಂಸಿಗಳನ್ನು ನಗಣ್ಯವಾಗಿಸುವುದು.

ಕೃಷಿ ಬಂಡವಾಳ ಹೂಡಿಕೆದಾರರ ಸಮಾವೇಶದ ಉದ್ದೇಶ, ಶೀಥಲೀಕರಣ, ರಫ್ತು ಹಾಗೂ ಮಾರಾಟದ, ಕೃಷಿ ಬೀಜ ಹಾಗೂ ಸಂಸ್ಕರಣಗಳ. ನೀರಾವರಿ ತಂತ್ರಜ್ಞಾನದ ಕಂಪನಿಗಳನ್ನು ಅವರಲ್ಲಾ ಶರತ್ತುಗಳಿಗೆ ಮಣಿದು ಆಹ್ವಾನಿಸುವುದು.

ಜಾಗತೀಕ ಹೂಡಿಕೆದಾರರ ಹಾಗೂ ಕೃಷಿ ಹೂಡಿಕೆದಾರರ ಶರತ್ತುಗಳನ್ನು ಪೂರೈಸಲು ಈಗಾಗಲೇ ಹಲವು ಕ್ರಮಗಳನ್ನು ಸರಕಾರ ಕೈಗೊಳ್ಳಲಾರಂಭಿಸಿದೆ. ರೈತರಿಗೆಗಾಗಿ ಕೃಷಿ ಬಜೆಟ್ ಒಂದು ಸಾಧನ, ತಮ್ಮ ನಿಜವಾದ ಉದ್ದೇಶವನ್ನೂ ಮರೆಮಾಡುವ ಸಾಧನ

ದೂರದೃಷ್ಠಿ 2020

2010ರ ಜನವರಿಯಲ್ಲಿ ಹೊರತರಲಾದ, ದೂರದೃಷ್ಠಿ 2020ರಲ್ಲಿಯೇ ಬಿಜೆಪಿ ಸರ್ಕಾರದ ಮುಖ್ಯ ಉದ್ದೇಶಗಳು ತೆರೆಮರೆಯಲ್ಲಿ ಅಡಕವಾಗಿವೆ. ಅವುಗಳನ್ನು ಸಮಯ, ಸಂದರ್ಭಗಳನ್ನು ನೋಡಿಕೊಂಡು ಒಂದೊಂದಾಗಿ ಗ್ರಾಮೀಣ ಪ್ರದೇಶದ ದೃಷ್ಠಿಯಿಂದ ಮುಖ್ಯವಾದ

ಕೆಲವು ಅಂಶಗಳು ಹೀಗಿವೆ

(1) ಕೃಷಿಯಲ್ಲಿ ತೊಡಗಿರುವ ದುಡಿಯುವ ಜನಗಳನ್ನು ಇಂದಿನ ಶೇ61ರಿಂದ 2022ರ ವೇಳೆಗೆ ಶೇ 35–40ಕ್ಕೆ ಇಳಿಸುವುದು. ಅಂದರೆ ಒಟ್ಟಿನಲ್ಲಿ 60–70ಲಕ್ಷ ಜನರನ್ನು ಕೃಷಿಯಿಂದ ಬಿಡಿಸಿ ಕೃಷಿಯೇತರ ಕೆಲಸಗಳಲ್ಲಿ ತೊಡಗಿಸುವುದು. ಪ್ರತಿವರ್ಷ ಸುಮಾರು 40ರಿಂಧ 5 ಲಕ್ಷದ ಕೃಷಿಯಲ್ಲಿ ತೊಡಗಿರುವ ದುಡಿಯುವ ಜನಗಳನ್ನು ಹೀಗೆ ವರ್ಗಾಯಿಸ ಬೇಕಾಗಿದೆ.

(2) ಅದಕ್ಕಾಗಿ ದೊಡ್ಡ ಪ್ರಮಾಣದಲ್ಲಿ ಕೈಗಾರಿಕೆಗಳಿಗೆ ಸೇವೆಗಳಿಗೆ ಹಾಗೂ ಕೃಷಿ ಬಂಡವಾಳವನ್ನು ಆಕರ್ಷಿಸಬೇಕು.

(3) ಅದಕ್ಕಾಗಿ ಬೃಹತ್ ಪ್ರಮಾಣದಲ್ಲಿ ಮೂಲಭೂತ ಸೌಕರ್ಯಗಳನ್ನು ನಿರ್ಮಿಸಬೇಕು. ನೀರು, ವಿದ್ಯುತ್, ರಸ್ತೆ, ರೈಲ್ವೆ, ವಿಮಾನ ನಿಲ್ದಾಣಗಳು, ಇತ್ಯಾದಿಗಳಿಗಾಗಿ ದೊಡ್ಡಪ್ರಮಾಣದ ಬಂಡವಾಳ ಬೇಕು.

(4) ಕೃಷಿಯಲ್ಲಿ ಮಾರುಕಟ್ಟೆ, ಶೀಥಲೀಕರಣ, ಸಂಸ್ಕರಣ ಮೊದಲಾದ ಮೌಲ್ಯವರ್ಧಿತ ಕೃಷಿ ಉತ್ಪನ್ನಗಳಿಗೆ ಪ್ರೋತ್ಸಾಹ ನೀಡಬೇಕು.

(5) ಇದಕ್ಕಾಗಿ ಭೂಮಿಪಡೆದುಕೊಳ್ಳಲು ಭೂಸುಧಾರಣಾ ಕಾನೂನಿನ ನಿಯಮ 79ಎ, 79ಬಿಗಳನ್ನು ತಿದ್ದುಪಡಿಮಾಡಬೇಕು.

ಎ.ಪಿ.ಎಂ.ಸಿ ಕಾನೂನು ತಿದ್ದುಪಡಿ

ಹೀಗೆ ಬಿಜೆಪಿ ಸರ್ಕಾರ 2008ರಲ್ಲಿ ಅಧಿಕಾರಕ್ಕೆ ಬಂದ ಕೆಲವೇ ವಾರದಲ್ಲಿ ಆರಂಭವಾದ 'ಗುಜರಾತ್ ಮಾದರಿ' ಯನ್ನು ಕರ್ನಾಟಕದಲ್ಲಿ ಜಾರಿಗೆ ತರುವ ಕ್ರಿಯೆ ಒಂದೊಂದಾಗಿ, ನಿಧಾನವಾಗಿ ಜನರಿಗೆ ಗೊತ್ತಾಗದಂತೆ ಹೊಸ ಭ್ರಮೆಗಳನ್ನು ಮೂಡಿಸುತ್ತಾ ಆರಂಭವಾಗಿದೆ.

ಎ.ಪಿ.ಎಂ.ಸಿ. ಕಾನೂನಿಗೆ ತಿದ್ದುಪಡಿ ವಿಷಯವಾಗಿ ಭಾರಿಗದ್ದಲ ಮಾಡಿದ (ಮೆಟ್ರೊ ಕ್ಯಾಷ್‌ಅಂಡ್‌ಕ್ಯಾರಿ ಮಳಿಗೆಯ ಮುಂದೆ ಅಂದು ವಿರುದ್ಧವಾಗಿ ಪ್ರತಿಭಟಿಸಿದನ್ನು ನೆನಪಿಸಿಕೊಳ್ಳಿ) ಇದು ಮೊದಲನೆಯ ಹೆಜ್ಜೆ. ಬಿಜೆಪಿ ಸಕಾರಕ್ಕೆ ಬಂದ ಮೇಲೆ ಅದನ್ನು ತಣ್ಣಗೆ ಅಂಗೀಕರಿಸಿತ್ತು ಇದು ಬೃಹತ್ ಬಹುರಾಷ್ಟ್ರೀಯ ಕಂಪನಿಗಳಿಗೆ ಕೃಷಿ ಮಾರುಕಟ್ಟೆ ಅಂಗಣದಲ್ಲಿಯೇ ಕೃಷಿ

ಭೂ ಸುಧಾರಣೆ ನಿಯಮಗಳ ತಿದ್ದುಪಡಿ

ಭೂ ಸುಧಾರಣೆಗಾಗಿ ನಡೆದ ಚಳುವಳಿ ಮತ್ತು ನಂತರ ಬಂದ ಕಾನೂನಿನ ಮುಖ್ಯ ಉದ್ದೇಶ ಪಾಳೆಯಗಾರಿ ಭೂಮಾಲಿಕರ ಬಳಿ ಹಾಗೂ ಮಧ್ಯವರ್ತಿಗಳ ಬಳಿ ಸೇರಿಕೊಂಡ ಭೂಮಿಯನ್ನು ವಶಪಡಿಸಿಕೊಳ್ಳುವುದು ಮತ್ತು ಹಂಚುವುದು ಅದಕ್ಕಾಗಿ ಭೂ ಮಿತಿ ಕಾಯಿದೆ, ಉಳುವವರನ್ನೆ ಹೊಲದೊಡೆಯನ್ನಾಗಿ ಮಾಡುವುದು. ಅದಕ್ಕಾಗಿ ಗೇಣಿದಾರರಿಗೆ ಭೂಮಿಯ ಹಕ್ಕು ನೀಡುವ ಕಾಯಿದೆ ಮತ್ತು ಮೂರನೆಯ ಹೆಚ್ಚು ಗಮನ ಸೆಳೆಯದ ಭಾಗ– ಹೀಗೆ ನೀಡಿದ ಭೂಮಿ ಮತ್ತೆ ಪಟ್ಟಭದ್ರಹಿತಗಳ ಪಾಲಾಗದಿರಲು ಕೃಷಿ ಭೂಮಿಯನ್ನು

ಪುಟ 14ಕ್ಕೆ


ನೇರ ಹೊರೆ

ತಮಿಳುನಾಡು ಚುನಾವಣೆ

ಮೂರನೇ ಪರ್ಯಾಯದ ನಿರೀಕ್ಷೆ

ತಮಿಳುನಾಡು ಸ್ಥಳೀಯ ಸಂಸ್ಥೆಗಳ ಚುನಾವಣೆ ಫಲಿತಾಂಶ ಹೊರಬಿದ್ದಿದೆ. ಈ ಚುನಾವಣೆಯಲ್ಲಿ ಮೂರನೇ ಪರ್ಯಾಯವೊಂದು ಉದಯಿಸುತ್ತಿದೆ ಎಂಬ ಸ್ಪಷ್ಟ ಸೂಚನೆ ಸಿಕ್ಕಿದೆ. ಪ್ರಮುಖ ಪಕ್ಷಗಳಾದ ಡಿಎಂಕೆ ಮತ್ತು ಅಣ್ಣಾ ಡಿಎಂಕೆ ಪಕ್ಷಗಳ ನೀತಿಗಳಿಂದ ರೋಸಿ ಹೋದ ಜನ ಮೂರನೇ ರಂಗವೊಂದರ ನಿರೀಕ್ಷೆಯಲ್ಲಿದ್ದಾರೆ ಎಂಬುದನ್ನು ಈ ಫಲಿತಾಂಶ ತೋರಿಸಿಕೊಟ್ಟಿದೆ.

ಈ ಚುನಾವಣೆಯಲ್ಲಿ ಸಿಪಿಐ(ಎಂ) ವಿಜಯಕಾಂತ್ ಅವರ ಡಿಎಂಡಿಕೆ ಜೊತೆ ಮೈತ್ರಿ ಮಾಡಿಕೊಂಡಿದ್ದನ್ನು ಹಿಂದಿನ ಸಂಚಿಕೆಯಲ್ಲಿ ವಿವರವಾಗಿ ವರದಿ ಮಾಡಲಾಗಿತ್ತು. ಮೈತ್ರಿ ರಾಜಕೀಯದ ಮೌಲ್ಯಗಳನ್ನು ಗಾಳಿಗೆ ತೂರಿದ ಜಯಲಲಿತಾ ರಾಜ್ಯದ ಎಲ್ಲ ಸ್ಥಾನಗಳಿಗೆ ತಮ್ಮ ಅಭ್ಯರ್ಥಿಯನ್ನು ಏಕಪಕ್ಷೀಯವಾಗಿ ಘೋಷಿಸಿದ್ದರು. ಈ ಹಿನ್ನೆಲೆಯಲ್ಲಿ ಸಿಪಿಐ(ಎಂ)– ಡಿಎಂಡಿಕೆ ಜೊತೆ ಮೈತ್ರಿ ಮಾಡಿಕೊಂಡು ಚುನಾವಣೆಯನ್ನು ಎದುರಿಸಿತ್ತು.





ಕೊನೇ ಕ್ಷಣದಲ್ಲಿ ಸಿಪಿಐ ಕೂಡ ಅಣ್ಣಾ ಡಿಎಂಕೆ ಜೊತೆಗಿನ ಮೈತ್ರಿಯಿಂದ ಹಿಂದೆ ಸರಿಯಿತು.

ಅಕ್ಟೋಬರ್ 17 ಮತ್ತು 19ರಂದು ನಡೆದ ಈ ಚುನಾವಣೆಯಲ್ಲಿ ಹಲವು ಮಹತ್ವದ ಸ್ಥಾನಗಳು ಸಿಪಿಐ(ಎಂ) ಪಾಲಾಗಿವೆ. ಪ್ರತಿಷ್ಠಿತ ಕುಳಿತುರೈ ಮತ್ತು ಶಿವಗಂಗಾ ಮುನ್ಸಿಪಾಲಿಟಿಯಲ್ಲಿ ಪಕ್ಷ ಜಯಭೇರಿ ಬಾರಿಸಿದೆ.

ಐದು ನಗರ ಪಂಚಾಯತ್‌ಗಳಲ್ಲಿ ಪಕ್ಷ ಜಯಗಳಿಸಿದೆ. ಇದಲ್ಲದೆ, ಮೂರು ಪಾಲಿಕೆ ವಾರ್ಡ್‌ಗಳಲ್ಲಿ, 20 ಮುನ್ಸಿಪಾಲಿಟಿ ವಾರ್ಡ್‌ಗಳಲ್ಲಿ ಹಾಗೂ 101 ನಗರ ಪಂಚಾಯತ್ ವಾರ್ಡ್‌ಗಳಲ್ಲಿ ಸಿಪಿಐ(ಎಂ) ಪ್ರತಿನಿಧಿಗಳು ಆಯ್ಕೆಯಾಗಿದ್ದಾರೆ. ಎರಡು ಜಿಲ್ಲಾ ಮಂಡಳಿ ವಾರ್ಡ್‌ಗಳಲ್ಲಿ, 25 ಪಂಚಾಯತ್ ಯೂನಿಯನ್ ಕೌನ್ಸಿಲ್ ವಾರ್ಡ್‌ಗಳಲ್ಲಿ ಹಾಗೂ ನೂರಕ್ಕೂ ಹೆಚ್ಚು ಗ್ರಾ ಪಂಚಾಯತ್ ಅಧ್ಯಕ್ಷ ಸ್ಥಾನಗಳಲ್ಲಿ ಸಿಪಿಐ(ಎಂ) ಅಭ್ಯರ್ಥಿಗಳು ಜಯಗಳಿಸಿದ್ದಾರೆ.

ಸಿಪಿಐ(ಎಂ) ಜೊತೆಗೆ ಡಿಎಂಡಿಕೆ, ಸಿಪಿಐ, ಇತರ ಪ್ರಾದೇಶಿಕ ಪಕ್ಷಗಳು ಹಾಗೂ ಪಕ್ಷೇತರರು ಗಣನೀಯ ಪ್ರಮಾಣದ ಸ್ಥಾನಗಳಲ್ಲಿ ಗೆಲುವು ಸಾಧಿಸಿದ್ದಾರೆ. ಹಣ, ಹೆಂಡ ಹಾಗೂ ಇತರ ಆಮಿಷಗಳನ್ನು ಒಡ್ಡಿದ್ದರೂ ಮತದಾರ ಅದಾವುದಕ್ಕೂ ಮಣೆ ಹಾಕಲಿಲ್ಲ.

ಚುನಾವಣಾ ಫಲಿತಾಂಶದ ಬಗ್ಗೆ ಸಿಪಿಐ(ಎಂ) ರಾಜ್ಯ ಘಟಕ ಅತೀವ ಸಂತಸ ವ್ಯಕ್ತಪಡಿಸಿದೆ. ರಾಜ್ಯದ ಮತದಾರರಿಗೆ ಕೃತಜ್ಞತೆ ಸಲ್ಲಿಸಿರುವ ಪಕ್ಷ, ತನ್ನ ಅಭ್ಯರ್ಥಿಗಳಿಗೆ ಅಭಿನಂದನೆ ಸಲ್ಲಿಸಿ ಜನಪರ ಕೆಲಸಗಳಲ್ಲಿ ಹಾಗೂ ಹೋರಾಟಗಳಲ್ಲಿ ಇನ್ನಷ್ಟು ಪರಿಣಾಮಕಾರಿಯಾಗಿ ಕಾರ್ಯಸಲ್ಲಿಸುವಂತೆ ಕರೆ ನೀಡಿದೆ. ಇದೇ ವೇಳೆ, ಡಿಎಂಡಿಕೆ–ಸಿಪಿಐ(ಎಂ) ಮೈತ್ರಿಕೂಟ ಹಾಗೂ ಸಿಪಿಐನ ಅಭ್ಯರ್ಥಿಗಳಿಗೂ ಅಭಿನಂದನೆ ಸಲ್ಲಿಸಿದೆ.

ಸಿಪಿಐ(ಎಂ) ಅಭ್ಯರ್ಥಿಗಳು ಆಯ್ಕೆಯಾದ ಪಂಚಾಯತ್‌ನಲ್ಲಿ ಭ್ರಷ್ಟಚಾರ ರಹಿತ, ಪಾರದರ್ಶಕ ಆಡಳಿತ ನೀಡುವ ಭರವಸೆಯನ್ನು ಸಿಪಿಐ(ಎಂ) ಕಾರ್ಯದರ್ಶಿ ಮಂಡಳಿ ನೀಡಿದೆ. ಅಭಿವೃದ್ಧಿ ಕಾರ್ಯಕ್ಕೆ ಚುರುಕು, ಗ್ರಾಮೀಣ ಅಭಿವೃದ್ಧಿಗೆ ಆದ್ಯತೆಯ ಜೊತೆಗೆ ಚುನಾವಣಾ ಪ್ರಣಾಳಿಕೆಯನ್ನು ಸಂಪೂರ್ಣ ಜಾರಿಗೊಳಿಸಲು ಪ್ರಾಮಾಣಿಕವಾಗಿ ಶ್ರಮಿಸುವುದಾಗಿ ಪಕ್ಷ ಭರವಸೆ ನೀಡಿದೆ.


ಗುಜರಾತ್ ಸತ್ಯ ನುಡಿದವರ ಕುತ್ತಿಗೆಗೆ ನರೇಂದ್ರ ಮೋದಿ ಚೂರಿ

ಸತ್ಯ ಎಂಬುದು ಯಾವಾಗಲೂ ಕಹಿಯೇ. ಒಮ್ಮೊಮ್ಮೆ ಕಟುಸತ್ಯ ಹೇಳಿದವರಿಗೆ ಬಂದಿರುವ ಕಷ್ಟಗಳು ಒಂದೆರಡಲ್ಲ. ಈಗ ಗುಜರಾತ್‌ನಲ್ಲಿ ಆಗಿರುವುದು ಅದೇ. ಕೋಮು ಗಲಭೆಗೆ ಬಿಜೆಪಿ ಮುಖ್ಯಮಂತ್ರಿ ನರೇಂದ್ರ ಮೋದಿಯೇ ಕಾರಣ ಎಂಬುದು ಬಹಿರಂಗಗೊಂಡಿರುವ ಸತ್ಯ. ನೇರನುಡಿದು ಗಲಭೆಯ ವಾಸ್ತವಾಂಶಗಳನ್ನು ಜನತೆ ಮುಂದಿಟ್ಟ ಐಪಿಎಸ್ ಅಧಿಕಾರಿ ಸಂಜೀವ ಭಟ್ ಅವರನ್ನು ಸರ್ಕಾರ ಬಂಧಿಸಿತು. ಅದು ಒಬ್ಬ ಪೊಲೀಸ್ ಪೇದೆ ನೀಡಿದ ನೆಪ ಮಾತ್ರದ ದೂರಿನ ಮೇಲೆ. ಆದರೆ ದೇಶಾದ್ಯಂತ ಭಟ್ ಬಂಧನ ವಿರೋಧಿಸಿ ಚಳವಳಿ, ಪ್ರತಿಭಟನೆಗಳು ನಡೆದವು. ಹೀಗಾಗಿ ಭಟ್ ಬಿಡುಗಡೆಗೆ ಒತ್ತಡ ಹೆಚ್ಚುತ್ತಿದ್ದಂತೆ ಅವರನ್ನು ಬಿಡುಗಡೆ ಮಾಡಲಾಯಿತು.

ಪ್ರಕರಣ ಏನು?

ಅದು, 2002 ಫೆಬ್ರವರಿ 27ರ ರಾತ್ರಿ. ಅಹಮದಾಬಾದ್‌ನ ಸಿಎಂ ನಿವಾಸದಲ್ಲಿ ಹಿರಿಯ ಪೊಲೀಸ್ ಹಾಗೂ ಇತರೆ ಅಧಿಕಾರಿಗಳ ಸಭೆ ನಡೆಯಿತು. ಆ ಸಭೆಯಲ್ಲಿ ಅಗಿನ ರಾಜ್ಯ ಗುಪ್ತಚರ ಇಲಾಖೆಯ ಡೆಪ್ಯೂಟಿ ಕಮಿಷನರ್ ಆಗಿದ್ದ ಸಂಜೀವ ಭಟ್ ಪಾಲ್ಗೊಂಡಿದ್ದರು (ಭಟ್ ವಿಶೇಷ ತನಿಖಾ ತಂಡದ ಮುಂದೆ ಹೇಳಿಕೆ ನೀಡಿದ್ದಾರೆ.) ಅಷ್ಟು ಮಂದಿ ಪಾಲ್ಗೊಂಡಿದ್ದ ಸಭೆಯಲ್ಲಿ ನರೇಂದ್ರ ಮೋದಿ ಹೇಳಿದ ಮಾತು ಒಂದೇ – 'ಮುಸ್ಲಿಮರ ವಿರುದ್ಧ ಹಿಂದೂಗಳು ಸೇಡು ತೀರಿಸಿಕೊಳ್ಳಲು ಬಿಟ್ಟು ಬಿಡಿ' ಕೋಮುವಾದವನ್ನೇ ಮಿದುಳಲ್ಲಿ ತುಂಬಿಕೊಂಡಿರುವ ಮೋದಿಯ ವಿಷದ ನುಡಿಗೆ ಯಾವೊಬ್ಬ ಅಧಿಕಾರಿಯೂ ಚಕಾರವೆತ್ತಲಿಲ್ಲ ಎನ್ನುವುದು ಬೇರೆ ಮಾತು.

ಸಭೆಯ ಪರಿಣಾಮ ಮರುದಿನ (ಫೆ.28ರಂದು 12ರಿಂದ 4ಗಂಟೆಯವರೆಗೆ) ಕೋಮುದಳ್ಳುರಿ ಹೊತ್ತಿ ಉರಿಯಿತು. ಮೇಘನಿ



ನಗರ, ನರೋಡ ಪಾಟಿಯಾ, ಗುಲ್ಬರ್ಗಾ ಸೊಸೈಟಿ ಮುಂತಾದ ಪ್ರದೇಶಗಳು ವಿಎಚ್‌ಪಿ ಮತ್ತು ಬಜರಂಗದಳದ ಕೋಮುವಾದಿ ವಿಷಜಂತುಗಳ ಕೈಗೆ ಸಿಲುಕಿ ನಲುಗಿದವು. ಹಿಂದೂ ಕೋಮುವಾದಿ ವೀರರು ಅಮಾಯಕ ಮುಸ್ಲಿಮರ ಮೇಲೆ ದಾಳಿ ಮಾಡಿ ವಿಕೃತಿ ಮೆರೆದಿದ್ದರು. ದಾಳಿ ಬಗ್ಗೆ ಅಹಮದಾಬಾದ್ ಪೊಲೀಸ್ ಕಂಟ್ರೋಲ್ ರೂಮ್‌ಗೆ ಕ್ರಿಕೆಟ್ ಕಾಮೆಂಟರಿಯಂತೆ ವೈರ್‌ಲೈಸ್ ಮೂಲಕ ಮಾಹಿತಿ ರವಾಸಿದರೂ ಯಾರೊಬ್ಬರು ಗಮನಹರಿಸುವುದಿಲ್ಲ. ಯಾಕೆಂದರೆ ಇಡೀ ಸರ್ಕಾರಿ ಯಂತ್ರವೇ ಕೋಮುಗಲಭೆಗೆ ಬೆಂಗಾವಲಾಗಿ ನಿಂತಿತ್ತು. ಕಾಂಗ್ರೆಸ್‌ನ ಮಾಜಿ ಸಂಸದ ಅಹಸನ್ ಜಾಫ್ರಿ ಸೇರಿದಂತೆ ಗುಲ್ಬರ್ಗ ಸೊಸೈಟಿ ಆವರಣದಲ್ಲಿದ್ದ 150ಕ್ಕೂ ಹೆಚ್ಚು ಮುಸ್ಲಿಮರ ಸಜೀವ ದಹನ ನಡೆದು ಹೋಯಿತು. ಮಹಿಳೆಯರ ಮೇಲೆ ಅತ್ಯಾಚಾರ, ಅಂಗಡಿಗಳ ಲೂಟಿ ನಡೆಯುತ್ತಿದ್ದರೂ ಪೊಲೀಸರು ಮೂಕ ಪ್ರೇಕ್ಷಕರಾಗಿ ನೋಡುತ್ತಿದ್ದರು.

ಸತ್ಯ ಹೇಳಿದ್ದಕ್ಕೆ ಭಟ್ ಬಂಧನ


ಇದು ಕಟ್ಟು ಕಥೆಯಲ್ಲ. ಗಲಭೆ ಬಗ್ಗೆ ಕಟುಸತ್ಯ ಹೇಳಿ ಗುಜರಾತ್ ಸರ್ಕಾರದ ಅಮಾನತು ಶಿಕ್ಷೆಗೆ ಗುರಿಯಾಗಿರುವ ಐಪಿಎಸ್ ಅಧಿಕಾರಿ ಸಂಜೀವ ಭಟ್ ಅವರಿಗೆ ನರಹಂತಕ ಮೋದಿ ಸರ್ಕಾರ ಇನ್ನಿಲ್ಲದ ಕಿರುಕುಳ ನೀಡುತ್ತಿದೆ. ಇದರಿಂದಾಗಿ ಭಟ್ ಕುಟುಂಬ ಅಭದ್ರತೆಯಲ್ಲಿ ಬದುಕು ಸಾಗಿಸುತ್ತಿದೆ. ಸರ್ಕಾರ ಭಟ್ ಕುಟುಂಬಕ್ಕೆ ಯಾವೆಲ್ಲ ರೀತಿಯಲ್ಲಿ ಕಿರುಕುಳ ನೀಡಬೇಕೋ ಅದೆಲ್ಲ ಮಾರ್ಗದಲ್ಲಿ ಅಮಾನವೀಯವಾಗಿ ನಡೆದುಕೊಂಡಿದೆ. ಭಟ್ ಸತ್ಯ ಹೇಳದಂತೆ ಬಿಜೆಪಿ ನರಹಂತಕ ಮುಖ್ಯಮಂತ್ರಿ ಮೋದಿ ಆಡಳಿತ ಯಂತ್ರವನ್ನೇ ಅತ್ಯಂತ ವ್ಯವಸ್ಥಿತವಾಗಿ ಬಳಿಸಿಕೊಂಡಿರವುದು ಕಂಡು ಬಂದಿದೆ. ಇಷ್ಟೇ ಅಲ್ಲ ಭಟ್ ಹೇಳಿಕೆ ಆಧರಿಸಿ ಮೋದಿಯ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಿ ವಿಚಾರಣೆ ನಡೆಸಲು ಬರುವುದಿಲ್ಲ ಎಂದು ಮೋದಿಗೆ ಕ್ಲೀನ್‌ಚೀಟ್ ನೀಡಿದೆ ವಿಶೇಷ ತನಿಖಾ ತಂಡ.

ಆಫ್ ದ ರೆಕಾರ್ಡ್ ಏನು?

ಸಂಜೀವ ಭಟ್ ವಿಶೇಷ ತನಿಖಾ ತಂಡದ ಮುಂದೆ ಆಫ್ ದ ರೆಕಾರ್ಡ್ ಮಾತನಾಡಿದರೆಂದು ಹೇಳಲಾಗುತ್ತಿದೆ. ಎಸ್‌ಐಟಿ ಇದನ್ನೇಕೆ ದಾಖಲಿಸಿಕೊಳ್ಳಲಿಲ್ಲ ಎಂಬುದು ಈಗ ಬಹುಚರ್ಚಿತ ವಿಷಯವಾಗಿದೆ. ಎಸ್‌ಐಟಿ ನೀಡಿದ ವರದಿಯ ಹಿನ್ನೆಲೆಯಲ್ಲಿ ಸುಪ್ರೀಂ ಕೋರ್ಟ್ ಅಮಿಕಸ್ ಕ್ಯೂರಿ ನೇಮಕ ಮಾಡಿ ವರದಿ ತರಿಸಿಕೊಂಡಿದೆ. ರಾಜು ರಾಮಚಂದ್ರನ್ ವರದಿಗೂ ವಿಶೇಷ ತನಿಖಾ ತಂಡ ನೀಡಿರುವ ವರದಿ ನಡುವೆ ಸಾಕಷ್ಟು ವ್ಯತ್ಯಾಸಗಳಿವೆ ಅಂಶಗಳು ಕೆಲ ವರದಿಗಳಿಂದ ತಿಳಿದು ಬರುತ್ತವೆ.

ಆದರೆ ಸಂಜೀವ್ ಭಟ್ ತನ್ನದು ತತ್ವಬದ್ಧ ನಿಲುವು, ನೀತಿಬದ್ಧ ಹೋರಾಟ. ನನ್ನನ್ನು ಜೈಲಿಗೆ ಕಳುಹಿಸಿದರೂ ನನ್ನ ಪ್ರಾಣ ತೆಗೆದರೂ ನಾನು ಈ ತತ್ವಬದ್ಧ ಹೋರಾಟವನ್ನು ಕೈ ಬಿಡುವುದಿಲ್ಲ. ಅಧಿಕಾರ, ತೋಳ್ಬಲ, ದರ್ಪಕ್ಕೆ ತಲೆ ಬಾಗುವುದಿಲ್ಲ ಎಂಬ ದಿಟ್ಟ ನಿಲುವು ತಳೆದಿರುವುದು ಅಭಿನಂದನೀಯ ವಿಚಾರವಾಗಿದೆ.

–ಪುಟ್ಟಣ್ಣ, ಬೆಂಗಳೂರು.



ಹುರಿದುಂಬಿ ಹೊರಕ್ಕೆ ಉಕ್ಕುತ್ತಿರುವ ಬಿಜೆಪಿ ಹಗರಣಗಳು

ಆರ್.ರಾಮಕೃಷ್ಣ


ಬಿಜೆಪಿ ದರ್ಬಾರ್

ನಗರ ಪ್ರದೇಶಗಳಲ್ಲಿ ಜೋರು ಮಳೆ ಬಂದು ನೀರು ನುಗ್ಗಿದಾಗ ಒಳ ಚರಂಡಿಗಳ ಪೈಪ್‌ಗಳಲ್ಲಿ ಹರಿವ ನೀರಿಗೆ ಜಾಗ ಸಾಲದೇ ರಸ್ತೆ ನಡುವಿನ ಕೊಳಚೆ ಗುಂಡಿಯೊಳಗಿನಿಂದ ಹೊಲಸು ಕಿತ್ತೆದ್ದು ಬಂದು ರಸ್ತೆಗೆ ಹೊರ ಚೆಲ್ಲುವುದನ್ನು ನೋಡದವರು ಬಹಳ ಕಡಿಮೆ. ಹೀಗಾದಾಗ ಸಾಮಾನ್ಯವಾಗಿ ಸುತ್ತ ಮುತ್ತಲ ಜನರೆಲ್ಲ ಮೂಗು ಮುಚ್ಚಿಕೊಂಡು ಕೆಲವೊಮ್ಮೆ ಕಣ್ಣು ಮುಚ್ಚಿಕೊಂಡು ಸಹ ಓಡಾಡುತ್ತಾರೆ. ಮಲ-ಮೂತ್ರಾದಿ ಕೊಳಚೆಯು ರಸ್ತೆಗೆ ಚೆಲ್ಲಿ...

ಇಷ್ಟು ಹೇಳಿದರೆ ಸಾಕು...ರಾಜ್ಯದ ಜನರ ಸ್ಥಿತಿ ಹೀಗೆಯೇ ಆಗಿದೆ ಅಲ್ಲವೇ ?

ಬಿಜೆಪಿ ಸರ್ಕಾರದ ಮೂರು ವರ್ಷಗಳ ಅವಧಿಯಲ್ಲಿ ಬಿಜೆಪಿ ಸರ್ಕಾರದ ಮುಖ್ಯಮಂತ್ರಿಗಳಾದಿಯಾಗಿ, ಹತ್ತಾರು ಸಚಿವರು, ಅವರು ಮಕ್ಕಳು, ಅಳಿಯಂದಿರು, ಸಂಬಂಧಿಗಳು, ಬಿಜೆಪಿ ಪಕ್ಷದ ಹಿರಿಕಿರಿ ಪುಡಾರಿಗಳು, ಸರ್ಕಾರದ ಅಧಿಕಾರಿಗಳು ಹೇಗೆ ಸಿಕ್ಕಸಿಕ್ಕದ್ದನ್ನೆಲ್ಲ ತಿಂದು ಸಾರ್ವಜನಿಕ ಜೀವನವನ್ನು ಹೊಲಸೆಬ್ಬಿಸಿದ್ದಾರೆ ಎಂಬುದನ್ನು ವಿವರಿಸುವುದೇ ಕಷ್ಟ. ಇಂತಹ ನೀಚ ಭ್ರಷ್ಟತೆಯ ವಿರುದ್ಧವಾಗಿ ಜಡಿಮಳೆಯಂತಹ ಜನಾಭಿಪ್ರಾಯದಿಂದಾಗಿ ತನಿಖೆ-ವಿಚಾರಣೆ ಎಂಬ ನೀರು ಒಳಚರಂಡಿಗೆ ನುಗ್ಗಿ ಬಿಜೆಪಿಗರು ತಾವು ಮರೆಮಾಚಿ ಭೂಮಿಯ ತಳಕ್ಕೆ ತಳ್ಳಿಟ್ಟಿದ್ದ ಹೊಲಸೆಲ್ಲಾ ಕಿತ್ತೆದ್ದು ನಡು ರಸ್ತೆಗೆ ಬಂದು ಬೀಳುತ್ತಿದೆ.

ಈ ಹೊಲಸೆನ್ನೆಲ್ಲಾ ತೊಳೆದು ಸಾರ್ವಜನಿಕ ರಸ್ತೆಯನ್ನು ಶುದ್ಧ ಮಾಡಲು ಇನ್ನೆಷ್ಟು ದಿನ ಬೇಕೋ ? ಈ ನಿಟ್ಟಿನಲ್ಲಿ ಇನ್ನೆಷ್ಟು ಜನ ಪರಪ್ಪನ ಅಗ್ರಹಾರ ಕಡೆ ಪಯಣ ಬೆಳೆಸಬೇಕೋ ?



ಎಲ್ಲ ಕಾದು ನೋಡಬೇಕಿದೆ. ಇರಲಿ.

ಸಾಮ್ರಾಟ್ 'ಅಶೋಕ್' ಭೂ ಗ್ರಹಣ ಪ್ರಕರಣಗಳು

ರಾಜ್ಯದ ಬಿಜೆಪಿ ಸಚಿವ ಸಂಪುಟದಲ್ಲಿ ಗೃಹ ಖಾತೆ ಮತ್ತು ಸಾರಿಗೆ ಖಾತೆ ಎರಡರ ಚುಕ್ಕಾಣಿಯನ್ನೂ ಹಿಡಿದಿರುವವರು ಸನ್ಮಾನ್ಯ ಸಚಿವ ಅಶೋಕ್. ಅವರ ಆಪ್ತರು, ಸುತ್ತಮುತ್ತಲ ಜನ ಅವರನ್ನು 'ಸಾಮ್ರಾಟ್' ಅಂತ ಕರೆಯುವುದು ವಾಡಿಕೆ. ಅಶೋಕ ಸಾಮ್ರಾಟ, ಕಟ್ಟಾ ಸುಬ್ರಮಣ್ಯ, ಡಾ.ಬಿ.ಎಸ್. ಯಡಿಯೂರಪ್ಪನವರಿಗಿಂತ ಕಡಿಮೆಯೇನಿಲ್ಲ. ಅವರ ಸಾಮ್ರಾಜ್ಯವೂ ಬಲು ವಿಶಾಲ ಅಂತ ಅವರನ್ನು ಬಲ್ಲವರ ಅಂಬೋಣ. ಇರಲಿ.

ಈಗ ಅಸಲಿ ವಿಷಯ ಅಂದರೆ ಲೋಕಾಯುಕ್ತ ನ್ಯಾಯಾಲಯದಲ್ಲಿ ಜಯಕುಮಾರ ಹಿರೇಮಠ್ ಎಂಬುವವರಿಂದ ಆರ್. ಅಶೋಕರ ವಿರುದ್ಧ ದೂರು ದಾಖಲಾಗಿದೆ. ವಿಚಾರಣೆಗೆ ಆದೇಶವೂ ಹೊರಬಿದ್ದಿದೆ. ಪ್ರಕರಣ...?.. ಅದೇ ನೆಲ ನುಂಗಿದ್ದು. ನೆಲ ನುಂಗುವ ಪ್ರಶ್ನೆಯಲ್ಲಿ ರಾಜ್ಯ ಬಿಜೆಪಿ ಸಚಿವರುಗಳನ್ನು ಸರಿಗಟ್ಟುವವರು ಬಹುಶಃ ಈ ಸದ್ಯ ಭವಿಷ್ಯದಲ್ಲಿ ಎಲ್ಲಿಯೂ ಸಿಗಲಾರರೇನೋ.

ಬೆಂಗಳೂರು ನಗರದ ಲೊಟ್ಟೆಗೊಲ್ಲಹಳ್ಳಿಯ ಎರಡು ಪ್ರತ್ಯೇಕ ಸರ್ವೇ ನಂಬರುಗಳ ಭೂಮಿಯಲ್ಲಿ ಒಟ್ಟು 23 ಗುಂಟೆ(ಸರ್ವೇ ನಂ.10/1 ರಲ್ಲಿ 9 ಗುಂಟೆ, ನಂ. 10/11 ರಲ್ಲಿ 14 ಗುಂಟೆ) ಜಾಗವನ್ನು ಅಶೋಕ್ ಖರೀದಿಸಿದ್ದಾರೆ. ಆದರೆ ಆ ಹೊತ್ತಿಗಾಗಲೇ ಆ ಜಾಗವನ್ನು ವಶಕ್ಕೆ ಪಡೆದುಕೊಳ್ಳಲು ಅಧಿಸೂಚನೆ ಹೊರಡಿಸಲಾಗಿತ್ತು. ಅದು ಗೊತ್ತಿದ್ದೂ ಅಶೋಕ್ ಅದನ್ನು ಕಾನೂನಿಗೆ ವಿರುದ್ಧವಾಗಿ ಖರೀದಿಸಿದ್ದಾರೆ. ಖರೀದಿಸಿ ಏನು ಮಾಡಿದರು? ಆ ಜಾಗವನ್ನು ಯಡಿಯೂರಪ್ಪ ಅಧಿಸೂಚನೆಯಿಂದ ಕೈ ಬಿಡುವಂತೆ ಮಾಡಿಕೊಂಡರು. ಅದು ಹೇಗೆ ನೋಡಿ. ಜಮೀನಿನ ಮೂಲ ಮಾಲಿಕರೇ ತಮ್ಮ ಜಮೀನನ್ನು ಅಧಿಸೂಚನೆಯಿಂದ ಕೈಬಿಡಲು ಕೋರುವಂತೆ ಮನವಿ ಕೊಡಿಸಲಾಗಿದೆ.

ಮೊದಲು ರೊಟ್ಟಿಯು ಕೈ ಜಾರಿ ತುಪ್ಪಕ್ಕೆ ಬೀಳುವಂತೆ ಮಾಡುವುದು. ಆ ಮೇಲೆ ಅದನ್ನು ತುಪ್ಪದಿಂದ ಹೊರ ತೆಗೆದ ನಂತರ ಮತ್ತೆ ಕೈ ಜಾರಿ ತನ್ನ ಜೋಳಿಗೆಗೇ ಬೀಳುವಂತೆ ಹೊಂಚು ಹಾಕಿ ಯೋಜಿಸುವುದು. ರಾಜ್ಯ ಸರ್ಕಾರಕ್ಕೆ ಈ ಪ್ರಕರಣದಲ್ಲಿ ಕನಿಷ್ಠ 30 ಕೋಟಿ ರೂಪಾಯಿಗಳಿಗೆ ಪಂಗನಾಮ ಹಾಕಲಾಗಿದೆ ಅಂತ ಅಂದಾಜು. ಆಹಾ ! ಎಂಥಾ ಸೊಗಸಾದ ಆಟ. ಬಹುಶಃ ಕಾದಿದೆ ಸಾಮ್ರಾಟರಿಗೂ ಕಟ್ಟಾ, ಯಡಿಯೂರಪ್ಪನವರ ಜೊತೆಗೆ ಪರಪ್ಪನ ಅಗ್ರಹಾರದಲ್ಲಿ ಕಾರಾಗೃಹದ ಊಟ. ಹಾಗಲಕಾಯಿಗೆ ಬೇವಿನಕಾಯಿ ಸಾಕ್ಷಿಯಂತೆ, ಸಾಮ್ರಾಟರ ಜೊತೆಗೆ ಯಡಿಯೂರಪ್ಪನವರೂ ಈ ಪ್ರಕರಣದಲ್ಲಿ ಎರಡನೇ ಆರೋಪಿ. ಪಾಪ ಇನ್ನಾರು ತಿಂಗಳಲ್ಲಿ ಮತ್ತೆ ನಾನೇ ಮುಖ್ಯಮಂತ್ರಿ ಎಂದು ಪ್ರತಿಜ್ಞೆ ಮಾಡಿರುವ ಯಡಿಯೂರಪ್ಪನವರನ್ನು ಕಾಪಾಡುವವರು ಯಾರು ?

1,000 ಕೋಟಿ ಮೀರುವ ಭ್ರಷ್ಟಚಾರ... ಈ ನಿರಾಣಿ ಪ್ರತಾಪಗಳು

ಬಿಜೆಪಿ ಸರ್ಕಾರದ ಮಧ್ಯಮ ಮತ್ತು ಬೃಹತ್ ಕೈಗಾರಿಕಾ ಮಂತ್ರಿ ನಿರಾಣಿಯವರ ಪ್ರತಾಪಗಳ ಬಗೆಗೆ ಕಳೆದ ವಾರ ಕೆಲವು ಝಲಕುಗಳನ್ನು ನೋಡಿದ್ದೀರಿ. ಅದು ಅಷ್ಟೆ-ಅದು ಮುಗಿಯಿತು ಅಂತ ಭಾವಿಸದಿರಿ, ಭಾವಿಸಿ ನಿರಾಶರಾಗದಿರಿ. ನಿರಾಣಿ ನಿಮಗೆ ನಿರಾಶೆ ಮಾಡುವುದಿಲ್ಲ. ಬೇಕಾದರೆ ನೋಡಿ.

ಮುರುಗೇಶ ನಿರಾಣಿ ಮತ್ತು ಅವರ ಸಹೋದರ ಎಚ್.ಆರ್. ನಿರಾಣಿ ಇಬ್ಬರೂ ಸೇರಿ ಸುಮಾರು 1,000 ಕೋಟಿಗಳನ್ನೂ ಮೀರುವ ಭ್ರಷ್ಟಾಚಾರ ನಡೆಸಿರುವ ಸಂಬಂಧ ಲೋಕಾಯುಕ್ತದಲ್ಲಿ ಮೊಕದ್ದಮೆ ದಾಖಲಾಗಿದೆ. ವಿಚಾರಣೆ ಆರಂಭವಾಗುತ್ತಿದೆ.

- ದೇವನಹಳ್ಳಿ ತಾಲ್ಲೂಕಿನ ಹೂವಿನಾಯಕನಹಳ್ಳಿಯಲ್ಲಿ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ-ಕೆಐಎಡಿಬಿಯು 2008 ರಲ್ಲಿ 20 ಎಕರೆ ಭೂಮಿಯನ್ನು ವಶಕ್ಕೆ ಪಡೆದುಕೊಂಡಿತ್ತಂತೆ. 2010 ರ ಕೊನೆಯಲ್ಲಿ ಯಾವುದೇ ಕಾರಣ ನೀಡದೆ ಈ ಭೂಮಿಯನ್ನು ಅಧಿಸೂಚನೆಯಿಂದ ಕೈ ಬಿಡಲಾಗಿದೆ. ಅಂದರೆ ಡೀನೋಟಿಫೈ ಮಾಡಲಾಗಿದೆ. ಆಹಾ ಎಂತಹ ಕರಾಮತ್ತು. ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ಇಪ್ಪತ್ತು ಎಕರೆ ಭೂಮಿಯನ್ನು ಅಧಿಸೂಚನೆಯಿಂದ ಕಾರಣವನ್ನೇ ಕೊಡದೇ ಕೈ ಬಿಡುವುದೆಂದರೇನು ? ಈ ಭೂಮಿ ಯಾರ ಕೈ ಸೇರಿರಬಹುದು ? ತೆರೆಯ ಹಿಂದೆ ಏನೇನು ನಡೆದಿರಬಹುದು ಎಂಬುದು ನಿಮ್ಮ ಊಹೆಗೆ ಬಿಟ್ಟ ವಿಚಾರ. ಸ್ವಹಿತ ಸಾಧನೆಗೆ ಇವೆಲ್ಲಾ ಆಗಿದೆ ಅಂತ ಈಗ ದೂರು ದಾಖಲಾಗಿದೆ.

ಇವೆಲ್ಲಾ ಒಂಥರಾ ಕೈಗಾರಿಕಾಭಿವೃದ್ಧಿಗೆ ಸಂಬಂಧಿಸಿದ ಸಮಾಚಾರವೇ. ಯಾರ ಕೈಗಾರಿಕೆ ಅಭಿವೃದ್ಧಿ ಅಂತ ಮಾತ್ರ ಕೇಳ ಬೇಡಿ. ಕೈಗಾರಿಕಾಭಿವೃದ್ಧಿ ಮಂತ್ರಿ ಮಾತ್ರ ನಿರಾಣಿ ಅಂತ

ಪಿಡಿಓ ಮಂದಾಕಿನಿ ಆತ್ಮಹತ್ಯೆಗೆ ಶರಣು
ಶಾಮೀಲಾಗದ ಅಧಿಕಾರಿಗಳಿಗಿಲ್ಲ ರಕ್ಷಣೆ

ಕಳೆದ ವಾರದಲ್ಲಿ ಗುಲ್ಬರ್ಗಾ ಜಿಲ್ಲೆಯಲ್ಲಿ 7 ಗ್ರಾಮ ಪಂಚಾಯತ್‌ಗಳ ಕಾರ್ಯದರ್ಶಿಗಳು ಹಾಗೂ 54 ಜನ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು(ಪಿಡಿಓ)ಗಳು ತಮ್ಮ ಸ್ಥಾನಗಳಿಗೆ ರಾಜಿನಾಮೆ ಕೊಟ್ಟಿದ್ದರು. ಹಿನ್ನೆಲೆ, ಗುಲಬರ್ಗಾ ಜಿಲ್ಲೆಯ ಸಣ್ಣೂರ ಪಂಚಾಯ್ತಿಯ ಪಿಡಿಓ ಮಂದಾಕಿನಿ ಎಂಬ ಯುವ ಮಹಿಳಾ ಅಧಿಕಾರಿಯೊಬ್ಬರು ಪಂಚಾಯತಿ ಸದಸ್ಯರ ಕಿರುಕುಳ ಸಹಿಸಲಾರದೇ ಆತ್ಮ ಹತ್ಯೆಗೆ ಶರಣಾದ ದುರಂತ ಪ್ರಕರಣ.

"...ಗ್ರಾಮ ಪಂಚಾಯತ್‌ಗಳಲ್ಲಿ ಎಲ್ಲ ಯೋಜನೆಗಳಿಗೂ ಜನಪ್ರತಿನಿಧಿಗಳ ಸಂಬಂಧಿಕರೇ ಫಲಾನುಭವಿಗಳಾಗಿದ್ದಾರೆ. ಅಲ್ಲದೆ ಇವರ ಸಂಬಂಧಿಕರೇ ಗುತ್ತಿಗೆದಾರರಾಗಿದ್ದಾರೆ. ಪ್ರಾಮಾಣಿಕವಾಗಿ ಕೆಲಸ ಮಾಡಲು ಬಯಸುವವರಿಗೆ ಪ್ರಾಣಭಯದ ವಾತಾವರಣ ಇದೆ. ಸರ್ಕಾರದಿಂದ ನಮಗೆ ರಕ್ಷಣೆ ಇಲ್ಲ. ಆದ್ದರಿಂದ ಸಾಮೂಹಿಕವಾಗಿ ರಾಜಿನಾಮೆ ನೀಡುತ್ತಿದ್ದೇವೆ..." ಎಂದು ರಾಜಿನಾಮೆ ಕೊಟ್ಟವರು ಅಳಲು ತೋಡಿಕೊಂಡಿದ್ದಾರೆ. ಭ್ರಷ್ಟಾಚಾರಕ್ಕೆ ಹಾಗೂ ಮಾಡದ ಕೆಲಸಕ್ಕೆ ಬಿಲ್ ಪಾವತಿ ಮಾಡಬೇಕೆಂಬ ಮಟ್ಟದ ಅಕ್ರಮಗಳಿಗೆ ಎಲ್ಲ ಪಿಡಿಓಗಳು ಒಪ್ಪುತ್ತಾರೆಂದೇನೂ ಇಲ್ಲ. ಪಂಚಾಯತ್‌ಗಳು ಸೇರಿದಂತೆ ಸರ್ಕಾರಿ ಏಣಿಯ ವಿವಿಧ ಮೆಟ್ಟಿಲುಗಳ ಹಂತದಲ್ಲಿ ಭ್ರಷ್ಟಾಚಾರ ಮತ್ತು ಸ್ವಜನ ಪಕ್ಷಪಾತದ ಆರೋಪಗಳು ಯಾವತ್ತೂ ಇದ್ದವಾದರೂ ರಾಜ್ಯದಲ್ಲಿ ಬಿಜೆಪಿ ಪಕ್ಷ ಪ್ರವರ್ಧಮಾನಕ್ಕೆ ಬಂದಂತೆ ಈ ಅಕ್ರಮಗಳೂ ಪ್ರವರ್ಧಮಾನಕ್ಕೆ ಬಂದಿರುವುದು ಎದ್ದು ಕಾಣುತ್ತದೆ. ಹುಚ್ಚನ ಮದುವೆಯಲ್ಲಿ ಉಂಡವನೇ ಜಾಣ ಅಂದ ಹಾಗೆ ಬಿಜೆಪಿ ಸರ್ಕಾರದ ಅವಧಿಯಲ್ಲಿ ಭ್ರಷ್ಟತೆ ಮುಗಿಲು ಮುಟ್ಟಿದೆ. ಬಿಜೆಪಿ ದರ್ಬಾರ್‌ನಲ್ಲಿ ಆಡಳಿತ, ಸರ್ಕಾರಿ ಯಂತ್ರ ಯಾವ ಪರಿ ನಡೆಯುತ್ತಿದೆ ಎಂಬುದಕ್ಕೆ ಈ ಪ್ರಕರಣ ಕೂಡ ಒಂದು ಅಳತೆಗೋಲಿನಂತೆ ಕಾಣುತ್ತಿದೆ ಎಂದರೆ ಅದರಲ್ಲಿ ತಪ್ಪೇನು ಇಲ್ಲ.

ಅಕ್ಟೋಬರ್ 17-18,2011 ರಂದು ನವದೆಹಲಿಯಲ್ಲಿ ಸಭೆ ಸೇರಿದ್ದ ಸಿಪಿಐ(ಎಂ) ಪಾಲಿಟ್ ಬ್ಯುರೋ ನೀಡಿದ ಹೇಳಿಕೆ

ಕಾರ್ಪೋರೇಟ್‌ಗಳ ವಿರುದ್ದದ ಚಳವಳಿ

ಅಮೆರಿಕದಲ್ಲಿ 'ವಾಲ್ ಸ್ಟ್ರೀಟ್ ವಶಪಡಿಸಿಕೊಳ್ಳಿ' ಚಳವಳಿ ಸೇರಿದಂತೆ ಯೂರೋಪ್ ಮತ್ತು ಜಗತ್ತಿನ ಹಲವಡೆ ಜನ ಚಳವಳಿ, ಹೋರಾಟಗಳು ಆರಂಭಗೊಂಡಿವೆ. ಬೃಹತ್ ಬ್ಯಾಂಕಿಂಗ್ ವಲಯದ ಹಣಕಾಸು ನೀತಿ ಮತ್ತು ಹಣಕಾಸು ಬಂಡವಾಳದ ವಿರುದ್ಧ ಜನಾಕ್ರೋಶ ಉಲ್ಬಣಿಸುತ್ತಿರುವುದನ್ನು ಈ ಹೋರಾಟಗಳು ಬಿಂಬಿಸುತ್ತವೆ. ಈ ಹಿನ್ನೆಲೆಯಲ್ಲಿ ಕಾರ್ಪೋರೇಟ್‌ಗಳ ವಿರುದ್ಧದ ಚಳವಳಿಗೆ ಸಿಪಿಐ(ಎಂ) ತನ್ನ ಸಂಪೂರ್ಣ ಬೆಂಬಲ ನೀಡುತ್ತದೆ. ಒಂದೆಡೆ

ಜಾಗತಿಕ ಆರ್ಥಿಕ ಬಿಕ್ಕಟ್ಟಿನ ಭಾರದಲ್ಲಿ ಕಾರ್ಮಿಕ ವರ್ಗವು ನಲುಗುತ್ತಿದ್ದರೆ ಬೃಹತ್ ಬಂಡವಾಳಿಗ ಕಂಪನಿಗಳು ಅಂದರೆ ಕಾರ್ಪೊರೇಟ್ ಕಂಪನಿಗಳು ಸರ್ಕಾರಗಳ ಬೃಹತ್ ಪರಿಹಾರಧನವನ್ನು ಬಾಚಿಕೊಂಡವು ಎಂಬುದನ್ನು ಜನತೆ ನೋಡುತ್ತ ಬರುತ್ತಿದ್ದಾರೆ.

ಉಪ ಚುನಾವಣೆ

ಕಾಂಗ್ರೆಸ್ ಪಕ್ಷವು ಹಿಸಾರ್ ಲೋಕಸಭಾ ಕೇತ್ರ ಸೇರಿದಂತೆ ಹಲವು ವಿಧಾನಸಭಾ ಸ್ಥಾನಗಳಿಗೆ ನಡೆದ ಉಪ ಚುನಾವಣೆಗಳಲ್ಲಿ ಹೀನಾಯ ಸೋಲು ಅನುಭವಿಸಿದೆ. ಇದು ಅಧಿಕಾರ ರೂಢ ಕಾಂಗ್ರೆಸ್ ಸರ್ಕಾರ ಹೇಗೆ ಭ್ರಷ್ಟಾಚಾರ ಮತ್ತು ಬೆಲೆ ಏರಿಕೆ ತಡೆಗಟ್ಟುವಲ್ಲಿ ವಿಫಲವಾಗಿ ಜನರ ಕಡೆಗಣನೆಗೆ ಗುರಿಯಾಗಿದೆ ಎಂಬುದನ್ನು ತೋರಿಸಿದೆ.

ಅಡ್ವಾಣಿ ಯಾತ್ರೆ

ಮತ್ತೊಂದೆಡೆ ಅಡ್ವಾಣಿ ದೇಶದಾದ್ಯಂತ ಹರಡಿರುವ ಭ್ರಷ್ಟಾಚಾರದ ವಿರುದ್ಧ ಕೈಗೊಂಡಿರುವ ಯಾತ್ರೆ ಹಾಸ್ಯಾಸ್ಪದವಾಗಿದೆ. ರಾಜ್ಯದಲ್ಲಿ ದೊಡ್ಡ ಮಟ್ಟದ ಭ್ರಷ್ಟಾಚಾರದ ನೇತಾರ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಜೈಲಿಗೆ ಹೋಗಿದ್ದಾರೆ. ಬಿಜೆಪಿ ಮತ್ತು ಅದರ ನಾಯಕರು ಕೂಡ ಭ್ರಷ್ಟಾಚಾರದ ಬಲೆಗೆ ಸಿಲುಕಿದ್ದು, ಅಡ್ವಾಣಿ ಹೋರಾಟ ಹಾಸ್ಯಾಸ್ಪದವಾಗಿದೆ.

ಕೇರಳ ಶಾಸಕರ ಅಮಾನತು

ಕೇರಳದಲ್ಲಿ ಯುಡಿಎಫ್ ನೇತೃತ್ವದ ಸರ್ಕಾರ ಇಬ್ಬರು ಸಿಪಿಐ (ಎಂ) ಶಾಸಕರನ್ನು ವಿಧಾನಸಭೆಯಿಂದ ಅಮಾನತು ಮಾಡಿದೆ. ಜೊತೆಗೆ ಒಮೆನ್ ಚಾಂಡಿ ಸರ್ಕಾರ ಈಚೆಗೆ ಪ್ರತಿಭಟನಾನಿರತ ವಿದ್ಯಾರ್ಥಿಗಳ ಹೋರಾಟವನ್ನು ಅಮಾನವೀಯ ರೀತಿಯಲ್ಲಿ ಹತ್ತಿಕ್ಕಿದೆ. ಇದನ್ನು ಪಾಲಿಟ್ ಬ್ಯೂರೋ ತೀವ್ರವಾಗಿ ಖಂಡಿಸುತ್ತದೆ, ಕೇರಳ ಜನತೆ ಆಡಳಿತತಾರೂಢ ಸರ್ಕಾರದ ಕ್ರಮವನ್ನು ರಾಜಕೀಯ ಒಳಸುಳಿಗಳ ಹಿನ್ನೆಲೆಯಲ್ಲಿ ಗಮನಿಸಬೇಕಾಗಿದೆ.

ಮಾರುತಿ ಕಾರ್ಮಿಕರ ಹೋರಾಟ

ಮಾರುತಿ ಸಜುಕಿ ಕಂಪೆನಿಯ ಕಾರ್ಮಿಕರು ತಮ್ಮ ಮೂಲಹಕ್ಕುಗಳನ್ನು ಪಡೆಯಲು ಹೋರಾಡುತ್ತಿದ್ದಾರೆ. ಆಡಳಿತ ಮಂಡಳಿಯು ಕಾರ್ಮಿಕರ ಹೋರಾಟವನ್ನು ಹತ್ತಿಕ್ಕಲು ಅನೀತಿಯುತ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ. ಇಲ್ಲೂ ಸಹ ಹರಿಯಾಣ ಸರ್ಕಾರ ಆಡಳಿತ ಮಂಡಳಿಯ ಹಿತಾಸಕಿಗಳಿಗೆ ಸೊಪ್ಪು ಹಾಕುವ ಮೂಲಕ ಕಾರ್ಮಿಕರ ವಿರೋಧಿ ನೀತಿ ಅನುಸರಿಸುತ್ತಿದೆ. ಜಪಾನ್ ಮೂಲದ ಬಹುರಾಷ್ಟ್ರೀಯ ಕಂಪೆನಿ ಮಾರುತಿ ಕೂಡ ಕಾರ್ಮಿಕರ ಸಂಘಟನೆಗಳನ್ನು ರಚಿಸಿಕೊಳ್ಳುವುದು ಅವರ ಮೂಲಭೂತ ಹಕ್ಕು ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು ಎಂದು ಸಿಪಿಐ (ಎಂ) ಆಗ್ರಹಿಸುವುದರ ಜೊತೆಗೆ ಕಾರ್ಮಿಕ ಹೋರಾಟಕ್ಕೆ ತುಂಬು ಬೆಂಬಲ ನೀಡುತ್ತದೆ.

ಮಹಿಳೆಯರ ರಾಜ್ಯ ಸಮಾವೇಶ

ಪುಟ 6 ರಿಂದ

ದೂರು ನೀಡಿದ ಮಹಿಳೆಯರನ್ನು ದಂಡನಾರ್ಹವಾಗಿ ಮಾಡುತ್ತಿದೆ; ಸಾಕ್ಷ್ಯ ಒದಗಿಸಲು ವಿಫಲಳಾದ ದೂರುದಾರಳು ದಂಡನೆಗೆ ಪರಿಣಿತಳಾಗುತ್ತಾಳೆ. ದುರುದ್ದೇಶದ ಆರೋಪ ಇಲ್ಲಿ ಹೊರಿಸಲಾಗುತ್ತಿದೆ. ದುರುದ್ದೇಶದ ದೂರಿನ ಸಂಬಂಧ ಈಗಾಗಲೇ ಶಾಸನಗಳು ಇರುವುದರಿಂದ, ಈ ಮಸೂದೆಯ ವ್ಯಾಪ್ತಿಯಲ್ಲಿ ದುರುದ್ದೇಶದ ದೂರನ್ನು ತರಬೇಕಾದ ಅವಶ್ಯವಿರಲಿಲ್ಲ ಎಂದು ಅವರು ಅಭಿಪ್ರಾಯಪಟ್ಟರು.

ನವಂಬರ್ 8 ರಂದು 11 ರಾಷ್ಟ್ರೀಯ ಕಾರ್ಮಿಕ ಸಂಘಟನೆಗಳು ದೇಶಾದ್ಯಂತ ಹಮ್ಮಿಕೊಂಡಿರುವ 'ಜೈಲ್‌ಭರೋ' ಚಳುವಳಿಯಲ್ಲಿ ದುಡಿಯುವ ಮಹಿಳೆಯರು ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಅವರು ಕರೆ ನೀಡಿದರು.

ಉದ್ಘಾಟನಾ ಸಮಾರಂಭದಲ್ಲಿ ಸಿಐಟಿಯು ಕರ್ನಾಟಕ ರಾಜ್ಯ ಪ್ರಧಾನ ಕಾರ್ಯದರ್ಶಿ ಪ್ರಸನ್ನ ಕುಮಾರ್, ದುಡಿಯುವ ಮಹಿಳೆಯರ ಸಂಚಾಲಕಿ ಸಮಿತಿಯ ಮುಖಂಡರು ಎಸ್.ವರಲಕ್ಷ್ಮಿ, ಸಿಐಟಿಯು ರಾಜ್ಯ ಸಮಿತಿ ಉಪಾಧ್ಯಕ್ಷ ಬಿ.ಮಾಧವ ಕೂಡಾ ಮಾತನಾಡಿದರು. ಸಿಐಟಿಯು ದ.ಕ. ಜಿಲ್ಲಾ ಸಮಿತಿಯ ಪದ್ಮಾವತಿ ಕುತ್ತಾರು ಸಭೆಯ ಅಧ್ಯಕ್ಷತೆ ವಹಿಸಿದ್ದರು.

ರಾಜ್ಯ ಸಂಚಾಲಕ ಸಮಿತಿ ಸಂಚಾಲಕಿ ಎಸ್.ವರಲಕ್ಷ್ಮಿ ಅವರು ಪ್ರತಿನಿಧಿ ಅಧಿವೇಶನದಲ್ಲಿ ಮಂಡಿಸಿದ ವರದಿಗೆ ಸಂಬಂಧಿಸಿ ರಾಜ್ಯದ ಎಲ್ಲಾ ಜಿಲ್ಲೆಗಳಿಂದಲೂ ಭಾಗವಹಿಸಿದ್ದ ಪ್ರತಿನಿಧಿಗಳಲ್ಲಿ ಆಯ್ದ ಪ್ರತಿನಿಧಿಗಳು ಚರ್ಚೆ ನಡೆಸಿ, ದುಡಿಯುವ ಮಹಿಳೆಯರ ಹೋರಾಟವನ್ನು ಮುನ್ನಡೆಸುವ ಪ್ರತಿಜ್ಞೆ ಮಾಡಿದರು. ಅಂಗನವಾಡಿ ನೌಕರರು, ಬಿಸಿಯೂಟ ನೌಕರರು, ಆಶಾ ಕಾರ್ಯಕರ್ತೆಯರು, ಬೀಡಿ ಕೆಲಸಗಾರರು, ಗಾರ್ಮೆಂಟ್ ಕಾರ್ಮಿಕರು, ಕಟ್ಟಡ ನಿರ್ಮಾಣ ಕಾರ್ಮಿಕರು ಹೀಗೆ ಅನೇಕ ಉದ್ಯೋಗಗಳ ದುಡಿಯುವ ಮಹಿಳೆಯರು ಸಮಾವೇಶವನ್ನು ಪ್ರತಿನಿಧಿಸಿದ್ದರು.

✣

ಭಾಷೆ, ಬದುಕಿನ ರಕ್ಷಣೆಗಾಗಿ

ಪುಟ 3 ರಿಂದ

ಹಲವಾರು ಕ್ಷೇತ್ರಗಳಲ್ಲಿ ಪ್ರಗತಿಸಾಧಿಸುತ್ತಾ, ಅನೇಕ ಮೇಧಾವಿಗಳನ್ನು ನೀಡಿ ಸಾಧನೆಗಳಿಂದ ಖ್ಯಾತಗೊಂಡಿದ್ದ ಕರ್ನಾಟಕವನ್ನು ಭ್ರಷ್ಟಾಚಾರದಲ್ಲಿ ನಂ. 1 ಸ್ಥಾನಕ್ಕೆ ತಂದದ್ದು ಬಿಜೆಪಿಯೇ. ಬಿಜೆಪಿ ಕರ್ನಾಟಕದ ಜನತೆಯ ಪಾಲಿನ ಶಾಪ. ರಾಜ್ಯೋತ್ಸವದ ಸಂದರ್ಭದಲ್ಲಿ ನೆಲ, ಜಲ ರಕ್ಷಣೆ, ನಾಡಿನ ಜನತೆಯ ಪ್ರಗತಿಗಾಗಿ ಸಂಕಲ್ಪಿಸುವಾಗಲೇ ಗಣಿ-ಭೂ ಮಾಫಿಯಾಗಳ ಭ್ರಷ್ಟ ಕೂಟದಿಂದ, ಕಾರ್ಪೋರೇಟ್ ಕಂಪನಿಗಳ ಭೂ ಮಾಲೀಕ ಬಂಡವಾಳದಾರರ ಕಪಿ ಮುಷ್ಠಿಯಿಂದ, ವಿಶೇಷವಾಗಿ ಕಾಂಗ್ರೆಸ್-ಬಿಜೆಪಿಗಳ ದುರಾಡಳಿತದಿಂದ ರಕ್ಷಿಸಬೇಕು. ಇದಕ್ಕಾಗಿ ಹೋರಾಡಬೇಕು. ರಾಜ್ಯೋತ್ಸವದ ಆಶಯಗಳು ಈಡೇರಿಕೆಗೆ ಅಂತಹ ರಾಜಕೀಯ, ಸಾಂಸ್ಕೃತಿಕ, ಆರ್ಥಿಕ ಆಯಾಮಗಳಲ್ಲಿ ಚಳುವಳಿ ಬೆಳೆಸುವುದು ಎಲ್ಲರ ಸಂಕಲ್ಪವಾಗಲಿ.

ಸ್ವಪ್ನಲೋಕದ ವಿಹಾರಿಗಳು !

ಪುಟ 7 ರಿಂದ

ಸುಮಾರು ಅರ್ಧದಷ್ಟು ಕುಟುಂಬಗಳಿಗೆ ಶೌಚಾಲಯಗಳೇ ಇಲ್ಲ.

ಇದೀಗ ಕಟು ವಾಸ್ತವತೆ. ಆದಾಗ್ಯೂ, ಈ ವರದಿ ಬಿಡುಗಡೆಯಾದ ಮರುದಿನವೇ, ರಾಷ್ಟ್ರೀಯ ಅಭಿವೃದ್ಧಿ ಮಂಡಳಿ ಸಭೆಯಲ್ಲಿ ಸರಕಾರಕ್ಕೆ ತನ್ನದೇ ವರದಿ ಏನು ಹೇಳಿದೆ ಎಂಬುದರ ಪರಿವೆಯೇ ಇದ್ದಂತಿರಲಿಲ್ಲ. ಅದನ್ನು ಆವರಿಸಿರುವ 'ಭ್ರಾಂತಿ'ಯ ಕಾಯಿಲೆ ಇದು.

ಆಶಾದೀಪ

ಭಾರತ ನಿಜವಾಗಿಯೂ, 'ಮಹಾಶಕ್ತಿಯಾಗಲು ಕಾದಿರುವ ದೇಶ'ವಾಗಿ ಮೂಡಿ ಬರಬೇಕಾದರೆ ನಮ್ಮ ಅಪಾರವಾದ ಮಾನವ ಸಂಪನ್ಮೂಲವನ್ನು ಉತ್ತಮ ಪಡಿಸುವ ಮೂಲಕ ನಮ್ಮಲ್ಲಿರುವ ಅಗಾಧ ಸಾಮರ್ಥ್ಯವನ್ನು ಸಾಕಾರಗೊಳಿಸಿದರೆ ಮಾತ್ರವೇ ಸಾಧ್ಯ. ಹಾಗಾಗಬೇಕಾದರೆ, ನಮ್ಮ ಜನತೆಯ ಬದುಕಿನ ಗುಣಮಟ್ಟವನ್ನು ಉತ್ತಮಗೊಳಿಸುವತ್ತ ಗಮನ ಕೇಂದ್ರೀಕರಿಸಬೇಕು. ಅದಕ್ಕೆ ಬೇಕಾದ ಸಂಪನ್ಮೂಲಗಳೂ ನಮ್ಮಲ್ಲಿವೆ ಎಂಬುದನ್ನು ಇದೇ ಅಂಕಣದಲ್ಲಿ ಹಲವು ಬಾರಿ ಚರ್ಚಿಸಿದ್ದೇವೆ. ಇಲ್ಲಿರುವ ಪ್ರಶ್ನೆ 'ರಾಜಕೀಯ ಇಚ್ಛಾಶಕ್ತಿ'ಯ ಅಭಾವವೂ ಅಲ್ಲ, ಬದಲಾಗಿ, ನಮ್ಮ ಆಳುವ ವರ್ಗಗಳ ಉದ್ದೇಶಪೂರ್ವಕವಾದ ಧೋರಣೆಗಳು ಮತ್ತು ಜನಗಳ ಹಿತಗಳನ್ನು ಬಲಿಗೊಟ್ಟು ತಮ್ಮ ಲಾಭಗಳನ್ನು ಗರಿಷ್ಟ ಮಟ್ಟಕ್ಕೇರಿಸಿಕೊಳ್ಳಲು ದೇಶದ ಸಂಪನ್ಮೂಲಗಳನ್ನು ಬಳಸಿಕೊಳ್ಳುವ ಅವರ ನವ-ಉದಾರವಾದಿ ಆರ್ಥಿಕ ಧೋರಣೆಗಳು. ಹೀಗೆ, ಅವರೇ ಭಾರತ ತನ್ನದೇ ಸಾಮರ್ಥ್ಯವನ್ನು ಸಾಕಾರಗೊಳಿಸಿಕೊಳ್ಳಲು, ಆಮೂಲಕ ಜಗತ್ತಿನಲ್ಲಿ ಒಂದು ನಿಜವಾದ ಮಹಾಶಕ್ತಿಯಾಗಿ ಮೂಡಿ ಬರಲು ಬಿಡುತ್ತಿಲ್ಲ.

ಭಾರತದ ಈ ನಿಜ ಸಾಮರ್ಥ್ಯವನ್ನು ಸಾಕಾರಗೊಳಿಸಿಕೊಳ್ಳಬೇಕು. ದೀಪಾವಳಿಯ ಈ ಸಂದರ್ಭದಲ್ಲಿ ಬಡವಾತಿಬಡವನ ಮನೆಯನ್ನು ಖಂಡಿತವಾಗಿಯೂ ಬೆಳಗಬಲ್ಲ ಒಂದೇ ಒಂದು ದೀಪ ಒಂದು ಉತ್ತಮ ಭವಿಷ್ಯದ ಆಶಾದೀಪವಷ್ಟೇ ಅಲ್ಲ, ಅದು ಈ ಆಶಯವನ್ನು ವಾಸ್ತವಗೊಳಿಸುವ ಆಕಾಂಕ್ಷೆಯನ್ನು ಕೂಡ ಬಿಂಬಿಸಬೇಕು.

ನಮಗೆ, ನಮ್ಮ ಸಂವಿಧಾನದ ಮೊದಲ ಕಲಮಿನಲ್ಲಿ ನಿರೂಪಿಸಿರುವ 'ಇಂಡಿಯಾ, ಅಂದರೆ ಭಾರತ'ಕ್ಕೆ ಈ ಆಶಯವನ್ನು ವಾಸ್ತವವಾಗಿಸುವ ಸಾಮರ್ಥ್ಯಗಳು ಮತ್ತು ಸಂಪನ್ಮೂಲಗಳು ಎರಡೂ ಇವೆ. ನಿಜ, ಇದಕ್ಕೆ ನಮ್ಮ ಆಳುವ ವರ್ಗಗಳು ಮತ್ತು ಸರಕಾರ ಭಾರತದ ನಿಜವಾದ ಸಾಮರ್ಥ್ಯವನ್ನು ಸಾಕಾರಗೊಳಿಸಬಲ್ಲ ಧೋರಣೆಗಳನ್ನು ಅನುಸರಿಸುವಂತೆ ಒತ್ತಡ ತರುವ ಜನತಾ ಹೋರಾಟಗಳನ್ನು ಮತ್ತಷ್ಟು ಬಲಿಷ್ಟಗೊಳಿಸಬೇಕು.

ಆದ್ದರಿಂದ, ನಮ್ಮ ನಿಜವಾದ ಸಾಮರ್ಥ್ಯವನ್ನು ಸಾಕಾರಗೊಳಿಸಿಕೊಳ್ಳುವ ಹೋರಾಟದಲ್ಲಿ ಎದ್ದು ನಿಲ್ಲಬೇಕು ಎಂಬ ಒಂದು ಕರೆಯೇ ಈ ಹಬ್ಬಗಳ ಸಂದರ್ಭದಲ್ಲಿ ನಮ್ಮ ಶುಭಾಶಯ.

*


ಟೆಲಿಕಾಂ ವಲಯದಲ್ಲಿ ನಿನ್ನೆಯ ಹಗರಣ ಇಂದಿನ ಅಧಿಕೃತ ಧೋರಣೆ !

ಯುಪಿಎ-2 ಸರಕಾರದ ಮಾಜಿ ದೂರಸಂಪರ್ಕ ಮಂತ್ರಿ ನ್ಯಾಯಾಂಗ ಬಂಧನಕ್ಕೆ ಹೋದ ಮೇಲೆ ಆ ಖಾತೆಯನ್ನು ನಡೆಸುತ್ತಿರುವ ಹೊಸ ಮಂತ್ರಿಗಳು ಹೊಸ 'ರಾಷ್ಟ್ರೀಯ ದೂರಸಂಪರ್ಕ ಧೋರಣೆ'(ಎನ್‌ಟಿಪಿ)ಯ ಕರಡನ್ನು ಸಂಭ್ರಮದಿಂದ ಪ್ರಕಟಿಸಿದ್ದಾರೆ. ಏನಿದೆ ಈ 'ಎನ್‌ಟಿಪಿ 2011'ರಲ್ಲಿ ದೂರಸಂಪರ್ಕ ವಲಯದಲ್ಲಂತೂ 'ರಾಷ್ಟ್ರೀಯ ಧೋರಣೆ'ಗಳನ್ನು ರೂಪಿಸುವುದು ಅಸ್ತಿತ್ವದಲ್ಲಿರುವ ನಿಯಮಗಳ ಉಲ್ಲಂಘನೆಗಳನ್ನು ಊರ್ಜಿತಗೊಳಿಸಲಿಕ್ಕಾಗಿ, ಅವನ್ನೇ ಹೊಸ ನಿಯಮಗಳಾಗಿ ಮಾಡಲಿಕ್ಕಾಗಿ, ಈ ಎನ್‌ಟಿಪಿ 2011 ಕೂಡ ಅದೇ ದಾರಿಯಲ್ಲಿದೆ ಎನ್ನುತ್ತಾರೆ ಈ ಕ್ಷೇತ್ರದ ಪರಿಣತ ವಿಶ್ಲೇಷಕರಾದ ಪ್ರಬೀರ್ ಪುರಕಾಯಸ್ಥ. ಈಗ ಆಗಿರುವ ಹಗರಣಗಳನ್ನು ಸಮರ್ಥಿಸಿಕೊಳ್ಳುವುದು ಅಥವ ಹೊಸ ಹಗರಣಗಳನ್ನು ಸೃಷ್ಟಿಸುವುದು ಹೇಗೆ ಎಂಬುದು ಈ ಹಿಂದಿನ ಎನ್‌ಟಿಪಿ 1994 ಮತ್ತು ಎನ್‌ಟಿಪಿ 1999 ರ ಗುರಿಯಾಗಿತ್ತು. ಎನ್‌ಟಿಪಿ 2011 ಅದೇ ಪರಂಪರೆಯನ್ನು ಹೇಗೆ ಮುಂದುವರೆಸಿದೆ ಎಂಬುದರ ವಿಶ್ಲೇಷಣೆಯನ್ನು ಅವರು ಮಾಡಿದ್ದಾರೆ.

"ಒಂದು ಸ್ಪರ್ಧಾತ್ಮಕ ವಾತಾವರಣದಲ್ಲಿ (ಖಾಸಗಿ) ಸೇವಾದಾರರು ಇನ್ನು ಮುಂದೆಯೂ ಸಕ್ಷಮರಾಗಿರಲು" ಸಹಾಯ ಮಾಡುವುದು ಈ ಹೊಸ ಧೋರಣೆಯ ಪ್ರಾಥಮಿಕ ಉದ್ದೇಶ ಎಂದು ಹೊಸ ಎನ್‌ಟಿಪಿ ಸಾಕಷ್ಟು ನೇರವಾಗಿಯೇ ಈ ವಿಶ್ಲೇಷಣೆಯನ್ನು ರುಜುವಾತುಗೊಳಿಸಿದೆ. ಎನ್‌ಟಿಪಿ 1999ನ್ನು ಎನ್‌ಡಿಎ ಸರಕಾರ ತಂದದ್ದು ಟೆಲಿಕಾಂ ಕಂಪನಿಗಳು ಆಗಿದ್ದ 'ಆದಾಯ ಹಂಚಿಕೆ ವ್ಯವಸ್ಥೆ'ಯ ಅಡಿಯಲ್ಲಿ ಸಾವಿರಾರು ಕೋಟಿ ರೂ.ಗಳ ಲೈಸೆನ್ಸ್ ಶುಲ್ಕಗಳನ್ನು ತೆರುವ ಬದ್ಧತೆಯಿಂದ ತಪ್ಪಿಸಿಕೊಳ್ಳಲು ನೆರವಾಗುವುದು. ಈಗ ಎನ್‌ಟಿಪಿ 2011ನ್ನು 2ಜಿ ಲೈಸೆನ್ಸ್ ಗಳನ್ನು ಪಡೆದವರು, ಶರತ್ತುಗಳ ಪ್ರಕಾರ ಅಗತ್ಯ ಮೂಲರಚನೆಗಳನ್ನು ಕಲ್ಪಿಸದೆಯೇ ತಮ್ಮ ಲೈಸೆನ್ಸ್‌ಗಳನ್ನು ಹತ್ತು ಪಟ್ಟು ಹೆಚ್ಚು ಬೆಲೆಗಳಿಗೆ ಮಾರಿಕೊಳ್ಳಲು ನೆರವಾಗಲೆಂದೇ ರೂಪಿಸಿದಂತಿದೆ ಎನ್ನುತ್ತಾರೆ ಪ್ರಬೀರ್ ಪುರಕಾಯಸ್ಥ.

2ಜಿ ಹಗರಣದಲ್ಲಿ 'ಮೊದಲು ಬಂದವರಿಗೆ ಮೊದಲ ಆದ್ಯತೆ'ಯ ಪ್ರಶ್ನೆಯಲ್ಲದೆ, ಮಾಜಿ ದೂರಸಂಪರ್ಕ ಮಂತ್ರಿಗಳು ಇನ್ನೆರಡು ಕ್ರಮಗಳನ್ನು ಕೈಗೊಂಡಿದ್ದರು. ಒಂದು, ದೂರಸಂಪರ್ಕ ಕಂಪನಿಗಳನ್ನು ವಹಿಸಿಕೊಳ್ಳುವುದು ಮತ್ತು ವಿಲೀನಗಳನ್ನು ಕುರಿತ ಮಾರ್ಗದರ್ಶಕ ಸೂತ್ರಗಳನ್ನು ಬದಲಿಸಿ ತಮ್ಮ ಇಕ್ವಿಟಿಗಳನ್ನು ಮಾರಲು ಕಂಪನಿಗಳಿಗೆ ಅವಕಾಶ ಕಲಿಸಿದ್ದು ಮತ್ತು ಎರಡು, ಸಾರ್ವಜನಿಕ ವಲಯದ ಬಿಎಸ್‌ಎನ್‌ಎಲ್ ಖಾಸಗಿ ಕಂಪನಿಗಳಿಗೆ 'ರೋಮಿಂಗ್' ಸೌಕರ್ಯ ಕಲ್ಪಿಸಲಿಕ್ಕಾಗಿ ತನ್ನ ಮೂಲರಚನೆಗಳನ್ನು ಒದಗಿಸುವಂತೆ ಬಲವಂತ ಮಾಡಿದ್ದು. ಇದರಿಂದ ಈಗ 2ಜಿ ಹಗರಣದಲ್ಲಿ ಸಿಲುಕಿರುವ ಯುನಿಟೆಕ್ ಮತ್ತು ಸ್ವಾನ್ ಕಂಪನಿಗಳು ತಮ್ಮದೇ ಸಂಪರ್ಕ ಜಾಲಗಳಿಗೆ ಹಣ ತೊಡಗಿಸದೆಯೇ, ಅಲ್ಪ ಹೂಡಿಕೆಯ ಮೇಲೆಯೇ ಗ್ರಾಹಕರನ್ನು ಪಡೆದು, ಬಿಎಸ್‌ಎನ್‌ಎಲ್ ಮೂಲರಚನೆಗಳ ಬೆನ್ನೇರಿ ತಮ್ಮ ಮಾರುಕಟ್ಟೆ ಮೌಲ್ಯಗಳನ್ನು ಹೆಚ್ಚಿಸಿಕೊಂಡು, ತಮ್ಮ ಶೇರುಗಳನ್ನು 10 ಪಟ್ಟು ಹೆಚ್ಚು ದರಗಳಲ್ಲಿ ಮಾರಿ ತಿನ್ನಲು ಸಾಧ್ಯವಾದದ್ದು.

ಇಂತಹ ಕಂಪನಿಗಳು ತಮ್ಮದೇ ಸಂಪರ್ಕ ಜಾಲವನ್ನು ರೂಪಿಸಿಕೊಳ್ಳುವಲ್ಲಿ ವಿಫಲರಾಗಿ, ಲೈಸೆನ್ಸ್‌ನ ಶರತ್ತುಗಳನ್ನು ಮುರಿದಿರುವುದರಿಂದ ಇವುಗಳ ಲೈಸೆನ್ಸ್‌ಗಳನ್ನು ರದ್ದು ಮಾಡಬೇಕು ಎಂದು ದೂರಸಂಪರ್ಕ ನಿಯಂತ್ರಣ ಆಯೋಗ ಯುಪಿಎ-2 ಸರಕಾರದ ದೂರಸಂಪರ್ಕ ಇಲಾಖೆಗೆ ಸೂಚಿಸಿತ್ತು. ಆದರೆ ಈ ಬಗ್ಗೆ ಇಲಾಖೆ ಮುತುವರ್ಜಿ ತೋರಿಸಲಿಲ್ಲ. ಈಗ ಎನ್‌ಟಿಪಿ 2011ರ ಕರಡನ್ನು ಇಂತಹ ಎಲ್ಲ ಉಲ್ಲಂಘನೆಗಳನ್ನು ಕಾನೂನುಬದ್ಧಗೊಳಿಸುವ ರೀತಿಯಲ್ಲಿ ರೂಪಿಸಲಾಗಿದೆ. ಹೀಗೆ ಮಾಡುವಾಗ ದೂರಸಂಪರ್ಕ ಮಂತ್ರಿ ಕಪಿಲ್ ಸಿಬಾಲ್ ಹಣಕಾಸು ಮಂತ್ರಿಯಾಗಿದ್ದ ಚಿದಂಬರಂ ದಾರಿಯಲ್ಲೇ ಸಾಗಿದ್ದಾರಷ್ಟೇ ಎನ್ನುತ್ತಾರೆ ಪ್ರಬೀರ್ ಪುರಕಾಯಸ್ಥ. ವೊಡಾಫೋನ್‌ನಂತಹ ಕಂಪನಿಗಳು 49% ಎಫ್‌ಡಿಐ ಮಿತಿಯನ್ನು ಉಲ್ಲಂಘಿಸಿದಾಗ, ಚಿದಂಬರಂ ಅದನ್ನೇ ಕಾರಣವಾಗಿ ಒಡ್ಡಿ ಮಿತಿಯನ್ನು 74%ಕ್ಕೆ ಏರಿಸಿದ್ದರು!



ಸರಕಾರ ಇರುವುದು ಖಾಸಗಿ ಉದ್ಯಮಿಗಳ ಉತ್ತೇಜನೆಗಾಗಿಯೇ ಎಂಬುದು ಇವರ ನವ-ಉದಾರವಾದಿ ತತ್ವದ ಹೂರಣ ತಾನೇ? ಅದನ್ನು ಮರೆಮಾಚಲು ಆಗಾಗ 'ಆಮ್ ಆದ್ಮಿ'ಯ ಮುಖವಾಡ ಸೃಷ್ಟಿಸಿದರಾಯಿತು!

★

ಚುನಾವಣೆ ಕಾಲಕ್ಕೆ 'ಎಡ' ಮುಖವಾಡ?

ಹೌದು 'ಆಮ್ ಆದ್ಮಿ'ಯ ಮುಖವಾಡ ಸೃಷ್ಟಿಸುವ ಹೊಸದೊಂದು ಪ್ರಯತ್ನ ಆರಂಭವಾಗಿದೆ ಎನ್ನಲಾಗುತ್ತಿದೆ. ಇದಕ್ಕಾಗಿ ಪ್ರಧಾನ ಮಂತ್ರಿಗಳ ಕಚೇರಿಯ ಮುಖ್ಯಸ್ಥರನ್ನು ಬದಲಿಸಲಾಗಿದೆಯಂತೆ. ಕಳೆದ ಸುಮಾರು ಎಂಟು ವರ್ಷಗಳಿಂದ ಪ್ರಧಾನಿಗಳ ಪರಮಾಪ್ತರಾಗಿದ್ದ ಟಿಕೆಎ ನಾಯರ್‌ರವರ ಜಾಗದಲ್ಲಿ ಪುಲೋಕ್ ಚಟರ್ಜಿ ಎಂಬುವರು ಈಗ ಪ್ರಧಾನಿಗಳ ಪ್ರಿನ್ಸಿಪಲ್ ಸೆಕ್ರೆಟರಿಯಾಗಿ ನೇಮಕಗೊಂಡಿದ್ದಾರೆ. 1980ರ ದಶಕದಲ್ಲಿ ರಾಯ್‌ಬರೇಲಿಯಲ್ಲಿ ಜಿಲ್ಲಾ ಮ್ಯಾಜಿಸ್ಟ್ರೇಟ್ ಆಗಿದ್ದ ಇವರ ಸದ್ಯದ ವಿಶ್ವಬ್ಯಾಂಕಿನ ಕಾರ್ಯಾವಧಿ ಮುಗಿಯಲು ಇನ್ನೂ ಒಂದು ವರ್ಷವಿದ್ದರೂ ಅದನ್ನು ಬಿಟ್ಟು ಪ್ರಧಾನಮಂತ್ರಿಗಳ ಕಚೇರಿಯ ಸಾರಥ್ಯವನ್ನು ವಹಿಸಿಕೊಂಡಿದ್ದಾರೆ.



ವೇದರಾಜ ಎನ್.ಕೆ.

ಈಗ ಉತ್ತರಪ್ರದೇಶದ ವಿಧಾನಸಭಾ ಚುನಾವಣೆಗಳೊಂದಿಗೆ ಮಹತ್ವದ ಚುನಾವಣೆಗಳ ಪರ್ವ ಆರಂಭವಾಗಲಿದ್ದು ಆ ವೇಳೆಗೆ ಕಾಂಗ್ರೆಸ್ ಎಡದತ್ತ ವಾಲಿರುವಂತೆ ತೋರಿಸುವುದು ಇದರ ಉದ್ದೇಶವೆನ್ನಲಾಗಿದೆ. ಇತ್ತೀಚಿನ ನಾಲ್ಕೂ ಉಪಚುನಾವಣೆಗಳಲ್ಲಿ ಕಾಂಗ್ರೆಸ್ ಸೋತಿದೆ. ಸೋನಿಯಾ ಗಾಂಧಿ ಅಧ್ಯಕ್ಷತೆಯ 'ರಾಷ್ಟ್ರೀಯ ಸಲಹಾ ಮಂಡಳಿ'(ಎನ್‌ಎಸಿ)ಯಲ್ಲಿ ತುಸು ಎಡದತ್ತ ವಾಲಿರುವ ಪರಿಣತರ ಪ್ರಭಾವ ಇತ್ತೀಚೆಗೆ ಬಹಳ ಕುಗ್ಗಿದ್ದು, ಈ ನೇಮಕದೊಂದಿಗೆ ಮತ್ತೆ ಅದನ್ನು ಹೆಚ್ಚಿಸುವ, ಆಮೂಲಕ ಯುಪಿಎ-2ಗೆ ಹೊಸದೊಂದು 'ಆಮ್ ಆದ್ಮಿ' ಮುಖವಾಡ ತೊಡಿಸುವ ಪ್ರಯತ್ನ ಇದು ಎನ್ನಲಾಗಿದೆ.

★

ಹೂಡಿಕೆದಾರರೇ ದೇವರು

ಯುಪಿಎ-2 ಕಾನೂನು ಮಂತ್ರಿಗಳ ಪ್ರಕಾರ ಇದು ಈಗಿನ ವಾಸ್ತವ. ಅದರಲ್ಲೂ ವಿದೇಶಿ ಹೂಡಿಕೆದಾರರು, ಅವರು ತಮ್ಮ ನಾಡಿನ ಮತ್ತು ನಮ್ಮ ನಾಡಿನ ಕಾರ್ಮಿಕ ಕಾನೂನುಗಳಿಗೆ ವ್ಯತಿರಿಕ್ತವಾಗಿ ವರ್ತಿಸಿದರೇನಂತೆ, ಅವರ ಹೂಡಿಕೆಗಳ 'ಪಾವಿತ್ರ್ಯ' ಅದಕ್ಕಿಂತ ಹೆಚ್ಚಿನದು, ಅದಕ್ಕೆ ಕಾರ್ಮಿಕರ 'ಗಲಭೆ'ಗಳಿಂದ ಕುಂದುಂಟಾಗಬಾರದು ಎಂದು ಅವರು ಅಪ್ಪಣೆ ಕೊಡಿಸಿದ್ದಾರೆ. ಆದ್ದರಿಂದಲೇ ದೇಶದ ಕಾರ್ಮಿಕ ಕಾನೂನುಗಳ ಪಾಲನೆಯಾಗಬೇಕೆಂದು ಹೋರಾಡುತ್ತಿರುವ 8000ಕ್ಕೂ ಹೆಚ್ಚು ಮಾರುತಿ ಸುಝುಕಿ, ಸುಝುಕಿ ಪವರ್ ಟ್ರೈನ್, ಸುಝುಕಿ ಮೋಟಾರ್ ಸೈಕಲ್ಸ್ ಮತ್ತು ಸುಝುಕಿ ಕಾಸ್ಟಿಂಗ್ಸ್‌ನ ಕಾರ್ಮಿಕರ ಮೇಲೆ ಆಡಳಿತ ವರ್ಗ ಮತ್ತು ಹರ್ಯಾಣ ಸರಕಾರ ನಿರಂತರವಾಗಿ ದಮನ-ದಬ್ಬಾಳಿಕೆ ಹರಿಯಬಿಟ್ಟರೂ ದಿವ್ಯಮೌನ ತಳೆದಿದ್ದ ಯುಪಿಎ-2 ಸರಕಾರದ ಕಾನೂನು ಮಂತ್ರಿಗಳು ಈಗ ಪರೋಕ್ಷವಾಗಿ ಅದನ್ನು ಸಮರ್ಥಿಸಿ ಕೊಂಡಿದ್ದಾರೆ. ಇದರಿಂದ ಪ್ರೋತ್ಸಾಹಿತರಾಗಿರುವ ಪಟ್ಟಭದ್ರ ಹಿತಾಸಕ್ತಿಗಳು, ಕಾರ್ಪೊರೇಟ್ ಮಾಧ್ಯಮಗಳು ಆ ಕಾರ್ಮಿಕರ ವಿರುದ್ಧ ತಮ್ಮ ಅಪಪ್ರಚಾರವನ್ನು ಇನ್ನಷ್ಟು ಹೆಚ್ಚಿಸಿವೆ.

ವಿದೇಶಿ ಹೂಡಿಕೆಗಳನ್ನು ಆಕರ್ಷಿಸಲು ಮತ್ತು ಉಳಿಸಿಕೊಳ್ಳಲು ಕಾರ್ಮಿಕ ಕಾನೂನುಗಳ ಉಲ್ಲಂಘನೆಯನ್ನು ಸಹಿಸಿಕೊಳ್ಳುವುದು, ಅಥವ ಅವನ್ನು 'ಶಾಸನಬದ್ಧವಾಗಿ' ದುರ್ಬಲಗೊಳಿಸುವುದು ಅನಿವಾರ್ಯವೇ? ಯುಪಿಎ ಆಳರಸರ ಮಟ್ಟಿಗೆ ಅನಿವಾರ್ಯ. ಆದರೆ ರಾಜಕೀಯ ಇಚ್ಛಾಶಕ್ತಿಯೆಂಬುದಿದ್ದರೆ ಅದು ಅನಿವಾರ್ಯವೇನಲ್ಲ. ತಮ್ಮ ನಾಡುಗಳಲ್ಲಿ ಇನ್ನೂ ಬಿಗಿಯಾದ ಕಾರ್ಮಿಕ ಕಾನೂನುಗಳನ್ನು ಕಂಡಿರುವ ವಿದೇಶಿ ಕಂಪನಿಗಳು ನಮ್ಮ ದೇಶದ ಕಾನೂನುಗಳನ್ನು ಪಾಲಿಸುವಂತೆ ಮಾಡುವುದು ಕಷ್ಟಸಾಧ್ಯವೇನಲ್ಲ. ಪಶ್ಚಿಮ ಬಂಗಾಲದಲ್ಲಿ ಎಡರಂಗ ಆಳ್ವಿಕೆಯ ಅವಧಿಯಲ್ಲಿ ಇದೇ ಜಪಾನ್ ದೇಶದ ಇನ್ನೊಂದು ಬೃಹತ್ ಕಂಪನಿ 'ಮಿತ್ಸುಬಿಶಿ ಕೆಮಿಕಲ್ ಕಾರ್ಪೊರೇಷನ್' ಹಲ್ದಿಯಾದಲ್ಲಿ ತನ್ನ ಸ್ಥಾವರವನ್ನು ನಿರ್ಮಿಸಿ ಕಾರ್ಮಿಕ ಕಾನೂನುಗಳನ್ನು ಪಾಲಿಸಿಕೊಂಡೇ ಭಾರತದಲ್ಲಿ ಜಪಾನಿನ ಅತಿ ದೊಡ್ಡ 'ವಿದೇಶಿ ನೇರ ಹೂಡಿಕೆದಾರ'ನಾಗಿ ಮೂಡಿ ಬಂದಿದೆ.

ಪಟ್ಟಭದ್ರರು ನಡೆಸಿರುವ ಇನ್ನೊಂದು ಅಪಪ್ರಚಾರವೆಂದರೆ, ಈ ವಿದೇಶಿ ಕಂಪನಿಗಳಲ್ಲಿ ಕಾರ್ಮಿಕರಿಗೆ 'ಒಳ್ಳೆಯ' ಸಂಬಳ ಸಿಗುತ್ತದೆ, ಆದರೂ ಅನಗತ್ಯವಾಗಿ ಗಲಾಟೆ ಮಾಡುತ್ತಾರೆ ಎಂಬುದು. ನಿಜ, ನಮ್ಮ ದೇಶದ ಯೋಜನಾ ಆಯೋಗ ಸುಪ್ರಿಂ ಕೋರ್ಟಿನಲ್ಲಿ ಸಲ್ಲಿಸಿದ ಬಡತನದ ರೇಖೆಯ ಲೆಕ್ಕಾಚಾರದ ಪ್ರಕಾರ 'ಒಳ್ಳೆಯ' ಸಂಬಳವೇ. ಆದರೆ ಯುಪಿಎ-2 ಸರಕಾರ ಬಲವಾಗಿ ನಂಬಿರುವ ಜಾಗತೀಕರಣದ ತತ್ವದ ಗತಿಯೇನು? ಇದೇ ಸುಝುಕಿ ಕಂಪನಿ ತನ್ನ ದೇಶದಲ್ಲಿ ಇಂತಹುದೇ ಕೆಲಸಕ್ಕೆ ಕೊಡುವ ಸಂಬಳಕ್ಕೂ ಇಲ್ಲಿ ಕೊಡುವ ಸಂಬಳಕ್ಕೂ ಸ್ವಲ್ಪವಾದರೂ ಹೋಲಿಕೆ ಬೇಕಾಗಿಲ್ಲವೇ? ಜಪಾನಿನಲ್ಲಿ ಒಬ್ಬ ಸುಝುಕಿ ನಿಯಮಿತ ಕಾರ್ಮಿಕನ ತಿಂಗಳ ಸಂಬಳ ಸುಮಾರು ರೂ.2.43 ಲಕ್ಷ, ಮತ್ತು ಬಹಳ ಕಡಿಮೆ ಸಂಖ್ಯೆಯಲ್ಲಿರುವ ಕಾಂಟ್ರಾಕ್ಟ್ ಕಾರ್ಮಿಕರ ದಿನಗೂಲಿ ರೂ.4800. ಭಾರತದಲ್ಲಿ ಇದು ಅನುಕ್ರಮವಾಗಿ ರೂ.15,000(ನಿಯಮಿತ ಕಾರ್ಮಿಕರಿಗೆ) ಮತ್ತು ರೂ.235 (ಗಣನೀಯ ಸಂಖ್ಯೆಯಲ್ಲಿರುವ ಕಾಂಟ್ರಾಕ್ಟ್ ಕಾರ್ಮಿಕರಿಗೆ). ಇದೀಗ ಜಾಗತೀಕರಣದ ಹೊಲಸು ಮುಖ-ಬಂಡವಾಳದ ಜಾಗತೀಕರಣ ಬೇಕು, ಆದರೆ ಶ್ರಮದ ಜಾಗತೀಕರಣ ಸಲ್ಲದು! ಈ ತತ್ವಕ್ಕೆ ತಲೆಬಾಗಿರುವ ಯುಪಿಎ-2 ಸರಕಾರ ಈ ಸುಝುಕಿಗಳ ಮರ್ಜಿಗಳಿಗೆ ತಲೆಯಾಡಿಸುತ್ತಿದ್ದರೆ ಆಶ್ಚರ್ಯವೇನು?

11.43% ಕ್ಕೆ ಜಿಗಿದ ಆಹಾರ ಹಣದುಬ್ಬರ

ಅಕ್ಟೋಬರ್ 15 ರ ವಾರಾಂತ್ಯದಲ್ಲಿ ಆಹಾರ ಹಣದುಬ್ಬರ 11.43% ಕ್ಕೆ ಜಿಗಿದಿದೆ, ಅದರ ಹಿಂದಿನ ವಾರ ಅದು 10.85%ದೊಂದಿಗೆ ಎರಡಂಕಿಯನ್ನು ಪ್ರವೇಶಿಸಿತ್ತು. ಈಗ ಪ್ರಕಟವಾಗಿರುವ ಆಹಾರ ವಸ್ತುಗಳ ಸಗಟು ಬೆಲೆ ಸೂಚ್ಯಂಕದ ಪ್ರಕಾರ ಕಳೆದ ಒಂದು ವರ್ಷದಲ್ಲಿ ತರಕಾರಿಗಳ ಬೆಲೆಗಳಲ್ಲಿ 25% ಏರಿಕೆಯಾಗಿದೆ. ಮೊಟ್ಟೆ, ಮೀನು-ಮಾಂಸಗಳ ಬೆಲೆಗಳಲ್ಲಿ 12.82%, ಹಣ್ಣುಹಂಪಲುಗಳ ಬೆಲೆಗಳಲ್ಲಿ 11.96% ಮತ್ತು ಹಾಲಿನ ಬೆಲೆಗಳಲ್ಲಿ 10.85% ಏರಿಕೆಯಾಗಿದೆ.

ಈ 11.43% ಏರಿಕೆ, ಕಳೆದ ವರ್ಷ ಇದೇ ಅವಧಿಯಲ್ಲಿ ದಾಖಲಿಸಿದ 14.2% ಏರಿಕೆಯ ಮೇಲೆ ಆಗಿರುವ ಏರಿಕೆ ಎಂಬುದನ್ನು ಗಮನಿಸಬೇಕು.

ವಿನಾಶಕಾರಿ ಗುಜರಾತ್ ಮಾದರಿ!

ಪುಟ 9 ರಿಂದ

ಕೃಷಿಯೇತರ ವ್ಯವಹಾರ ಹಾಗೂ ಉದ್ದಿಮೆಗಳಲ್ಲಿ ತೊಡಗಿರುವವರು ಹಣದ ಸೊಕ್ಕಿನಲ್ಲಿ ಮೆರೆಯುವವರು ಮರಳಿ ವಶಪಡಿಸಿಕೊಳ್ಳಲಾಗದಂತೆ ರಕ್ಷಣೆ.

ಕರ್ನಾಟಕ ಸರ್ಕಾರ ಈಗ ಈ ರಕ್ಷಣೆಯ ಕೋಟೆಯನ್ನು ಒಡೆದುಹಾಕಲು ರೈತನ ಭೂಮಿಗೆ ಹಣವುಳ್ಳವರು ಯಾರು ಬೇಕಾದರೂ ನುಗ್ಗಿ ವಶಪಡಿಸಿಕೊಳ್ಳಲು ಭೂಸುಧಾರಣಾ ಕಾಯ್ದೆ ಕಲಂ 79ಎಬಿ ಹಾಗೂ 109ಅನ್ನು ತಿದ್ದುಪಡಿಮಾಡುವುದಾಗಿ ಕೃಷಿ ಬಜೆಟ್ನಲ್ಲಿ ಘೋಷಿಸಲಾಗಿದೆ.

ಎರಡನೇದಾಗಿ ರೈತರಿಗೆ ಸಹಾಯಧನಕ್ಕೆ ಬದಲಾಗಿ ಹಣದ ವರ್ಗಾವಣೆ ಇಲ್ಲಿಯವರೆಗೆ ಸರ್ಕಾರ ವಿವಿಧ ಕಾರ್ಯಕ್ರಮಗಳ ಮೂಲಕ ಬೀಜ, ಗೊಬ್ಬರ, ಔಷಧಿಗಳನ್ನು ಇತರ ಕೆಲವು ಸೇವೆಗಳನ್ನು ಒದಗಿಸುತ್ತಿತ್ತು. ಈ ಕಾರ್ಯಕ್ರಮಗಳನ್ನು ಕಡಿತಮಾಡಿ ರೈತರಿಗೆ ನೇರವಾಗಿ ಹಣವನ್ನು 10 ಲಕ್ಷ ರೈತರಿಗೆ ಒಂದು ವರ್ಷಕ್ಕೆ 10,000ರೂ ನಂತೆ 1000 ಕೋಟಿರೂಗಳನ್ನು ನೀಡುವ ಕಾರ್ಯಕ್ರಮ ಆರಂಭ ಮಾಡಿದೆ. ಇದು ಕೃಷಿಗೆ ಪರಿಕರ, ಶೀಥಲಿಕರಣ ಸಂಸ್ಕರಣ ಮೊದಲಾದ ಸೇವೆಗಳನ್ನು ಒದಗಿಸಲಿರುವ ಬೃಹತ್ ಕಂಪನಿಗಳ ಸೇವೆಯನ್ನೂ ಕೊಳ್ಳಲು ಸರ್ಕಾರ ನೀಡುವ ಬಂಡವಾಳವಾಗಿದೆ.

ಬೃಹತ್ ಬಹುರಾಷ್ಟ್ರೀಯ ಕಂಪನಿಗಳಿಗೆ ಕೃಷಿ ಮಾರುಕಟ್ಟೆ ಅಂಗಣದಲ್ಲಿಯೇ ಮಾರುಕಟ್ಟೆ ಅಧಿಕಾರಿಗಳ ಕಣ್ಗಾವಲಿನಲ್ಲಿ ಉತ್ಪನ್ನಗಳ ಮಾರಾಟ ಕೊಳ್ಳುವಿಕೆ ನಡೆಯಬೇಕು, ಎಂಬ ನಿಯಮವನ್ನು ಮುರಿದು, ಹಳ್ಳಿಗಳಲ್ಲಿಯೇ ನೇರವಾಗಿ ಕೊಳ್ಳಬಹುದು. ರೈತರೊಂದಿಗೆ ಕರಾರು (ಕಂಟ್ರಾಕ್ಟ್) ಮಾಡಿಕೊಳ್ಳಬಹುದು ಎಂಬ ಕಲಂಗಳನ್ನುಇ ಅದರಲ್ಲಿ ಸೇರಿಸಲಾಗಿದೆ. ಆ ಮೂಲಕ ತೋರಿಕೆಗೆ ರೈತ ತನ್ನ ಭೂಮಿಗೆ ಒಡೆಯನಾಗಿರುವಾಗಲೇ ಬೃಹತ್ ಕಂಪನಿಗಳ ಕರಾರುದಾರನಾಗಿ, ಹೊಸ ರೀತಿಯ ಹಾಗೂ ಇನ್ನಷ್ಟು ಅಪಾಯ ಕಾರಿಯಾದ ಗೇಣಿದಾರಿಕೆಯನ್ನು ಹುಟ್ಟು ಹಾಕಲಾಗುತ್ತಿದೆ. ಹೀಗೆ ಭೂ ಸುಧಾರಣೆ ಕಾನೂನನ್ನೂ ತಿದ್ದುಪಡಿ ಮಾಡದೆಯೆ ಭೂ ಸಂಬಂಧಗಳನ್ನು ತಿರುಚಲಾಗಿದೆ. ನಿರಂಜನರ ಕಾದಂಬರಿ ಚಿರಸ್ಮರಣೆಯನ್ನು ನೆನಪಿಸಿಕೊಳ್ಳಿ. ಅಂದಿನ ಹುತಾತ್ಮರನ್ನು ನ್ಯಾಯಾಲಯದ ವಿಚಾರಣೆಗೊಳಪಡಿಸಿದ ಹಾಗೂ ಗಲ್ಲಿಗೇರಿಸಿದ್ದು ಮಂಗಳೂರಿನಲ್ಲಿ ಅಂದು ವ್ಯಾಪಕವಾಗಿ ಪ್ರಭಾವ ಬೀರಿದ ಘಟನೆ.

ಭೂ ಸುಧಾರಣೆಗೆ ನಿಯಮಗಳ ತಿದ್ದುಪಡಿ

ಕರ್ನಾಟಕದಲ್ಲಿ ಭೂ ಸುಧಾರಣ ಕಾನೂನಿನ ಸಡಿಲತೆಯ ಬಗ್ಗೆ, ಅದರಲ್ಲಿ ಸೃಷ್ಟಸಿರುವ ಸಂದುಗೊಂದುಗಳ ಬಗ್ಗೆ ಅದರ ಜಾರಿ ಹಾಗೂ ಜಾರಿಯ ಪರಿಣಾಮದ ಬಗ್ಗೆ ನಮಗೆ ಸಾಕಷ್ಟು ಟೀಕೆ, ವಿಮರ್ಶೆಗಳಿವೆ. ಕರ್ನಾಟಕದಲ್ಲಿ ಭೂ ಸುಧಾರಣೆಯ ಬಗ್ಗೆ ಮೊದಲು ದನಿ ಎತ್ತಿದ್ದ 1936 ರಲ್ಲಿ ರೂಪಗೊಂಡ ಅಖಿಲ ಭಾರತ ಕಿಸಾನ್ ಸಭಾ ಸ್ವಾತಂತ್ರ ಪೂರ್ವದಲ್ಲಿಯೇ ಅಖಿಲ ಭಾರತ ಕಿಸಾನ ಸಭನದ ಕೇರಳ ಪತ್ರಿಕೆ ಮಲಬಾರ್ ಪ್ರಾಂತ್ಯದಲ್ಲಿ ನಡೆಸಿದ ಹೋರಾಟಗಳು 1943 ರ ಕಾಸರಗೋಡಿನ ಕಯ್ಯೂರು ಹೋರಾಟ ಮತ್ತು ಸಮಕಾಲಿನ ಹೋರಾಟಗಳಲ್ಲಿ ತುತ್ತ ತುದಿಯನ್ನು ಮುಟ್ಟಿದುವು ಅಂದು ಮದ್ರಾಸ್ ಪ್ರಾಂತ್ಯದ ಭಾಗವಾಗಿದ ಹಾಗೂ ನೆರೆಯ ಪ್ರದೇಶವಾಗಿದ್ದ ದ.ಕನ್ನಡ ಪ್ರದೇಶವನ್ನು ಈ ಚಳುವಳಿ ಆವರಿಸಿತು. ಹಾಗೆಯೆ ಉತ್ತರ ಉತ್ತರ ಕನ್ನಡ ಜಿಲ್ಲೆಯಲ್ಲಿ ಮಹರಾಷ್ಟ್ರದ ಕಿಸಾನ್ ಸಭಾದ ಭಾಗದಲ್ಲಿ ಸ್ವಾತಂತ್ರ್ಯ ಪೂರ್ವದಲಿಯೇ ಹಾಗೆಯೇ ಆಂಧ್ರದ ತೆಲಂಗಾಣ ರೈತರ ಸಶಸ್ತ್ರ ಚಳುವಳಿ ರಾಜ್ಯದ ಕೋಲಾರ ಜಿಲ್ಲೆ ಹಾಗೂ ಗುಲ್ಬರ್ಗಾದ ಮೇಲೆ ಪರಿಣಾಮ ಬೀರಿ ಗೇಣಿದಾರ ರೈತರ ಹೋರಾಟಗಳು ಜಮೀನುದಾರಿ ರದ್ದತಿ ಹಾಗೂ ಜೋಡಿದಾರಿ, ಇನಾಂ ರದ್ದತಿ ಹೋರಾಟಗಳು ಆರಂಭವಾದವು. ಇವುಗಳ ಪರಿಣಾಮವಾಗಿ ಮೂಡಿದ ಕರ್ನಾಟಕ ಪ್ರಾಂತ ರೈತ ಸಂಘ ಭೂ ಸುಧಾರಣೆಯ ಬಗ್ಗೆ ನಿರ್ದಿಷ್ಟ ಪ್ರಸ್ತಾವಗಳನ್ನು ಮುಂದಿಟ್ಟಿದು. ಕರ್ನಾಟಕದಲ್ಲಿ ಅಂಗೀಕಾರವಾದ ಭೂ ಸುಧಾರಣಾ ಕಾನೂನಿನ ಹಾಗೂ ಜಾರಿಯ ಸಡಿಲತೆಯ ಬಗ್ಗೆ ಹೊರಾಟವನ್ನೂ ನಡೆಸಿತು.

ಭೂ ಸುಧಾರಣಾ ಕಾನೂನಿನ ಈ ಪ್ರಮುಖ ಅಂಶಗಳಲ್ಲಿ ಭೂಮಿತಿ ಕಾನೂನಿನ ಅಡಿಯಲ್ಲಿ ರಾಜ್ಯದಲ್ಲಿ ಸಾಗುವಳಿಯಲ್ಲಿರುವ ಸುಮಾರು 2.50 ಕೋಟಿ ಎಕರೆ ಸಾಗುವಳಿ ಭೂಮಿಯಲ್ಲಿ ಕೇವಲ ಒಂದು ಲಕ್ಷ ಎಕರೆಯನ್ನು ಸುಮಾರು 25,000 ಜನರಿಗೆ ವಿತರಿಸಲಾಗಿದೆ. ಇದು ರಾಜ್ಯದ ಕೃಷಿ ಭೂಮಿಯ ಕೇವಲ ಶೇ 0.4 ಭಾಗ ಮಾತ್ರ, (ಕರ್ನಾಟಕಕ್ಕಿಂತ ಕಡಿಮೆ ಸಾಗುವಳಿ ಭೂಮಿ ಇರುವ ಪ.ಬಂಗಾಳದಲ್ಲಿ 10.88 ಲಕ್ಷ ಎಕರೆಯನ್ನು 28 ಲಕ್ಷಕೂ ಹೆಚ್ಚು ಕುಟುಂಬಗಳಿಗೆ ನೀಡಲಾಗಿದೆ) ಇದರಿಂದಲೇ ಸ್ಪಷ್ಟವಾಗುತ್ತದೆ. ಕರ್ನಾಟಕದಲ್ಲಿ ಭೂಮಿತಿ ಕಾಯಿದೆ ಸಂಪೂರ್ಣ ವಿಫಲವಾಗಿದೆ ಎಂದು. ಜೊತೆಗೆ ಕರ್ನಾಟಕದ ಉದ್ದಗಲಕ್ಕೂ ಹರಡಿರುವ ಸಾವಿರಾರು ಎಕರೆ ಭೂಮಿಯ ನೂರಾರು ಜನ, ನೂರಾರು ಎಕರೆ ಭೂಮಿಯ ಒಡೆಯರಾದ ಹತ್ತಾರು ಸಾವಿರ ಜನ ಭೂ ಮಾಲಕರನ್ನು ನೋಡಿದರೆ ಸಾಕು ಇದು ಮತ್ತಷ್ಟು ಖಾತರಿಯಾಗುತ್ತದೆ.ಇನ್ನು ಗೇಣಿ ಕಾಯಿದೆಗೆ ಸಂಬಂಧಿಸಿ ಹೇಳುವುದಾದರೆ, ಅಖಿಲ ಭಾರತ ಕಿಸಾನ್ ಸಭಾ ಮತ್ತು ಕರ್ನಾಟಕ ಪ್ರಾಂತ ರೈತ ಸಂಘ, ದಿನಕರದೇಸಾಯಿ, ಗೋಪಾಲಗೌಡರ ನೇತೃತ್ವದ ಹೋರಾಟಗಳು ಗೇಣಿದಾರರಿಗೆ ಲಿಖೀತ ದಾಖಲೆಗಳನ್ನು ಖಾತರಿಗೊಳಿಸಿದ್ದ ಹಾಗೂ ಎಚ್ಚರ ಮೂಡಿಸಿದ್ದ ದ.ಕನ್ನಡ , ಉಡುಪಿ, ಉತ್ತರ ಕನ್ನಡ, ಶಿವಮೊಗ್ಗ, ಮೊದಲಾದ ಕೆಲವೇ ಜಿಲ್ಲೆಗಳಲ್ಲಿ ಗಣನೀಯ ಪ್ರಮಾಣದಲ್ಲಿ ಜಾರಿಗೊಳಿಸಲಾಯಿತು. ಆದರೆ ಉಳಿದ ಜಿಲ್ಲೆಗಳಲ್ಲಿ ನಾಮಕಾವಸ್ಥೆಯಾಗಿ ಗೇಣಿದಾರರನ್ನೂ ಬೃಹತ್ ಪ್ರಮಾಣದಲ್ಲಿ ಒಕ್ಕಲೆಬ್ಬಿಸಿ ಕಟ್ಟಡ ಕಾರ್ಮಿಕರನ್ನಾಗಿ ಪರಿವರ್ತಿಸುವಲ್ಲಿ ಮಾತ್ರ ಯಶಸ್ವಿಯಾಯಿತು. ಹಿಂದಿನ ಜಮೀನುದಾರರು ಜಮೀನುಗಳನ್ನು ತಾನೇ ವಶಪಡಿಸಿಕೊಂಡು ಭೂಮಾಲಕ ಕೃಷಿಕರಾದರು. ಗೇಣಿಯನ್ನು ಪೂರ್ಣವಾಗಿ ಗೇಣಿ, ಗುತ್ತಿಗೆ, ವಾರಕ್ಕೆ, ಪಾಲಿಗೆ ಕೃಷಿ ಮಾಡುವವರು ಅರೆ ರೈತರಾಗಿದ್ದಾರೆ. ಈ ಪರಿಸ್ಥಿತಿ ಇಂದಿಗೂ ಗ್ರಾಮಾಂತರ ಪ್ರದೇಶಗಳ ರಾಜಕೀಯವನ್ನು ಮಾತ್ರವಲ್ಲ ಇಡಿ ರಾಜ್ಯದ ರಾಜಕೀಯವನ್ನೇ ವಿರೂಪಗೊಳಿಸಿದೆ. ಇನ್ನು ಮೂರನೇಯ ಅಂಶ ಕೃಷಿ ಭೂಮಿಯನ್ನು ಕೃಷಿಕರಲ್ಲದವರು ಕೊಳ್ಳುವುದರಿಂದ ರಕ್ಷಣೆ. ಇದು ಇದ್ದುದರಲ್ಲಿ ಹೆಚ್ಚು ಜಾರಿಯಲ್ಲಿರುವ ಭೂ ಸುಧಾರಣಾ ಕಾನೂನಿನ ರಕ್ಷಣೆ. ಸ್ವಾತಂತ್ರ್ಯ ಪೂರ್ವದಲ್ಲಿ ಕೃಷಿಯ ಬಿಕ್ಕಟ್ಟು, ಮಾರುಕಟ್ಟೆ ಕುಸಿತ, ಬರಗಾಲ, ನೆರೆಗಳ ಸಂದರ್ಭದಲ್ಲಿ ಸಾಲ ನೀಡಿದ ದಲಾಲರು ಬಡ್ಡಿ ಸಾಹುಕಾರರುಗಳು ರೈತರ ಭೂಮಿಯನ್ನು ಒತ್ತೆ ಹಾಕಿಸಿಕೊಳ್ಳುತ್ತಿದ್ದರು. ಅನೇಕ ರೀತಿಯಲ್ಲಿ ಮೋಸಕ್ಕೊಳಗಾಗಿ ಸಾಲ ತೀರಲಾಗದಂತಾಗಿ ಭೂಮಿಯನ್ನು ಬಡ್ಡಿ ಸಾಹುಕಾರರುಗಳು, ದಲಾಲರು ವಶಪಡಿಸಿಕೊಳ್ಳುತ್ತಿದ್ದರು. ರೈತರನ್ನು ಹೊರದೂಡುತ್ತಿದ್ದರು. ಆ ಪರಿಸ್ಥಿತಿಯನ್ನು ನೆನಪಿಸಿಕೊಳ್ಳುವುದು ಅಗತ್ಯ. ಇಂತಹ ಆಕ್ರಮಣದಿಂದ ರೈತರನ್ನು ರಕ್ಷಿಸಲು ರೈತ ಚಳುವಳಿಗಳ ಒತ್ತಾಯದ ಮೇರೆಗೆ ರಕ್ಷಣಾತ್ಮಕ ನಿಯಮಗಳನ್ನು ಅಳವಡಿಸಲಾಯಿತು. ಅದರಂತೆ ಕೃಷಿಕರಲ್ಲದವರು ಯಾರು ಕೃಷಿ ಭೂಮಿಯನ್ನು ಕೊಳ್ಳುವಂತೆಯೇ ಇಲ್ಲ. ಕೃಷಿಕರು ಕೂಡ ಒಂದು ವರ್ಷಕ್ಕೆ ಎರಡು ಲಕ್ಷಕ್ಕಿಂತ ಹೆಚ್ಚು ಕೃಷಿಯೇತರ ಆದಾಯವನ್ನು ಹೊಂದಿದ್ದರೆ ಕೃಷಿಕರು ಕೂಡ ಕೃಷಿ ಭೂಮಿಯನ್ನು ಕೊಳ್ಳುವಂತಿಲ್ಲ. ಶಿಕ್ಷಣ ಸಂಸ್ಥೆ, ವಾಣಿಜ್ಯ ಸಂಸ್ಥೆ, ಧಾರ್ಮಿಕ ಸಂಸ್ಥೆಗಳು, ಟ್ರಸ್ಟ್‌ಗಳು ಯಾವುವೂ, ಕೃಷಿ ಸಹಕಾರ ಸಂಘಗಳು ಕೂಡ ಕೃಷಿ ಭೂಮಿಯನ್ನು ಕೊಳ್ಳುವಂತಿಲ್ಲ. ಹೀಗೆ ಬಿಗಿಯಾದ ರಕ್ಷಣೆ ನೀಡಲಾಗಿತ್ತಾದರೂ ಪ್ರತಿ ಮಾರಾಟದ ನೋಂದಾವಣೆಯಲ್ಲಿ ಕೊಳ್ಳುವವನ ಪಹಣಿಯನ್ನು ಮಾತ್ರ ಕೇಳಲಾಗುತ್ತದೆ. ಕೃಷಿಯೇತರ ಆದಾಯವನ್ನು ಸರಿಯಾಗಿ ಪರಿಗಣಿಸದಿರುವುದರಿಂದ ಅರ್ಧ ಎಕರೆ ಕೃಷಿ ಭೂಮಿಯ ಪಹಣಿಯನ್ನು ಪಡೆದುಕೊಂಡರೆ ಸಾಕು ಎಷ್ಟು ಕೃಷಿ ಭೂಮಿಯನ್ನಾದರೂ ಕೊಳ್ಳಬಹುದು ಎಂಬಂತೆ ವ್ಯವಹರಿಸಲಾಗುತ್ತಿತ್ತು. ಹೀಗೆ ಕೃಷಿಯಲ್ಲಿ ತೊಡಗಿದ ಅಥವಾ ಕೃಷಿ ಭೂಮಿಯ ಪಹಣಿ ತೋರಿಸಲಾಗದವರು, ಮುಖ್ಯವಾಗಿ ಕಂಪನಿಗಳು ಕೃಷಿ ಭೂಮಿಯನ್ನು ಕೊಳ್ಳಲು ಅವಕಾಶವಿರಲಿಲ್ಲ. ಅಷ್ಟರ ಮಟ್ಟಿಗೆ ಕೈಗಾರಿಕೆಗಳು, ಶಿಕ್ಷಣ, ಆರೋಗ್ಯ, ವ್ಯಾಪಕದಲ್ಲಿ ತೊಡಗಿರುವ ಕಂಪನಿಗಳಿಗೆ ಭೂ ಕಬಳಿಕೆ ಮಾಡಲು ದೊಡ್ಡ ಅಡ್ಡಿಯಾಗಿತ್ತು.

ಈ ಅಡ್ಡಿಗಳನ್ನು ನಿವಾರಿಸಿಕೊಳ್ಳಲು ಬಂಡವಾಳಶಾಹಿಗಳು ನಿರಂತರವಾಗಿ ಪ್ರಯತ್ನಿಸುತ್ತಿದ್ದರು. 1991ರ ನಂತರ ಹೊಸ ಆರ್ಥಿಕ ನೀತಿಗಳು ಜಾರಿಗೆ ತಂದ ಮೇಲೆ ಕೇಂದ್ರ ಸರ್ಕಾರ ಎಲ್ಲ ರಾಜ್ಯ ಸರ್ಕಾರಗಳಿಗೂ ಈ ಅಡ್ಡಿಗಳನ್ನು ತೆಗೆದು ಹಾಕಲು ಒತ್ತಾಯ ಮಾಡಲಾರಂಭಿಸಿತು. ಭೂ ಸುಧಾರಣೆ ಕಾನೂನು ಸಡಿಲಗೊಳಿಸುವುದು, ನಗರಗಳ ಬಾಡಿಗೆ ನಿಯಂತ್ರಣ ಕಾನೂನು ಸಡಿಲಗೊಳಿಸುವುದು, ಭೂ ಕಂದಾಯ ನಿಯಮಗಳ ತಿದ್ದುಪಡಿ, ಭೂ ದಾಖಲೆಗಳನ್ನು ಗಣಕೀಕರಿಸುವುದು ('ಭೂಮಿ' ಸಾಫ್ಟ್‌ವೇರ್) ಭೂಮಿಯ ಸರ್ವೆ ಖಾಸಗೀಕರಿಸುವುದು, ಅಧುನಿಕಗೊಳಿಸುವುದು ಇತ್ಯಾದಿ. ಇವುಗಳೆಲ್ಲವೂ 1991 ರಿಂದ ಒಂದೊಂದಾಗಿ ಜಾರಿ ಬರಲಾರಂಬಿಸಿದವು.

ಕರ್ನಾಟಕದಲ್ಲಿ 1994ರಲ್ಲಿ ಭೂ ಸುಧಾರಣೆ ಕಾನೂನಿಗೆ ಕೆಲವು ತಿದ್ದುಪಡಿಗಳನ್ನು ತರಲಾಯಿತು. ಈ ತಿದ್ದುಪಡಿಯ ಪ್ರಕಾರ ಜಿಲ್ಲಾದಿಕಾರಿ, ಸರ್ಕಾರದ ಕಾರ್ಯದರ್ಶಿ, ಕಂದಾಯ ಸಚಿವರ ಅಧ್ಯಕ್ಷತೆಯಲ್ಲಿರುವ ಉನ್ನತಾಧಿಕಾರ ಸಮಿತಿ, ಮುಖ್ಯಮಂತ್ರಿಗಳ ಅಧ್ಯಕ್ಷತೆಯ ಬಂಡವಾಳ ಹೂಡಿಕೆ ಸಮಿತಿ ಎರಡು ಘಟಕದಿಂದ 50 ಘಟಕಗಳವರೆಗೆ ಕೃಷಿಯೇತರ ಉದ್ದೇಶಗಳಿಗೆ ಭೂಮಿಯನ್ನು ಕೊಳ್ಳಲು ಅನುಮತಿ ನೀಡಬಹುದಾಗಿದೆ. ಈ ಇವುಗಳಿಗಿಂತ ಹೆಚ್ಚು ಭೂಮಿ ಬೇಕಾದಾಗ ಸರ್ಕಾರವೇ ಕೆ.ಐ.ಎ.ಡಿ.ಬಿ. (ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ) ಯನ್ನು ಒಂದು ರಿಯಲ್ ಎಸ್ಟೇಟ್ ಏಜೆಂಟನ್ನಾಗಿ ಪರಿವರ್ತಿಸಿತು. ರೈತರ ಭೂಮಿಯನ್ನೂ ಸ್ವಾಧೀನ ಪಡಿಸಿಕೊಂಡದ್ದನ್ನು ಡೀನೋಟಿಫೈ ಮಾಡುವ ಕ್ರಮಗಳು ಇಂದು ಭ್ರಷ್ಟಾಚಾರದ ಕೂಪವಾಗಿದೆ. ಈ ಪ್ರಕರಣಗಳಲ್ಲಿಯೇ ಮಾಜಿ ಮುಖ್ಯಮಂತ್ರಿ, ಇಬ್ಬರು ಮಾಜಿಮಂತ್ರಿ ಕಟ್ಟಾ ಸುಬ್ರಹ್ಮಣ್ಯ ನಾಯುಡು, ಕೃಷ್ಣಯ್ಯ ಶೆಟ್ಟಿ ಜೈಲಿನಲ್ಲಿದ್ದಾರೆ. ಮತ್ತಿಬ್ಬರು ಮಂತ್ರಿಗಳು ಅಶೋಕ್ ಮತು ನಿರಾಣಿರ ಮೇಲೆ ಮೊಕದ್ದಮೆಗಳು ದಾಖಲಾಗಿವೆ.

ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ನಡೆಸಿದ ಮೊದಲ ಜಾಗತಿಕ ಬಂಡವಾಳ ಹೂಡಿಕೆ ಸಮಾವೇಶದ ಬಗ್ಗೆ ಆರಂಭದಲ್ಲಿಯೇ ವಿವರಿಸಲಾಗಿದೆ. ಈ ಸಮಾವೇಶದಲ್ಲಿ ಪಾಲ್ಗೊಂಡ ರಾಜ್ಯದ ದೇಶದ, ವಿದೇಶದ ಬಂಡವಾಳ ಶಾಹಿಗಳ ಸಾಮೂಹಿಕ ಒತ್ತಡವೇನೆಂದರೆ ಭೂ ಸುಧಾರಣಾ ಕಾನೂನನ್ನು ತಿದ್ದುಪಡಿ ಮಾಡಬೇಕು. ಕೃಷಿ ಬಂಡವಾಳ ಹೂಡಿಕೆ ಸಮಾವೇಶಕ್ಕೆ ಬರಲಿರುವ ಬಂಡವಾಳ ಶಾಹಿಗಳ ಶರತ್ತೂ ಕೂಡ ಅದೇ. ಅದಕ್ಕೆ ಮೊದಲೇ 'ದೂರದೃಷ್ಠಿ–2020' ಸರ್ಕಾರದ ಉದ್ದೇಶವನ್ನೂ ಘೋಷಿಸಿತ್ತು. ಭೂ ಸುಧಾರಣಾ ಕಾನೂನನ್ನು ತಿದ್ದುಪಡಿ ಮಾಡಲು ಯತ್ನಿಸಿದರೆ ಬರಬಹುದಾದ ಪ್ರತಿಕ್ರಿಯೆಯ ಅಲೆಯನ್ನು ಎದುರಿಸಲು. ಬಿಜೆಪಿ ಸರ್ಕಾರ ಬಾಜಾ ಬಜಂತ್ರಿಗಳೊಂದಿಗೆ ಕೃಷಿ ಬಜೆಟ್ ಮಂಡಿಸಿತು. ಇದಕ್ಕಾಗಿ ರೈತ ಚಳುವಳಿಗಾರ ನಂಜುಂಡಸ್ವಾಮಿಯವರ ಹೆಸರನ್ನೂ ಬಳಸಿಕೊಂಡಿತು.

(ಮುಂದುವರಿಯುವುದು)

ಬಿಜೆಪಿ ದರ್ಬಾರ್

ಪುಟ 11 ರಿಂದ

ನಾವು ಹೇಳಬಹುದು. ಅಷ್ಟೆ.

● ನೆಲಮಂಗಲದ ಹತ್ತಿರ ಮರಕನ ಕುಪ್ಪೆ ಎಂಬುದು ಒಂದು ಹಳ್ಳಿ. ಅದು ಡಾಬಸ್ ಪೇಟೆಯ ಕೈಗಾರಿಕಾ ಪ್ರದೇಶಕ್ಕೆ ಸೇರಿದ ಜಾಗ ಅದು. ಅಲ್ಲಿ 7 ಎಕರೆ ಜಮೀನನ್ನು ವಿವಿಧ ಕಂಪನಿಗಳಿಗೆ ನೀಡಲಾಗಿದೆ. ಇಲ್ಲಿ ಏನು ಮಾಡಲಾಗಿದೆ ಎಂದರೆ ಈ ಜಮೀನನ್ನು ಅಧಿಸೂಚನೆಯಿಂದ ಕೈ ಬಿಡುವ ಮುಂಚೆಯೇ ಕಂಪನಿಗಳಿಗೆ ಹಂಚಲಾಗಿದೆ. ಆ ಮೇಲೆ ಅಧಿಸೂಚನೆಯಿಂದ ಕೈ ಬಿಡಲಾಗಿದೆ. ಆಹಾ! ಏನು 'ಕೈ'ಗಾರಿಕೆ.

● ಕಳೆದ ವರ್ಷ ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶ ಅಂತ ಒಂದನ್ನು ಬಿಜೆಪಿ ಸರ್ಕಾರ ಬೊಬ್ಬೆ ಹೊಡೆದು ನಡೆಸಿತಲ್ಲ? ಆಗ ಏನಾಗಿದೆ ನೋಡಿ. ಬಿಜೆಪಿ ಸರ್ಕಾರ ಶಕ್ತಿ ಸ್ಟೀಲ್ಸ್ ಪ್ರೈ.ಲಿ. ಎಂಬ ಕಂಪನಿಯೊಂದಿಗೆ 'ತಿಳುವಳಿಕೆ' ಪತ್ರಕ್ಕೆ(ಅಂದರೆ ಎಂ.ಓ.ಯು.) ಸಹಿ ಹಾಕೇ ಬಿಟ್ಟಿತು. ಆ ಕಂಪನಿಗೆ ಬಿಜಾಪುರದಲ್ಲಿ ಕೈಗಾರಿಕೆ ಸ್ಥಾಪನೆ ಹೆಸರಿನಲ್ಲಿ 200 ಎಕರೆ ಜಮೀನು ಮಂಜೂರು. ಅಮ್ಮಮ್ಮ. ಆ ಕಂಪನಿ ಕಾನೂನುಬದ್ಧವಾಗಿ ನೊಂದಣಿಯೇ ಆಗಿಲ್ಲ. ಅಂದರೆ ಅಸ್ತಿತ್ವದಲ್ಲೇ ಇಲ್ಲ. ಇಲ್ಲವೇ ಇಲ್ಲದ ಕಂಪನಿಗೆ 200 ಎಕರೆ ಭೂ ದಾನ ! ಬಡ ರೈತ 2 ಗುಂಟೆ ಸರ್ಕಾರಿ ಜಮೀನು ಒತ್ತುವರಿ ಮಾಡಿಕೊಂಡು ಕೃಷಿ ಮಾಡಿ ಅನ್ನ ಬೆಳೆಯುತ್ತಿದ್ದರೆ... ಅಬ್ಬಬ್ಬ ಏನು ತಕರಾರುಗಳು !! ಏನು ಕಾನೂನು, ಕಟ್ಟಳೆ. ?!

ಅದೇನು ಏನು ಮಾಯೆಯೋ, ಏನು ಮರ್ಮವೋ ??!! ನಮ್ಮ ನಿಮ್ಮಂತಹ ಪಾಮರರಿಗೆ ಇದೆಲ್ಲ ಅರ್ಥವಾಗುವುದಿಲ್ಲ ಬಿಡಿ. ಆದರೆ ಇಷ್ಟು ಮಾತ್ರ ಅರ್ಥ ಮಾಡಿಕೊಳ್ಳಲು ಸಾಧ್ಯ. ಅದೇನಂದರೆ ಶಕ್ತಿ ಸ್ಟೀಲ್ ಪ್ರೈ.ಲಿ. ಎಂಬ ಒಂದು ಇಲ್ಲವೇ ಇಲ್ಲದ ಕಂಪನಿಯ 'ಕರ್ತೃ' ಯಾರು ಎಂದರೆ ಅವರೇ ಮುರುಗೇಶ್ ನಿರಾಣಿಯವರ ಸಹೋದರ ಸಾಕ್ಷಾತ್ ಎಚ್.ಆರ್. ನಿರಾಣಿಯವರು.

0 ಅದೊಂದು ಖಾಸಗಿ ಸಕ್ಕರೆ ಕಾರ್ಖಾನೆ. ಅದರ ಮಾಲಿಕರು ಅದೇ ನಮ್ಮ ನಿರಾಣಿಯವರು. ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕಿನಿಂದ ಈ ಕಾರ್ಖಾನೆಗೆ 280 ಕೋಟಿ ರೂಪಾಯಿಗಳ ಸಾಲ ಮಂಜೂರಾಗಿದೆ. ಸಕ್ಕರೆ ಕಾರ್ಖಾನೆ ತಾನೆ ಮಂಜೂರಾಗಲಿ ಬಿಡಿ ಅಂತೀರಾ ? ಇಲ್ಲಿ ಕೇಳಿ. ಕಂಪನಿ ಈ ಸಂಬಂಧವಾಗಿ ತೊಡಗಿಸಿರುವುದು ಕೇವಲ 9 ಕೋಟಿ ರೂಪಾಯಿ ಬಂಡವಾಳ ಮಾತ್ರ. ಕಾನೂನು ಏನು ಹೇಳುತ್ತದೆ ? ಕಂಪನಿಯಿಂದ ತೊಡಗಿಸಲಾದ ಬಂಡವಾಳದ ಮೂರು ಪಟ್ಟು ಮೀರಿ ಯಾವುದೇ ಕಾರ್ಖಾನೆಗೆ ಬ್ಯಾಂಕು ಸಾಲ ನೀಡುವಂತಿಲ್ಲ. ಅದು ಹೇಗೆ ಈ ಕಂಪನಿಗೆ ತಾನು ತೊಡಗಿಸಿದ ಬಂಡವಾಳದ 30 ಪಟ್ಟು ಹಣ ಸಾಲ ದೊರೆಯಿತು ?

ಅಯ್ಯೋ !! ಹೋಗಲಿ ಬಿಡಿ. ಸಚಿವರಿಗೆ ಸುಮ್ಮನೆ ತೊಂದರೆ ಕೊಡುವುದು ಬೇಡ. ಪಾಪ ಭ್ರಷ್ಟಾಚಾರದ ವಿರುದ್ಧ ರಾಷ್ಟ್ರವ್ಯಾಪಿ ರಥಯಾತ್ರೆ ಕೈಗೊಂಡಿರುವ ಬಿಜೆಪಿ ಪಕ್ಷದ ನೇತಾರ ಅಡ್ವಾಣಿಯವರ ರ್‍ಯಾಲಿಗೆ ಜನರನ್ನು ಸೇರಿಸುವುದರಲ್ಲಿ ನಮ್ಮ ಸಚಿವರೂ, ಬಿಜೆಪಿ ಪಕ್ಷದವರು, ತುಂಬಾ 'ಬ್ಯುಸಿ' ಇದಾರೆ ಅನಿಸುತ್ತೆ. ಅಲ್ವಾ ???

★

ಸರ್ಕಾರಿ ಶಾಲೆ ಮುಚ್ಚುವುದೇ ಸಾಧನೆ

ಇದಕ್ಕೆ ಏನೆಂದು ಹೇಳುವುದು ? ವ್ಯಾಪಕ ವಿರೋಧ ಕಂಡು ಬರುತ್ತಿದ್ದರೂ ರಾಜ್ಯದಲ್ಲಿ 3,174 ಸರ್ಕಾರಿ ಶಾಲೆಗಳನ್ನು ಮುಚ್ಚುವ ತನ್ನ ತೀರ್ಮಾನವನ್ನು ಬದಲಿಸಲು ರಾಜ್ಯ ಬಿಜೆಪಿ ಸರ್ಕಾರ ತಯಾರಿಲ್ಲ. ಈ ಹಠಮಾರಿ ಧೋರಣೆಯನ್ನು ನೋಡಿ. ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇದೆ ಎನ್ನುವುದು ಸಮಸ್ಯೆಯನ್ನು ಸರಿಯಾಗಿ ಬಗೆಹರಿಸಲು ತಯಾರಿಲ್ಲದ ಸರ್ಕಾರಕ್ಕೆ ಒಂದು ನೆಪ ಅಷ್ಟೆ.

ಹಳ್ಳಿಗಾಡಿನಲ್ಲಿ, ಹಾಗೂ ತೀರಾ ಹಿಂದುಳಿದ ಪ್ರದೇಶಗಳಲ್ಲಿ ಶಾಲೆಯು ಗ್ರಾಮಗಳಿಂದ, ವಾಸದ ಮನೆಗಳಿಂದ ದೂರವಾದಷ್ಟು ಮಕ್ಕಳಿಗೆ ಶಿಕ್ಷಣ ಗಗನ ಕುಸುಮವೇ ಆಗುತ್ತದೆ. ಆ ಪ್ರದೇಶದ ಬಡ ಮಕ್ಕಳು ಶಿಕ್ಷಣವನ್ನೇ ಕೈಬಿಡುವ ಪ್ರಸಂಗಗಳು ಬರುತ್ತವೆ. ಶಿಕ್ಷಣದ ಖಾಸಗೀಕರಣವನ್ನು ತನ್ನ ಅಧಿಕೃತ ಸೈದ್ಧಾಂತಿಕ ನಿಲುವನ್ನಾಗಿ ಹೊಂದಿರುವ ಬಿಜೆಪಿ ಪಕ್ಷದ ಆಡಳಿತದಲ್ಲಿ ಕನ್ನಡದಲ್ಲಿ ಕಲಿಯುವ ಗ್ರಾಮಾಂತರದ ಬಡ ಮಕ್ಕಳ ಬಗೆಗೆ ಏನು ಕಾಳಜಿ ಕಾಣುತ್ತಿದೆ ಎಂಬುದು ಇದರಲ್ಲಿ ಗೊತ್ತಾಗುತ್ತಿದೆ.

★

ಜೇಬುಗಳ್ಳರು, ದರೋಡೆಕೋರರ ಬಿಜೆಪಿಯೊಳಗೆ ಇವರಿಗೇನು ಬಿರುದು ?

ಅರ್ಕಾವತಿ ಬಡಾವಣೆಯ ನಿರ್ಮಾಣಕ್ಕೆಂದು ಬೆಂಗಳೂರಿನ ರಾಚೇನಹಳ್ಳಿಯಲ್ಲಿ ಬಿಡಿಎ ವಶಕ್ಕೆ ಪಡೆದಿದ್ದ ಜಮೀನನ್ನು ಡೀನೋಟಿಫೈ ಮಾಡುವ ಮುನ್ನವೇ ಅಕ್ರಮವಾಗಿ ಯಡಿಯೂರಪ್ಪನವರ ಪುತ್ರ ರತ್ನಗಳಿಬ್ಬರು ಹಾಗೂ ಕೃಷ್ಣಯ್ಯಶೆಟ್ಟಿ ಸೇರಿ 1.12 ಎಕರೆ ಜಮೀನು ಜಿಪಿಎ ಮೂಲಕ ಕೊಂಡುಕೊಳ್ಳುವ ಮೂಲಕ ಲಪಟಾಯಿಸಿದ್ದು, ಆಮೇಲೆ ಮೂಲ ಮಾಲಿಕರ ಹೆಸರನಲ್ಲಿ ಅರ್ಜಿ ಹಾಕಿ ಡೀ ನೋಟಿಫೈ ಮಾಡಿಸಿಕೊಂಡಿದ್ದು...1 ಎಕರೆ ಜಮೀನು ಶೆಟ್ಟರ ಕೈಯಿಂದ ಯಡಿಯೂರಪ್ಪನವರ ಅಳಿಯನ ಮಾಲಿಕತ್ವದ ಧವಳಗಿರಿ ಪ್ರಾಪರ್ಟೀಸ್ ಅಂಡ್ ಡೆವಲಪರ್ಸ್ ಕಂಪನಿಗೆ ಹೋಗಿದ್ದು.... ಬರೀ 40 ಲಕ್ಷಕ್ಕೆ ಕೊಂಡು ಕೊಂಡಿದ್ದ ಈ ಜಮೀನನ್ನು ಧವಳಗಿರಿ ಕಂಪನಿಯು ಜಿಂದಾಲ್ ಸಮೂಹದ ಸೌತ್ ವೆಸ್ಟ್ ಕಂಪನಿಗೆ 20 ಕೋಟಿಗೆ ಮಾರಿದ್ದು....ಇವೆಲ್ಲಾ ಈಗಾಗಲೇ ಜನರಿಗೆ ಪರಿಚಿತವಾದ ಹಳೆ ಕತೆಗಳು.

ಈ ಪ್ರಕರಣದ ವಿಚಾರಣೆಯನ್ನು ಲೋಕಾಯುಕ್ತ ಸಂಸ್ಥೆ ನಡೆಸುತ್ತಿರುವಾಗ ಬಯಲಿಗೆ ಬಂದಿರುವ ಈ ವಿವರಗಳನ್ನು ನೋಡಿ.

ಯಾವುದೇ ಇಲಾಖೆ, ಪ್ರಾಧಿಕಾರ ಅಧಿಸೂಚನೆ ಹೊರಡಿಸಿದ ನಂತರ ಆ ಭೂಮಿಯನ್ನು ಕೊಳ್ಳುವಂತಿಲ್ಲ...ಮಾರುವಂತಿಲ್ಲ.



ಅದು ಕಾನೂನು ಬಾಹಿರ. ಹೀಗಿರುವಾಗ ಈ ಜಮೀನನ್ನು ಕೃಷ್ಣಯ್ಯ ಶೆಟ್ಟಿ ಧವಳಗಿರಿ ಕಂಪನಿಗೆ ಮಾರುವಾಗ ಬಿಡಿಎ ಸಂಸ್ಥೆಯಿಂದ " ರಾಚೇನ ಹಳ್ಳಿಯ ಸರ್ವೆ ನಂಬರ್ 52/2ರ ಭೂಮಿಯನ್ನು ಬಿಡಿಎ ಸ್ವಾಧೀನ ಪಡಿಸಿಕೊಂಡಿಲ್ಲ." ಎಂಬ ಪತ್ರವನ್ನು ಉಪ ನೊಂದಣಾಧಿಕಾರಿಗೆ ಸಲ್ಲಿಸಲಾಗಿದೆ. ಈ ಪತ್ರ ಬಿಡಿಎ ಲೆಟರ್ ಹೆಡ್‌ನಲ್ಲೆ ಇದೆ. ಆದರೆ ತನಿಖೆ ಮಾಡಿದಾಗ ಗೊತ್ತಾದದ್ದು ಈ ಬಿಡಿಎ ನಿರಕ್ಷೇಪಣಾ ಪತ್ರ ಒಂದು ನಕಲಿ ದಾಖಲೆ.

ಲಾಲ್ ಕೃಷ್ಣ ಅಡ್ವಾಣಿಯವರು ಯಾವ ಉದ್ದೇಶಕ್ಕೋ ಏನೋ ಕರ್ನಾಟಕದ ಬಿಜೆಪಿಯಲ್ಲಿ, ಬಿಜೆಪಿ ಸರ್ಕಾರದಲ್ಲಿ ಜೇಬುಗಳ್ಳರು, ದರೋಡೆಕೋರರು ಇದ್ದಾರೆ ಎಂದು ಇತ್ತೀಚೆಗೆ ಹೇಳಿದ್ದರು.

ಬಿಡಿಎ ಸಂಸ್ಥೆಯ ಪರವಾಗಿ ನಕಲಿ ದಾಖಲೆ ಸೃಷ್ಟಿಸಿ ಜಮೀನು ಲಪಟಾಯಿಸುವ ಈ ಶೂರರು ಇಲ್ಲಿ ಯಾವ ಲೆಕ್ಕದಲ್ಲಿ ಬರುತ್ತಾರೆ ? ಅವರಿಗೆ ಸಲ್ಲುವ ಬಿರುದು ಯಾವುದು ? ದಯಮಾಡಿ ಬಿಜೆಪಿ ರಾಜ್ಯ ಅಧ್ಯಕ್ಷರಾದ ಈಶ್ವರಪ್ಪನವರಾಗಲೀ ಮುಖ್ಯಮಂತ್ರಿ ಸದಾನಂದ ಗೌಡರಾಗಲಿ ಹೇಳುತ್ತಾರೆಯೇ ?

★

ಕಲ್ಲಿದ್ದಲು ಕೊರತೆ ಹಿಂದೆ ಖಾಸಗಿ ವಿದ್ಯುತ್ ಖರೀದಿಕೋರರ ಸಂಚು ?

ಕರ್ನಾಟಕವನ್ನು ಕತ್ತಲಿಗೆ ತಳ್ಳಿ ಕಲ್ಲಿದ್ದಲು ಪೂರೈಕೆಗೆಂದು ಕೋರಲು, ಹೆಚ್ಚುವರಿ ವಿದ್ಯುತ್ ಕೊಡಿ ಮನವಿ ಮಾಡಲು ಎಂದು ದೆಹಲಿ ಯಾತ್ರೆ ಕೈಗೊಂಡ ಇಂಧನ ಸಚಿವೆ ಶೋಭಾ ಕರಂದ್ಲಾಜೆಯವರು ಇನ್ನೂ ಪರಪ್ಪನ ಅಗ್ರಹಾರ ಯಾತ್ರೆ ಮಾಡದೇ ಹೊರಗೆ ಇದ್ದಾರೆ ಎಂಬುದು ನಮಗೆಲ್ಲಾ ಗೊತ್ತಿರುವ ಸಂಗತಿಯೇ.

ವಿದ್ಯುತ್ ಕಣ್ಣಾ ಮುಚ್ಚಾಲೆಯ ಬಗೆಗೆ ರಾಯಚೂರು ಶಾಖೋತ್ಪನ್ನ ವಿದ್ಯುತ್ ಸ್ಥಾವರದಲ್ಲಿ ಕಲಿದ್ದಲು ಕೊರತೆಯಾಗಿದೆ... ತೆಲಂಗಾಣ ಪ್ರಾಂತದಲ್ಲಿ ಬಂದ್ ಮುಷ್ಕರ ಇರುವುದರಿಂದ ಹೀಗಾಗಿದೆ ಎಂದೂ ನಮಗೆಲ್ಲಾ ಹೇಳಲಾಯಿತು.

ಆದರೆ ಕೆಪಿಟಿಸಿಎಲ್‌ನ ಹಲವು ಹಿರಿಯ ನಿವೃತ್ತ ಅಧಿಕಾರಿಗಳು ಈ ಹೇಳಿಕೆಯ ಸತ್ಯಾಸತ್ಯತೆಯ ಬಗೆಗೆ ಗಂಭೀರ ಸಂಶಯ ವ್ಯಕ್ತಪಡಿಸಿದ್ದಾರೆ.

ಅವರ ಹೇಳಿಕೆಯ ಪ್ರಕಾರ ತೆಲಂಗಾಣ ಚಳುವಳಿ ಕಲ್ಲಿದ್ದಲು ಕೊರತೆಗೆ ನಿಜವಾದ ಕಾರಣವಲ್ಲ. ಈ ಹಿಂದಿನಿಂದ ನಡೆದುಕೊಂಡು ಬಂದಂತೆ ಈಗಲೂ ಅಗತ್ಯ ಪ್ರಮಾಣದಲ್ಲಿ ಕಲ್ಲಿದ್ದಲು ಸಂಗ್ರಹದ ಪ್ರಮಾಣವನ್ನು ಕಾಪಾಡಿಕೊಂಡು ಬಂದಿದ್ದರೆ

ಅಷ್ಟು ಬೇಗ ಕಲ್ಲಿದ್ದಲು ಸಂಗ್ರಹ ಖಾಲಿಯಾಗುವ ಪರಿಸ್ಥಿತಿಯೇ ಬರುತ್ತಿರಲಿಲ್ಲ.

ಈ ರೀತಿ ಕಲ್ಲಿದ್ದಲು ಸಂಗ್ರಹದ ಪ್ರಮಾಣ ಕುಸಿದಿರುವುದು ಆಕಸ್ಮಿಕವಲ್ಲ. "ಆಪತ್ ಕಾಲ" ದಲ್ಲಿ "ಅತ್ಯುತ್ತಮ ದರ"ಕ್ಕೆ ವಿದ್ಯುತ್ ಪೂರೈಕೆ ಮಾಡುವ ಖಾಸಗಿ ಕಂಪನಿಗಳ ಜೊತೆ ಶಾಮೀಲಾಗಿ ರಾಯಚೂರು ಘಟಕದಲ್ಲಿ ಅಗತ್ಯ ಪ್ರಮಾಣದ ಕಲ್ಲಿದ್ದಲು ಸಂಗ್ರಹ ಮಾಡದೇ ಕೈ ಚೆಲ್ಲಲಾಗಿದೆ. ಇದರ ಹಿಂದೆ ದುರುದ್ದೇಶ, ಖಾಸಗಿ ವಿದ್ಯುತ್ ಉತ್ಪಾದಕರೊಂದಿಗಿನ ಭ್ರಷ್ಟ ನಂಟು ಇದೆ ಎಂದು ನಿವೃತ್ತ ಅಧಿಕಾರಿಗಳು ತೀವ್ರವಾಗಿ ಟೀಕಿಸಿದ್ದಾರೆ.

ಸಾಮಾನ್ಯ ಸಂದರ್ಭಗಳಲ್ಲೂ ಹಿಂದೆಲ್ಲಾ ಯಾವ ಪ್ರಮಾಣದಲ್ಲಿ ಕಲ್ಲದ್ದಲು ಸಂಗ್ರಹ ಮಾಡಲಾಗುತ್ತಿತ್ತು. ಈಗ ಯಾವ ಪ್ರಮಾಣದಲ್ಲಿ ಮಾಡಲಾಗುತ್ತಿದೆ ಅಂತ ಅವರು ಅಂಕಿ ಸಂಖ್ಯೆಗಳ ಸಮೇತ ಮಾಹಿತಿ ಕೊಟ್ಟಿರುವುದರಿಂದ ಈ ಟೀಕೆಯನ್ನು ಹಾಗೇ ಸುಮ್ಮನೆ ತಳ್ಳಿ ಹಾಕಲು ಸಾಧ್ಯವಿಲ್ಲ. ಇಂಧನ ಇಲಾಖೆಯ ಹಗರಣಗಳು ಯಾವಾಗ ಹೊರಬೀಳುತ್ತವೆಯೋ ನೋಡೋಣ.

ಜನವಿರೋಧಿ-ಕಾರ್ಮಿಕ ದ್ರೋಹಿ ನೀತಿಗಳ ವಿರುದ್ಧ

ಕಾರ್ಮಿಕ ವರ್ಗದ ಐಕ್ಯ ಕಾರ್ಯಾಚರಣೆ

ಎಸ್. ಪ್ರಸನ್ನ ಕುಮಾರ್

ಕೇಂದ್ರ ಕಾರ್ಮಿಕ ಸಂಘಟನೆಗಳು ದೇಶದ ಕಾರ್ಮಿಕರ ಹಾಗೂ ಜನ ಸಾಮಾನ್ಯರ ಹಿತದೃಷ್ಟಿಯಿಂದ ದುಡಿಯುವ ಜನರ ಪ್ರಮುಖ ಬೇಡಿಕೆಗಳ ಈಡೇರಿಕೆಗಾಗಿ ನಿರಂತರ ಹೋರಾಟಗಳನ್ನು ನಡೆಸುತ್ತಾ ಬಂದಿವೆ. ಆದರೆ ಸರಕಾರಗಳು ಬೆಲೆ ಏರಿಕೆ ನಿಯಂತ್ರಿಸಲು ಯಾವುದೇ ಸಕಾರಾತ್ಮಕ ಕ್ರಮಗಳನ್ನು ಕೈಗೊಳ್ಳಲು ಕಾಳಜಿ ವಹಿಸುತ್ತಿಲ್ಲ. ಮತ್ತೊಂದೆಡೆ ಅಗತ್ಯ ವಸ್ತುಗಳ ಬೆಲೆ ಏರಿಕೆ ಮತ್ತಷ್ಟು ತೀವ್ರಗೊಳ್ಳುವಂತೆ ಪೆಟ್ರೋಲಿಯಂ ಉತ್ಪನ್ನಗಳ ಬೆಲೆಗಳ ಏರಿಕೆ ಮಾಡಿ ಗಾಯದ ಮೇಲೆ ಬರೆ ಎಳೆದಂತಾಗಿದೆ. ಅಲ್ಲದೆ ಭ್ರಷ್ಟಾಚಾರದ ಪೆಡಂಬೂತ ಇಡೀ ಸಮಾಜವನ್ನೇ ಮಹಾಮ್ಮಾರಿಯಂತೆ ಕಾಡುತ್ತಿದೆ. ಬೆಲೆ ಏರಿಕೆ ನಿಯಂತ್ರಣಕ್ಕಾಗಲಿ ಅಥವಾ ಭ್ರಷ್ಟಾಚಾರದ ನಿಗ್ರಹಕ್ಕಾಗಲಿ ದೃಢವಾದ ಕ್ರಮಗಳನ್ನು ಕೈಗೊಳ್ಳಲಾಗಿಲ್ಲ. ಲಾಭದಾಯಕವಾಗಿರುವ ಕೇಂದ್ರ ಸಾರ್ವಜನಿಕ ಕ್ಷೇತ್ರದ ಕೈಗಾರಿಕೆಗಳ ಷೇರು ಬಂಡವಾಳವನ್ನು ಮಾರಾಟ ಮಾಡುವ ಮೂಲಕ ಈ ಒಂದು ವರ್ಷದಲ್ಲೇ 40,000 ಕೋಟಿ ರೂಪಾಯಿಗಳನ್ನು ಸಂಗ್ರಹಿಸಲು ಗುರಿ ಹೊಂದಿರುವುದು ಕಾರ್ಮಿಕರ ಹಾಗೂ ದೇಶದ ಹಿತಕ್ಕೆ ಮಾರಕವಾದ ಕ್ರಮಗಳಾಗಿವೆ. ಕಾರ್ಮಿಕ ಕಾನೂನುಗಳ ಜಾರಿಗೊಳಿಸದೇ ಸಾಮಾಜಿಕ ಭದ್ರತೆಗೆ ಧಕ್ಕೆ ಉಂಟು ಮಾಡಲಾಗಿದೆ. ವರ್ಷವಿಡೀ ನಿರಂತರವಾಗಿ ಮಾಡಬೇಕಾದ ಖಾಯಂ ಕೆಲಸಗಳನ್ನು ಗುತ್ತಿಗೆ ಪದ್ಧತಿಯಲ್ಲಿ ನಿರ್ವಹಿಸುವ ಮೂಲಕ ಕಾರ್ಮಿಕರನ್ನು ತೀವ್ರ ಶೋಷಣೆಗೆ ಗುರಿ ಮಾಡಲಾಗುತ್ತಿದೆ. ಕೇಂದ್ರ ಹಾಗೂ ರಾಜ್ಯ ಸರಕಾರಗಳ ನೇರವಾಗಿ ಗುತ್ತಿಗೆ ಪದ್ಧತಿಯಲ್ಲಿ ದುಡಿಯುವ ಕಾರ್ಮಿಕರಿಗೂ ಒಳಗೊಂಡು ಸಾರ್ವಜನಿಕ ಕ್ಷೇತ್ರದ ಹಾಗೂ ಖಾಸಗಿ ರಂಗದ ಕೈಗಾರಿಕೆಗಳಲ್ಲಿಯೂ ಕನಿಷ್ಟ ವೇತನ, ಭವಿಷ್ಯನಿಧಿ, ಇಎಸ್ಐ, ಬೋನಸ್ ಮತ್ತು ಗ್ರಾಚ್ಯುಟಿ ಸೌಲಭ್ಯಗಳನ್ನು ಜಾರಿಗೊಳಿಸದೇ ನಿರಾಕರಿಸಲಾಗುತ್ತಿದೆ. ಉದ್ಯೋಗ ಸೃಷ್ಟಿಸಲು ಬೇಕಾದ ಯೋಜನೆಗಳು ರೂಪಿಸಲಾಗುತ್ತಿಲ್ಲ. ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಒದಗಿಸುವ ಉದ್ದೇಶದಿಂದ ಮಾಡಿದ ಕಾನೂನು ಜಾರಿಗೊಳಿಸಲು ಅಗತ್ಯ ಹಣಕಾಸು ಸಂಪನ್ಮೂಲವನ್ನು ಒದಗಿಸದೇ ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಕೇವಲ ಬೂಟಾಟಿಕೆಯಾಗಿದೆ. ಕಾರ್ಮಿಕರ ಸಂಘಟನಾ ಹಕ್ಕನ್ನೇ ಮೊಟಕುಗೊಳಿಸಲು ಬಹುರಾಷ್ಟ್ರೀಯ ಕಂಪನಿಗಳು ಧಾಳಿ ನಡೆಸುತ್ತಿರುವಾಗ ಸರಕಾರಗಳು ಬಂಡವಾಳಗಾರರೊಂದಿಗೆ ಸಹಕರಿಸಿ ಕಾರ್ಮಿಕರ ಹಕ್ಕುಗಳ ಮೇಲೆ ಧಾಳಿ ನಡೆಸಲಾಗುತ್ತಿದೆ.

ದೇಶದ ಕಾರ್ಮಿಕ ವರ್ಗ ಐತಿಹಾಸಿಕ ಐಕ್ಯತೆ ರೂಪುಗೊಂಡಿದೆ. ಸಿಐಟಿಯು, ಐಎನ್‌ಟಿಯುಸಿ, ಬಿಎಂಎಸ್, ಎಐಟಿಯುಸಿ, ಹೆಚ್‌ಎಂಎಸ್, ಎಐಸಿಸಿಟಿಯು, ಟಿಯುಸಿಸಿ, ಎಐಯುಟಿಯುಸಿ, ಯುಟಿಯುಸಿ, ಎಲ್‌ಪಿಎಫ್, ಸೇವಾ ಹೀಗೆ ದೇಶದ 11 ಕೇಂದ್ರ ಕಾರ್ಮಿಕ ಸಂಘಗಳಾಗಿ ಮಾನ್ಯತೆ ಪಡೆದಿದ್ದೂ, ಎಲ್ಲಾ 11 ಕೇಂದ್ರ ಕಾರ್ಮಿಕ ಸಂಘಟನೆಗಳೂ ಒಂದೇ ವೇದಿಕೆಗೆ ಬಂದು ರಾಷ್ಟ್ರ ಮಟ್ಟದಲ್ಲಿ ಹೋರಾಟಕ್ಕೆ ಕರೆ ನೀಡಿರುವುದು ದೇಶದ ಇತಿಹಾಸದಲ್ಲೇ ಪ್ರಪ್ರಥಮವಾಗಿದೆ. ಈ ಹಿಂದಿನ ಸಂಧರ್ಭಗಳಲ್ಲಿ ಒಂದಲ್ಲ ಒಂದು ಸಂಘಟನೆ ಐಕ್ಯ ಹೋರಾಟದ ವೇದಿಕೆಯಿಂದ ಹೊರ ಉಳಿಯುತ್ತಿದ್ದವು. ಸಿಐಟಿಯು ಇಂತಹ ವಿಶಾಲ ಐಕ್ಯತೆಯನ್ನು ಕಟ್ಟಿ ಬೆಳೆಸಲು ನಿರಂತರವಾಗಿ ಶ್ರಮಿಸುತ್ತಾ ಬಂದಿದೆ. ಅಲ್ಲದೇ 40ಕ್ಕೂ ಹೆಚ್ಚು ನೌಕರರ ಫೆಡರೇಷನ್‌ಗಳು ಈ ವಿಶಾಲ ವೇದಿಕೆಯ ಭಾಗವಾಗಿವೆ. ಕೆಲವು ನೌಕರರ ಫೆಡರೇಷನ್‌ಗಳು ಕೆಲವು ಕೇಂದ್ರ ಕಾರ್ಮಿಕ ಸಂಘಟನೆಗಳಿಗಿಂತ ಹೆಚ್ಚಿನ ಸದಸ್ಯತ್ವವನ್ನು ಹೊಂದಿವೆ. ಸಿಐಟಿಯು ಸ್ಥಾಪನೆ ಆದ 1970 ರಿಂದಲೂ 'ಐಕ್ಯತೆ ಮತ್ತು ಹೋರಾಟ' ಎಂಬ ಘೋಷಣೆಯೊಂದಿಗೆ ಕಾರ್ಮಿಕ ವರ್ಗದ ಐಕ್ಯತೆ ಮೂಲ ಉದ್ದೇಶವಾಗಿ ಶ್ರಮಿಸುತ್ತಿದೆ. 1971 ರಲ್ಲೇ ಅಂದಿನ ಕೇಂದ್ರ ಸರಕಾರವು ಸಿಐಟಿಯು ಸಂಘಟನೆಯನ್ನು ಮೂಲೆಗುಂಪು ಮಾಡುವ ಉದ್ದೇಶದೊಂದಿಗೆ ಎನ್.ಸಿ.ಟಿ.ಯು. (National Council of Trade Unions) ಸರಕಾರದ ಬಾಲಂಗೋಚಿ ವೇದಿಕೆಯನ್ನು ರಚಿಸಿತು. ಆ ಸಂದರ್ಭದಲ್ಲಿ ಯು.ಟಿ.ಯು.ಸಿ. (United Council of Trade Unions) ವರ್ಗ ಹೋರಾಟದ ನೆಲೆಯಲ್ಲಿ ಪರ್ಯಾಯ ವೇದಿಕೆಯನ್ನು ರಚನೆ ಮಾಡಿ ಹೋರಾಟದ ಕಹಳೆಯನ್ನು ಮೊಳಗಿಸಲಾಯಿತು. ಆ ನಂತರ 1978 ರಲ್ಲಿ ಜನತಾ ಸರಕಾರ ಕೇಂದ್ರದಲ್ಲಿ ಅಧಿಕಾರದಲ್ಲಿರುವಾಗ ಕೈಗಾರಿಕಾ ಸಂಬಂಧಗಳ ಕಾನೂನಿಗೆ ಕಾರ್ಮಿಕ ವಿರೋಧಿ ಅಂಶಗಳನ್ನು ಅಳವಡಿಸಲು ಹವಣಿಸಿದಾಗ ರಾಷ್ಟ್ರ ಮಟ್ಟದಲ್ಲಿ ಹೆಚ್.ಎಂ.ಎಸ್. ಹೊರತು ಪಡಿಸಿ ದೇಶವ್ಯಾಪಿ ಪ್ರಚಾರಾಂದೋಲವನ್ನು ಹಮ್ಮಿಕೊಳ್ಳಲಾಯಿತು. ಅದರ ಮುಂದುವರೆದ ಭಾಗವಾಗಿ ಎನ್.ಸಿ.ಸಿ.(National Campaign Committee) ಯನ್ನು ಐ.ಎನ್.ಟಿ.ಯು.ಸಿ, ಎಐಟಿಯುಸಿ ಹಾಗೂ ಬಿ.ಎಂ.ಎಸ್. ಒಳಗೊಂಡು 1981 ರಲ್ಲಿ ಬಾಂಬೆಯಲ್ಲಿ ಬೃಹತ್ ಸಮಾವೇಶವನ್ನು ಸಂಘಟಿಸಿ ದೇಶದ ಸ್ವಾತಂತ್ರ್ಯ ನಂತರದ ಮೊದಲ ರಾಷ್ಟ್ರೀಯ ಮುಷ್ಕರವನ್ನು 1982ರಲ್ಲಿ ಯಶಸ್ವಿಯಾಗಿ ನಡೆಸಲಾಯಿತು. ಆನಂತರ 1985 ರಲ್ಲಿ ಕೇಂದ್ರ ಸಾರ್ವಜನಿಕ ಕ್ಷೇತ್ರದ ಕಾರ್ಮಿಕರ ಐಕ್ಯ ವೇದಿಕೆಯನ್ನು ಸಿಪಿಎಸ್‌ಟಿಯು (Committee of Public Sector Trade Unions) ಸ್ಥಾಪಿಸಿ ನಿರಂತರ ಕ್ರಿಯಾಶೀಲವಾದ ಚಟುವಟಿಕೆಗಳನ್ನು ನಡೆಸಲಾಗುತ್ತಿದೆ. ಮುಂದುವರೆದು 1991 ರಲ್ಲಿ ಭಾರತದ ಕಾರ್ಮಿಕ ಸಂಘಗಳ ಪ್ರಾಯೋಜಕ ಸಮಿತಿ ವಿಶಾಲ ತಳಹದಿಯಲ್ಲಿ ರಚಿಸಲಾಯಿತು. ಕಾರ್ಮಿಕ ಸಂಘಟನೆಗಳ ಐಕ್ಯತೆ ಮಾತ್ರವಲ್ಲದೇ ಇತರ ಜನ ವಿಭಾಗಳ ಸಂಘಟನೆಗಳನ್ನು ಒಳಗೊಂಡು 1993 ರಲ್ಲಿ ಸಾಮೂಹಿಕ ಸಂಘಟನೆಗಳ ರಾಷ್ಟ್ರೀಯ ವೇದಿಕೆಯನ್ನು (ಎನ್.ಪಿ.ಎಂ.ಒ)ರೂಪಿಸಲಾಯಿತು. ಹೀಗೆ ಸಿಐಟಿಯು ಧ್ಯೇಯ ವಾಕ್ಯವಾದ ಐಕ್ಯತೆ ಹಾಗೂ ಹೋರಾಟದ ಕಣ್ಣೋಟದಂತೆ ನಿರಂತರವಾಗಿ ವಿಶಾಲವಾದ ಐಕ್ಯ ವೇದಿಕೆಗಳನ್ನು ರೂಪಿಸುವಲ್ಲಿ ಸಿಐಟಿಯು ಮುಂಚೂಣಿ ಪಾತ್ರವನ್ನು ನಿರ್ವಹಿಸುತ್ತಾ ಬಂದಿದೆ. ಈ ಪ್ರಕ್ರಿಯೆಯನ್ನು ಮತ್ತಷ್ಟು ಬಲಗೊಳಿಸುತ್ತಾ ಕಾರ್ಮಿಕ ಸಂಘಗಳ ಮಹಾ ಒಕ್ಕೂಟ (Confederation of Trade Unions) ರಚನೆಯ ದಿಶೆಯಲ್ಲಿ ಮುನ್ನಡೆಯುವ ಪ್ರಯತ್ನಗಳನ್ನು ನಡೆಸಲಾಗುತ್ತಿದೆ.



ಈ ಹಿನ್ನಲೆಯಲ್ಲಿ ದೇಶದ ಎಲ್ಲಾ ಕೇಂದ್ರ ಕಾರ್ಮಿಕ ಸಂಘಟನೆಗಳು ದಿ. 7-9-2011 ರಂದು ನವದೆಹಲಿಯಲ್ಲಿ ರಾಷ್ಟ್ರೀಯ ಸಮಾವೇಶವನ್ನು ನಡೆಸಿ ಕಾರ್ಮಿಕರ ಜ್ವಲಂತ ಸಮಸ್ಯೆಗಳ ಪರಿಹಾರಕ್ಕಾಗಿ ಸರಕಾರದ ಮೇಲೆ ಒತ್ತಡ ಹೇರಲು 8ನೇ ನವೆಂಬರ್ 2011 ರಂದು ದೇಶ ವ್ಯಾಪಿಯಾಗಿ ಬೃಹತ್ ಪ್ರಮಾಣದಲ್ಲಿ ಜೈಲ್ ಭರೋ / ಸತ್ಯಾಗ್ರಹ ನಡೆಸಲು ಕರೆ ನೀಡಲಾಗಿದೆ. ಕೇಂದ್ರ ಕಾರ್ಮಿಕರ ಸಂಘಟನೆಗಳು ಈಗಾಗಲೇ ಗುರುತಿಸಿರುವ 5 ಪ್ರಮುಖ ಬೇಡಿಕೆಗಳಾದ

1.ಬೆಲೆ ಏರಿಕೆ ನಿಯಂತ್ರಣ
2. ಉದ್ಯೋಗ ಸೃಷ್ಟಿಸಲು ಹಾಗೂ ರಕ್ಷಿಸಲು ಪ್ಯಾಕೇಜ್
3. ಕಾರ್ಮಿಕ ಕಾನೂನುಗಳ ಕಠಿಣವಾದ ಅನುಷ್ಠಾನ
4 ಸಾರ್ವತ್ರಿಕವಾಗಿ ಎಲ್ಲಾ ಕಾರ್ಮಿಕರಿಗೂ ಸಾಮಾಜಿಕ ಭದ್ರತೆ ಒದಗಿಸಲು ಹಣಕಾಸು ಸಂಪನ್ಮೂಲ ಒದಗಿಸುವ ಕ್ರಮಗಳು ಹಾಗೂ 5. ಲಾಭದಾಯಕ ಸಾರ್ವಜನಿಕ ಕ್ಷೇತ್ರದ ಕೈಗಾರಿಕೆಗಳಲ್ಲಿ ಷೇರು ಮಾರಾಟ ಮಾಡದಿರಲು ಒತ್ತಾಯಿಸುತ್ತಾ ಬರಲಾಗಿದೆ.

ಮೇಲಿನ ಪ್ರಮುಖ ಬೇಡಿಕೆಗಳ ಜೊತೆಗೆ ಕೂಡಲೇ ಕೆಳಗಿನ ಬೇಡಿಕೆಗಳ ಕುರಿತು ತುರ್ತು ಕ್ರಮಗಳನ್ನು ವಹಿಸಲು

ಸರಕಾರವನ್ನು ಒತ್ತಾಯಿಸಲು ಕರೆ ನೀಡಲಾಗಿದೆ.

1. ಖಾಯಂ ಹಾಗೂ ನಿರಂತರ ಸ್ವರೂಪದ ಕೆಲಸಗಳನ್ನು ಗುತ್ತಿಗೆ ನೀಡದಂತೆ ಹಾಗೂ ಅಲ್ಲಿಯವರೆಗೆ ಕೈಗಾರಿಕೆ/ಸಂಸ್ಥೆಯಲ್ಲಿ ಖಾಯಂ ಕಾರ್ಮಿಕರಿಗೆ ನೀಡಲಾಗುವ ವೇತನ/ಸೌಲಭ್ಯಗಳ ದರದಲ್ಲಿಯೇ ಗುತ್ತಿಗೆ ಕಾರ್ಮಿಕರಿಗೂ ಸಿಗುವಂತೆ ಕ್ರಮ ವಹಿಸತಕ್ಕದ್ದು.
2 ಷೆಡ್ಯೂಲ್‌ಗಳ ವ್ಯತ್ಯಾಸವಿಲ್ಲದೆ, ಸೂಚ್ಯಂಕ ಆಧಾರಿತವಾಗಿ ತಿಂಗಳಿಗೆ 10,000 ರೂಪಾಯಿಗಳಿಗೆ ಕಡಿಮೆ ಇಲ್ಲದಂತೆ ಶಾಸನಬದ್ಧ ಕನಿಷ್ಟ ಕೂಲಿಯನ್ನು ನಿಗದಿಪಡಿಸಲು ಕನಿಷ್ಟ ಕೂಲಿ ಕಾಯಿದೆಯನ್ನು ತಿದ್ದುಪಡಿ ಮಾಡಿ ಅದರ ವ್ಯಾಪ್ತಿಯನ್ನು ಸಾರ್ವತ್ರಿಕಗೊಳಿಸತಕ್ಕದ್ದು.
3 ಬೋನಸ್, ಭವಿಷ್ಯನಿಧಿ ಪಾವತಿಗೆ ಇರುವ ಎಲ್ಲಾ ಮಿತಿ ಹಾಗೂ ಅರ್ಹತೆಗಳನ್ನು ತೆಗೆದು ಹಾಕಿ ಗ್ರಾಚ್ಯುಯಿಟಿ ಮೊತ್ತವನ್ನು ಏರಿಸತಕ್ಕದ್ದು.
4 ಎಲ್ಲರಿಗೂ ನಿವೃತ್ತಿ ವೇತನ ನೀಡತಕ್ಕದ್ದು.
5 45 ದಿನಗಳ ಒಳಗಾಗಿ ಕಾರ್ಮಿಕ ಸಂಘಟನೆಗಳ ಕಡ್ಡಾಯ ನೊಂದಣಿ ಮತ್ತು ಐಎಲ್‌ಓನ 87 ಹಾಗೂ 98ನೇ ಸಮಾವೇಶಗಳನ್ನು ಈ ಕೂಡಲೇ ದೃಢೀಕರಿಸತಕ್ಕದ್ದು.

ಕರ್ನಾಟಕ ರಾಜ್ಯದಲ್ಲೂ ಕೇಂದ್ರ ಕಾರ್ಮಿಕ ಸಂಘಟನೆಗಳು ಐತಿಹಾಸಿಕ ಐಕ್ಯತೆಯೊಂದಿಗೆ ನೀಡಿರುವ ರಾಷ್ಟ್ರೀಯ ಕರೆಯನ್ನು ಯಶಸ್ವಿಗೊಳಿಸಲು ಸಿದ್ಧತೆಗಳು ನಡೆದಿವೆ. ಜೈಲ್ ಭರೋ ಚಳುವಳಿಯ ಯಶಸ್ಸು ಆಳುವ ಕಾರ್ಮಿಕ ವಿರೋಧಿ ಸರ್ಕಾರಗಳಿಗೆ ಒಂದು ಎಚ್ಚರಿಕೆಯ ಗಂಟೆಯಾಗಬೇಕಾಗಿದೆ.

JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027
Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA
(MARXIST) and Printed at : Kriya Prakashana, 12, 18th Cross, S.R.Nagar, BANGALORE - 560 027 Karnataka (State) and Published at BANGALORE
No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor : S.Y.GURUSHANTH